ಜನಶಕ್ತಿ

ದುಡಿಯುವ ಜನರ ಪ್ರಾಣ ಮಿತ್ರ

ಕನ್ನಡ ವಾರಪತ್ರಿಕೆ

ಹಿರಿಯ ಕಮ್ಯೂನಿಸ್ಟ್ ಸಂಗಾತಿ

ವಿ.ಎನ್.ಸುಬ್ರಮಣಿ ಲಾಲ್ ಸಲಾಂ!



ಸಂಪುಟ 12 | ಸಂಚಿಕೆ 42 | ಅಕ್ಟೋಬರ್ 15-21, 2018 | ಪುಟ 16 | ರೂ. 10/-

web: www.janashakthi.co.in e-mail : js_weekly@yahoo.com



ಸಂವಿಧಾನ ಮತ್ತು ಕಾರ್ಮಿಕರು


ಭಾರತ-ಅಮೆರಿಕ ಮಾತುಕತೆ



2+2 =0

ಬಿಜೆಪಿ ಸೋಲಿಸಲು ಆದ್ಯತೆ





ಶಬರಿಮಲೆ: ಹಿಂದೆ ಸರಿಯಬಾರದು

ಎಂ.ಜೆ.ಅಕ್ಬರ್ ರಾಜಿನಾಮೆ ಕೊಡಬೇಕು



ಗುಜರಾತ್ : ಹಿಂದೂ 'ಪರದೇಸಿ'ಗಳಿಗೆ ಗೇಟ್‌ಪಾಸ್

ಸಿಪಿಐ(ಎಂ) ಕೇಂದ್ರ ಸಮಿತಿ ಹೇಳಿಕೆ

ತ್ರಿಪುರಾದಲ್ಲಿ ಫ್ಯಾಸಿಸ್ಟ್-ಮಾದರಿ ದಾಳಿಗಳು : ಪತ್ರಿಕಾ ಸ್ವಾತಂತ್ರ್ಯದ ಮೇಲೆ ಸರ್ವಾಧಿಕಾರಶಾಹೀ ಹಲ್ಲೆ

ತ್ರಿಪುರಾದಲ್ಲಿ ಬಿಜೆಪಿ–ಐಪಿಎಫ್‌ಟಿ ಸರಕಾರ ಅಧಿಕಾರ ವಹಿಸಿಕೊಂಡಂದಿನಿಂದ ಸಿಪಿಐ(ಎಂ) ಮೇಲೆ ಫ್ಯಾಸಿಸ್ಟ್ ಮಾದರಿ ಹಲ್ಲೆಗಳು ಮುಂದುವರೆಯುತ್ತಿವೆ. ಸ್ಥಳೀಯ ಸಂಸ್ಥೆಗಳ ಪಚುನಾವಣೆಗಳಲ್ಲಿ ಪ್ರತಿಪಕ್ಷಗಳ ಅಭ್ಯರ್ಥಿಗಳು ನಾಮಪತ್ರ ಸಲ್ಲಿಸದಂತೆ ಹಿಂಸಾತ್ಮಕವಾಗಿ ತಡೆದುದರಿಂದ 96% ಸೀಟುಗಳನ್ನು ಬಿಜೆಪಿ ಸ್ಪಧೆಯಿಲ್ಲದೇ ಗೆದ್ದಿದೆ. ಇದು ಬಿಜೆಪಿ/ಆರೆಸ್ಸೆಸ್ ನ ನಿಜಸ್ವರೂಪ ಎಂದು ಸಿಪಿಐ(ಎಂ) ಕೇಂದ್ರ ಸಮಿತಿ ಖಂಡಿಸಿದೆ.

ಸಿಪಿಐ(ಎಂ)ನೊಂದಿಗೆ ಸಹಕಾರವಿರುವ, ಮತ್ತು ರಾಜ್ಯದ ರಡನೇ ಅತಿ ಹೆಚ್ಚು ಪ್ರಸಾ ಇರುವ ದಿನಪತ್ರಿಕೆ 'ದೇಶೇರ್ ಕಥಾ'ದ ನೋದಾವಣೆಯನ್ನು ರದ್ದು ಮಾಡಿರುವುದು ಪತ್ರಿಕಾ ಸ್ವಾತಂತ್ರ್ಯದ ಮೇಲೆ ಒಂದು ಸರ್ವಾಧಿಕಾರಶಾಹಿ ಹಲ್ಲೆ ಎಂದಿರುವ ಕೇಂದ್ರ ಸಮಿತಿ, ಇದನ್ನು ಖಂಡಿಸುತ್ತ, ಇದಕ್ಕೆ ವ್ಯಾಪಕ ವಿರೋಧ ಹೆಚ್ಚುತ್ತಿರುವುದನ್ನೂ ಗಮನಿಸಿದೆ. ಮೋದಿ ಸರಕಾರದ ಸುದ್ದಿ ಮತ್ತು ಪ್ರಸಾರ ಮಂತ್ರಾಲಯ ಕೂಡಲೇ ನೋಂದಾವಣೆ ರದ್ದು ಮಾಡಿರುವ ಆದೇಶವನ್ನು ಹಿಂತೆಗೆದುಕೊಳ್ಳಬೇಕೆಂದು ಕೇಂದ್ರ ಸಮಿತಿ ಆಗ್ರಹಿಸಿದೆ.

ಅಕ್ಟೋಬರ್ 6 ರಿಂದ 8ರ ವರೆಗೆ ನವದೆಹಲಿಯಲ್ಲಿ ನಡೆದ ಕೇಂದ್ರ ಸಮಿತಿ ದೇಶದಲ್ಲಿನ ಕಳೆದ ಮೂರು ತಿಂಗಳ ಆಗುಹೋಗುಗಳನ್ನು ಚರ್ಚಿಸಿದ ನಂತರ ಹೊರಡಿಸಿದ ಹೇಳಿಕೆಯಲ್ಲಿ ಈ ಆಗ್ರಹವನ್ನು ಮಾಡಲಾಗಿದೆ.

ಕೇಂದ್ರ ಸಮಿತಿ ಕೇರಳದಲ್ಲಿ ನೆರೆ ಪರಿಹಾರ ಮತ್ತು ಮರುವಸತಿ ಹಾಗೂ ಶಬರಿಮಲೆ ತೀರ್ಪು, ಗುಜರಾತಿನಲ್ಲಿ ಬೇರೆ ಭಾಷಿಕರ ಮೇಲೆ ಹಲ್ಲೆಗಳು, ಅಸ್ಸಾಂನಲ್ಲಿ ಎನ್ ಆರ್ ಸಿ ಸ್ಥಿತಿಗತಿ, ರಫೇಲ್ ಹಗರಣ, ಕಾಶ್ಮೀರದಲ್ಲಿನ ಪರಿಸ್ಥಿತಿ ಮತ್ತು ಚುನಾವಣಾ ತಂತ್ರಗಳನ್ನು ಕುರಿತಂತೆ ಮಾಡಿದ ಚರ್ಚೆಗಳ ಬಗ್ಗೆಯೂ ಈ ಕೇಂದ್ರ ಸಮಿತಿ ಹೇಳಿಕೆ ಪ್ರಸ್ತಾಪ ಮಾಡಿದೆ.

ಕೇರಳದಲ್ಲಿ ನೆರೆ ಪರಿಹಾರ
–ಎಲ್ ಡಿ ಎಫ್ ಸರಕಾರದ ಪ್ರಶಂಸಾರ್ಹ ಕೆಲಸ:

ಕೇರಳದಲ್ಲಿ ಎಲ್ ಡಿ ಎಫ್ ಸರಕಾರ, ಪಕ್ಷ ಮತ್ತು ಜನತೆ ಇತ್ತೀಚಿನ ವಿಧ್ವಂಸಕಾರಿ ಪ್ರವಾಹ ಉಂಟುಮಾಡಿದ ಕಷ್ಟ–ನಷ್ಟಗಳನ್ನು ಒಂದಾಗಿ ನಿಂತು ಎದುರಿಸಿರುವ ಬಗ್ಗೆ ನ್ನತ ಮೆಚ್ಚುಗೆಯನ್ನು ಕೇಂದ್ರ ಸಮಿತಿ ವ್ಯಕ್ತಪಡಿಸಿದೆ. ಎಲ್ ಡಿ ಎಫ್ ಸರಕಾರ ಸಂಕಟಕ್ಕೀಡಾದವರ ಪುನರ್ವಸತಿಗೆ ಮಾತ್ರವಲ್ಲ, ಒಂದು ನವ ಕೇರಳವನ್ನು ಕಟ್ಟುವ ಪ್ರಯತ್ನ ಮಾಡುತ್ತಿದೆ. ದೇಶದಾದ್ಯಂತ ಮತ್ತು ಹೊರದೇಶಗಳಲ್ಲೂ ರಾಜಕೀಯ ಭಿನ್ನತೆಗಳನ್ನೆಲ್ಲ ಮೀರಿ ನಿಂತು ಮುಖ್ಯಮಂತ್ರಿಗಳ ಸಂಕಟ ಪರಿಹಾರ ನಿಧಿಗೆ ಅತ್ಯುತ್ಸಾಹದಿಂದ ಕೊಡುಗೆಗಳನ್ನು ನೀಡಿರುವುದನ್ನೂ ಕೇಂದ್ರ ಸಮಿತಿ ಪ್ರಶಂಸಿಸಿದೆ.

ಶಬರಿಮಲೆ ತೀರ್ಪು–
ಆರೆಸ್ಸೆಸ್/ಬಿಜೆಪಿಗೆ ಕಾಂಗ್ರೆಸ್ ನೆರವು!

ಶಬರಿಮಲೆ ದೇವಸ್ಥಾನಕ್ಕೆ ಮಹಿಳೆಯರ ಪ್ರವೇಶ ಕುರಿತು ಸುಪ್ರಿಂ ಕೋರ್ಟ್ ತೀರ್ಪನ್ನು ಸಿಪಿಐ(ಎಂ) ಕೇಂದ್ರ ಸಮಿತಿ ಸ್ವಾಗತಿಸಿದೆ. ಇದು ಮಹಿಳೆಯರ ಸಮಾನ ಹಕಲ್ಕುಗಳನ್ನು ಎತ್ತಿ ಹಿಡಿದಿದೆ. ಬಿಜೆಪಿ ಮತ್ತು ಆರೆಸ್ಸೆಸ್ ಸರ್ವೋಚ್ಚ ನ್ಯಾಯಾಲಯದ ತೀರ್ಪನ್ನು ವಿರೋಧಿಸುತ್ತಿವೆ ಮತ್ತು ಕೇರಳದಲ್ಲಿ ಅದರ ವಿರುದ್ಧ ಮದು ಚಳುವಳಿಯನ್ನು ನಡೆಸುತ್ತಿವೆ. ಈ ತೀರ್ಪು ಒಂದು ಪ್ರಗತಿಪರ ಹೆಜ್ಜೆ ಎಂದು ಕಾಂಗ್ರೆಸ್‌ನ ಅಖಿಲ ಭಾರತ ಮುಖಂಡತ್ವ ಸ್ವಾಗತಿಸಿದರೂ, ಅದರ ಕೇರಳ ಘಟಕ ಅದರ ಜಾರಿಯನ್ನು ವಿರೋಧಿಸುತ್ತಿದೆ ಮತ್ತು ಬಿಜೆಪಿ ಯೊಂದಿಗೆ ಪ್ರತಿಭಟಿಸುತ್ತಿದೆ. ಇಂತಹ ನಿಲುವಿನ ಮೂಲಕ ಕಾಂಗ್ರೆಸ್ ಸಂವಿಧಾನದಲ್ಲಿ ಪ್ರತಿಷ್ಠಾಪಿಸಿರುವ ಜಾತ್ಯತೀತ–ಪ್ರಜಾಸತ್ತಾತ್ಮಕ ಮೌಲ್ಯಗಳನ್ನು ಮತ್ತು ಸಮಾನತೆಯ ಹಕ್ಕಿನ ವಿರುದ್ಧ ಆರೆಸ್ಸೆಸ್–ಬಿಜೆಪಿ ಕೂಟದ ಪ್ರಚಾರಕ್ಕೆ ನೆರವು ನೀಡುತ್ತದಷ್ಟೇ ಎಂದು ಕೇಂದ್ರ ಸಮಿತಿ ಟೀಕಿಸಿದೆ.

ಗುಜರಾತಿಯೇತರರ ಮೇಲೆ ಹಿಂಸಾಚಾರವನ್ನು ನಿಲ್ಲಿಸದ ಬಿಜೆಪಿ ರಾಜ್ಯ ಸರಕಾರ:

ಗುಜರಾತಿನಲ್ಲಿ ಉತ್ತರ ರಾಜ್ಯಗಳಿಂದ, ಮುಖ್ಯವಾಗಿ ಬಿಹಾರ ಮತ್ತು ಉತ್ತರಪ್ರದೇಶದಿಂದ ಬಂದು ಕೆಲಸ ಮಾಡುತ್ತಿರುವ ಜನಗಳ ಮೇಲೆ ಹಿಂಸಾಚಾರವನ್ನು ಹರಿಯ ಬಿಟ್ಟಿರುವುದನ್ನು ಕೇಂದ್ರ ಸಮಿತಿ ಖಂಡಿಸಿದೆ. ಒಬ್ಬ ವಲಸೆ ಕಾರ್ಮಿಕ ಒಂದು ಮಗುವಿನ ಮೇಲೆ ಅತ್ಯಾಚಾರ ನಡೆಸಿರುವುದಾಗಿ ಹೇಳಲಾಗಿದೆ, ಇದು ಖಂಡನಾರ್ಹ. ಈ ಹಿಂಸಾಚಾರದಿಂದಾಗಿ ಸಾವಿರಾರು ಕಾರ್ಮಿಕರು ತಮ್ಮ ಕುಟುಂಬಗಳೊಮದಿಗೆ ಪ್ರಾಣ ಭೀತಿಯಿಂದ ಓಡಿ ಹೋಗುತ್ತಿದ್ದಾರೆ.

ಗುಜರಾತಿನ ಬಿಜೆಪಿ ರಾಜ್ಯ ಸರಕಾರ ಹಿಂಸಾಚಾರವನ್ನು ತಡೆಯುವ ಬದಲು ಪರಿಸ್ಥಿತಿ ಗಂಭೀರಗೊಳ್ಳಲು ಅವಕಾಶ ಮಾಡಿ ಕೊಡುತ್ತಿದೆ. ರಾಜ್ಯದಲ್ಲಿನ ಠಾಕುರ್ ಸೇನೆ ಭಾವೋದ್ರೇಕಗಳನ್ನು ಬಡಿದೆಬ್ಬಿಸುತ್ತಿದ್ದು ಇದು ಗುಜರಾತಿಯೇತರರಲ್ಲಿ ಅಭದ್ರತೆಯ ಭಾವನೆಯನ್ನು ಹೆಚ್ಚಿಸುತ್ತಿದೆ. ಇದು ದೂಷಣೀಯ ಎಂದು ಸಿಪಿಐ(ಎಂ) ಕೇಂದ್ರ ಸಮಿತಿ ಹೇಳಿದೆ.

ಅಸ್ಸಾಂ ನಲ್ಲಿ ಎನ್ ಆರ್ ಸಿ– ಪ್ರತಿಕೂಲಕರ ಕ್ರಮ:

ಅಸ್ಸಾಂ ನಲ್ಲಿ ರಾಷ್ಟ್ರೀಯ ಪೌರರ ರಿಜಿಸ್ಟರ್(ಎನ್ ಆರ್ ಸಿ)ನಲ್ಲಿ ಹೆಸರು ಬಿಟ್ಟು ಹೋದವರ ಅಪೀಲುಗಳ ಬಗ್ಗೆ ಸುಪ್ರಿಂ ಕೋಟರ್ಟ್ ಆದೇಶಗಳಂತೆ ನಿರ್ಧರಿಸಬೇಕಾಗಿದೆ. ಯಾವ ಭಾರತೀಯರನ್ನೂ ನೋಂದಾಯಿಸದೆ ಇರಬಾರದು ಎಂಬ ಸಿಪಿಐ(ಎಂ)ನ ನಿಲುವನ್ನು ಪುನರುಚ್ಚರಿಸಿರುವ ಕೇಂದ್ರ ಸಮಿತಿ, ಈಗ ಸುಪ್ರಿಂ ಕೋರ್ಟ್ ಪೌರತ್ವವನ್ನು ಸಾಬೀತು ಪಡಿಸಲು ಆಧಾರವಾಗುವ ಐದು ದಸ್ತಾವೇಜುಗಳನ್ನು ಹಿಂದಕ್ಕೆ ಪಡೆದಿರುವುದನ್ನು ಮಂಜೂರು ಮಾಡಿರುವುದು ದುರದೃಷ್ಟಕರ ಎಂದಿದೆ. ಇದರಿಂದ ಬಹಳಷ್ಟು ಜನಗಳಿಗೆ ತೊಂದರೆಯಾಗುತ್ತದೆ. ಆದ್ದರಿಂದ ಈ ದಸ್ತಾವೇಜುಗಳನ್ನು ಮತ್ತೆ ಸೇರಿಸಬೇಕು ಎಂದು ಕೇಂದ್ರ ಸಮಿತಿ ಹೇಳಿದೆ.

ರಫೆಲ್ ಹಗರಣ, ಚಮಚಾ ಬಂಡವಾಳಶಾಹಿ ಮತ್ತು ರಾಜಕೀಯ ಭ್ರಷ್ಟಾಚಾರ :

ಮಹಾ ರಫೆಲ್ ಹಗರಣದಿಂದ ಗಮನವನ್ನು ಬೇರೆಡೆಗೆ ತಿರುಗಿಸಲು ಮೋದಿ ಸರಕಾರ ಎಷ್ಟೇ ಪ್ರಯತ್ನಿಸಿದರೂ ನಂತರದ ಎಲ್ಲ ಬೆಳವಣಿಗೆಗಳೂ ಈ ವ್ಯವಹಾರ ನಡೆಸಿದ್ದು ಪ್ರಧಾನ ಮಂತ್ರಿಯ ಚಮಚಾ ಬಂಡವಾಳಶಾಹಿ ಗೆಳೆಯನ ಪ್ರಯೋಜನಕ್ಕಾಗಿ ಎಂಬದನ್ನು ದೃಢಪಡಿಸಿವೆಯಷ್ಟೇ. ಈ ಪ್ರಕ್ರಿಯೆಯಲ್ಲಿ

ಪುಟ 14 ನೋಡಿ

17 ನೇ ಲೋಕಸಭಾ ಚುನಾವಣೆಗಳಲ್ಲಿ ಸಿಪಿಐ(ಎಂ) ಮುಖ್ಯ ಗುರಿ

2019ರಲ್ಲಿ ನಡೆಯಲಿರುವ ಸಾರ್ವತ್ರಿಕ ಚುನಾವಣೆಗಳಲ್ಲಿ

1. ಬಿಜೆಪಿ ಮೈತ್ರಿಕೂಟವನ್ನು ಸೋಲಿಸುವುದು,
2. ಲೋಕಸಭೆಯಲ್ಲಿ ಸಿಪಿಐ(ಎಂ) ಮತ್ತು ಎಡಪಕ್ಷಗಳ ಬಲವನ್ನು ಹೆಚ್ಚಿಸಿಕೊಳ್ಳುವುದು ಮತ್ತು
3. ಕೇಂದ್ರದಲ್ಲಿ ಒಂದು ಪರ್ಯಾಯ ಜಾತ್ಯತೀತ ಸರಕಾರ ರಚನೆಯಾಗುವಂತೆ ಮಾಡುವುದು

ಸಿಪಿಐ(ಎಂ)ನ ಪ್ರಮುಖ ಕೆಲಸವಾಗಿರುತ್ತದೆ ಎಂದು ಸಿಪಿಐ(ಎಂ) ಕೇಂದ್ರ ಸಮಿತಿ ನಿರ್ಧರಿಸಿದೆ.

ಸಾರ್ವತ್ರಿಕ ಚುನಾವಣೆಗಳ ಹಿನ್ನೆಲೆಯಲ್ಲಿ ಪ್ರಸಕ್ತ ಸಂದರ್ಭವನ್ನು ಚರ್ಚಿಸುತ್ತ, ಮೋದಿ ಸರಕಾರ ನಡೆಸಿರುವ ನಾಲ್ಕು ಅಲಗುಗಳ ದಾಳಿ ತೀವ್ರಗೊಳ್ಳುತ್ತಿದೆ ಎಂದು ಕೇಂದ್ರ ಸಮಿತಿ ವಿಶ್ಲೇಷಿಸಿದೆ. ಇದರಲ್ಲಿ ಬೆಲೆಯೇರಿಕೆ, ಅದರಲ್ಲೂ ಪೆಟ್ರೋಲಿಯಂ ಉತ್ಪನ್ನಗಳ ಬೆಲೆಯೇರಿಕೆಗಳು, ನಿರುದ್ಯೋಗ, ಆಳಗೊಳ್ಳುತ್ತಿರುವ ಕೃಷಿ ಸಂಕಟ ಬಹುಪಾಲು ಜನಗಳ ಬದುಕಿನ ಪರಿಸ್ಥಿತಿಗಳನ್ನು, ಜೀವನಾಧಾರಗಳನ್ನು ತೀವ್ರವಾಗಿ ಬಾಧಿಸಿವೆ.

ಕೋಮುವಾದಿ ಧ್ರುವೀಕರಣ ತೀಕ್ಷ್ಣಗೊಳ್ಳುತ್ತಿದ್ದು ದ್ವೇಷ, ಹಿಂಸಾಚಾರ ಮತ್ತು ಭಯೋತ್ಪಾದನೆಯ ವಾತಾವರಣ ಹರಡುತ್ತಿದೆ. ಇದರಲ್ಲಿ ಬಹಳಷ್ಟು ಮುಗ್ಧ ಜೀವಗಳ, ಮುಖ್ಯವಾಗಿ ದಲಿತರು ಮತ್ತು ಮುಸ್ಲಿಮರ ಜೀವಗಳ ಬಲಿಯಾಗಿದೆ. ಸರ್ವಾಧಿಕಾರಶಾಹಿ ದಾಳಿಗಳು ಜನಗಳ ಪ್ರಜಾಪ್ರಭುತ್ವ ಹಕ್ಕುಗಳ ಮೇಲೆ, ಸಂಸದೀಯ ಸಂಸ್ಥೆಗಳನ್ನು ಮತ್ತು ಪ್ರಾಧಿಕಾರಗಳನ್ನು ಶಿಥಿಲಗೊಳಿಸುವ ಮೂಲಕ ತೀವ್ರಗೊಳ್ಳುತ್ತಿವೆ.

ಭಾರತವನ್ನು ಅಮೆರಿಕ ಸಂಯುಕ್ತ ಸಂಸ್ಥಾನಗಳ ಕಿರಿಯ ಸಾಮರಿಕ ಮಿತ್ರನ ಸ್ಥಾನಕ್ಕೆ ಇಳಿಸಿ ನಮ್ಮ ದೇಶದ ಸಾರ್ವಭೌಮತೆಯನ್ನು, ಮತ್ತು ಒಂದು ಸ್ವತಂತ್ರ ವಿದೇಶಾಂಗ ಧೋರಣೆಯೊಂದಿಗೆ ಅಭಿವೃದ್ಧಿಶೀಲ ದೇಶಗಳ ಹಕ್ಕುಗಳನ್ನು ಪ್ರತಿಪಾದಿಸುತ್ತ ಬಂದಿರುವ ನಮ್ಮ ದೇಶದ ಸ್ಥಾನಮಾನವನ್ನು ಶಿಥಿಲಗೊಳಿಸಲಾಗುತ್ತಿದೆ.

ಈ ಹಿನ್ನೆಲೆಯಲ್ಲಿ ಮುಂಬರುವ 17ನೇ ಲೋಕಸಭಾ ಚುನಾವಣೆಗಳಲ್ಲಿ ಮತ್ತು ವಿಧಾನಸಭಾ ಚುನಾವಣೆಗಳಲ್ಲಿ ಬಿಜೆಪಿ ಮತ್ತು ಅದರ ಮಿತ್ರಪಕ್ಷಗಳನ್ನು ಸೋಲಿಸುವುದು ಸಿಪಿಐ(ಎಂ) ಮತ್ತು ಎಡ ಹಾಗೂ ಪ್ರಜಾಪ್ರಭುತ್ವವಾದಿ ಶಕ್ತಿಗಳ ಪ್ರಮುಖ ಕಾರ್ಯಭಾರ ಎಂಬ ಪಕ್ಷದ 22ನೇ ಮಹಾಧಿವೇಶನದಲ್ಲಿ ರೂಪಿಸಿಕೊಂಡ ತಿಳುವಳಿಕೆಯನ್ನು ಸಿಪಿಐ(ಎಂ) ಕೇಂದ್ರ ಸಮಿತಿ ಪುನರುಚ್ಚರಿಸಿದೆ. ಅದರ ಪ್ರಕಾರ ಮೇಲೆ ಹೇಳಿದ ಮೂರು ಕಾರ್ಯಭಾರಗಳನ್ನು ಈಡೇರಿಸಲು ಅದು ನಿರ್ಧರಿಸಿದೆ.

ವಿಧಾನಸಭಾ ಚುನಾವಣೆಗಳು: ರಾಜಸ್ಥಾನ, ಮಧ್ಯಪ್ರದೇಶ ಮತ್ತು ಛತ್ತೀಸ್‌ಗಡ ರಾಜ್ಯ ವಿಧಾನಸಭಾ ಚುನಾವಣೆಗಳಲ್ಲಿ ಸಿಪಿಐ(ಎಂ) ತನ್ನ ವಿಧಾನಸಭಾ ಪ್ರಾತಿನಿಧ್ಯವನ್ನು ಬಲಪಡಿಸಿಕೊಳ್ಳುವ ಗುರಿಯಿಂದ ಕೆಲವು ಕ್ಷೇತ್ರಗಳಲ್ಲಿ ಸ್ಪರ್ಧಿಸುತ್ತದೆ. ಉಳಿದ ಕ್ಷೇತ್ರಗಳಲ್ಲಿ ಬಿಜೆಪಿಯನ್ನು ಸೋಲಿಸಲು ಪ್ರಚಾರ ಮಾಡುತ್ತದೆ ಎಂದು ಕೇಂದ್ರ ಸಮಿತಿ ಹೇಳಿಕೆ ತಿಳಿಸಿದೆ.

ತೆಲಂಗಾಣದಲ್ಲಿ ಆಳುವ ತೆಲಂಗಾಣ ರಾಷ್ಟ್ರ ಸಮಿತಿ(ಟಿಆರೆಸ್) ಮತ್ತು ಬಿಜೆಪಿಯನ್ನು ಸೋಲಿಸಲು ಸಿಪಿಐ(ಎಂ) ಕೆಲಸ ಮಾಡುತ್ತದೆ. ಇದನ್ನು ಸಾಧಿಸಲು ಸಿಪಿಐ(ಎಂ) ಒಂದು ಪ್ರಮುಖ ಭಾಗವಾಗಿರುವ ಬಹುಜನ ಎಡರಂಗ(ಬಿಎಲ್‌ಎಫ್) ಹಲವು ಕ್ಷೇತ್ರಗಳಲ್ಲಿ ಸ್ಪರ್ಧಿಸಲಿದೆ. ಈ ಬಗ್ಗೆ ಬಿಎಲ್‌ಎಫ್ ನ ಅಂಗ ಪಕ್ಷಗಳೊಂದಿಗೆ ಸಮಾಲೋಚನೆಗಳು ನಡೆಯುತ್ತಿವೆ. ಸಿಪಿಐ(ಎಂ) ತನ್ನ ಚುನಾವಣಾ ಚಿಹ್ನೆಯ ಮೇಲೆ ಸ್ಪರ್ಧಿಸುವ 12 ಅಭ್ಯರ್ಥಿಗಳ ಮೊದಲ ಪಟ್ಟಿಯನ್ನು ಪ್ರಕಟಿಸಿದೆ. ಇನ್ನೊಂದು ಪಟ್ಟಿ ಸದ್ಯದಲ್ಲೇ ಪ್ರಕಟವಾಗಲಿದೆ.

ರಫೆಲ್ ಹಗರಣ, ಕಾರ್ಪೊರೇಟ್ ಸುಸ್ತಿ ಸಾಲಗಳ ಮೇಲೆ ಪ್ರಚಾರಾಂದೋಲನ

ನೋಟು ರದ್ದತಿಯ ಎರಡನೇ ವಾರ್ಷಿಕದ ಆಚರಣೆ: ಕೇಂದ್ರ ಸಮಿತಿ ಕರೆ

ಆಗಸ್ಟ್ 9 ರ ಜೈಲ್ ಭರೋ ಮತ್ತು ಸಪ್ಟಂಬರ್ 5ರ ಸಂಸದ್ ಚಲೋ ಕಾರ್ಯಾಚರಣೆಗಳಲ್ಲಿ ಕಂಡುಬಂದ ರೈತರು, ಕಾರ್ಮಿಕರು ಮತ್ತು ಕೃಷಿ ಕೂಲಿಕಾರರ ಅಣಿನೆರಿಕ ಬಹಳ ಮಹತ್ವದ್ದಾಗಿದೆ ಎಂದು ಗಮನಿಸಿದ ಸಿಪಿಐ(ಎಂ) ಕೇಂದ್ರ ಸಮಿತಿ ಅಕ್ಟೋಬರ್ 28 ರಿಂದ 30 ರ ವರೆಗಿನ ಕಿಸಾನ್ ಲಾಂಗ್ ಮಾರ್ಚ್ ಮತ್ತು ನವಂಬರ್ 3ರಂದು "ಎಲ್ಲಿದೆ ನನ್ನ ಉದ್ಯೋಗ' ಎಂದು ಮೋದಿ ಸರಕಾರವನ್ನು ಪ್ರಶ್ನಿಸುವ ಯುವಜನರ ದಿಲ್ಲಿ ನಡೆ, ಜನ ಏಕತಾ ಜನ ಅಧಿಕಾರ್ ಆಂದೋಲನದ ಕರೆಗಳು ಹಾಗೂ ಜನವರಿ 8 ಮತ್ತು 9 ರಂದು ಅಖಿಲ ಭಾರತ ಸಾರ್ವತ್ರಿಕ ಮುಷ್ಕರದ ಕೇಂದ್ರ ಕಾರ್ಮಿಕ ಸಂಘಗಳ ಕರೆಗಳಿಗೆ ಬೆಂಬಲ ವ್ಯಕ್ತಪಡಿಸಲು ಕೇಂದ್ರ ಸಮಿತಿ ನಿರ್ಧರಿಸಿದೆ.

ಮೋದಿ ಸರಕಾರದ ಭ್ರಷ್ಟಾಚಾರ ಮತ್ತು ಚಮಚಾ ಬಂಡವಾಳಶಾಹಿಯನ್ನು ಬಯಲಿಗೆಳೆಯುವ ಪ್ರಚಾರಾಂದೋಲನದ ಭಾಗವಾಗಿ ಸಿಪಿಐ(ಎಂ) ಇತರ ಎಡಪಕ್ಷಗಳೊಂದಿಗೆ ಒಂದು ದೇಶವ್ಯಾಪಿ ಪ್ರಚಾರ ನಡೆಸಲಿದೆ. ಇದರಲ್ಲಿ ರಫೇಲ್ ಹಗರಣ ಮತ್ತು ಕಾರ್ಪೊರೇಟ್ ಸುಸ್ತಿ ಸಾಲಗಳು ಹಾಗೂ ಇಂತಹ ಹಗರಣಕೋರರಿಗೆ ಮೋದಿ ಸರಕಾರದ ಕೃಪಾಪೋಷಣೆಯನ್ನು ಎತ್ತಿ ತೋರಿಸಲಾಗುವುದು ಎಂದು ಕೇಂದ್ರ ಸಮಿತಿ ಹೇಳಿದೆ.

ನವಂಬರ್‌ನಲ್ಲಿ ನೋಟುರದ್ಧತಿಯ ಎರಡನೇ ವಾರ್ಷಿಕದ ಆಚರಣೆಯನ್ನು ದೇಶಾದ್ಯಂತ ಪ್ರತಿಭಟನಾ ಕಾರ್ಯಾಚರಣೆಗಳ ಮೂಲಕ ಇತರ ಎಡಪಕ್ಷಗಳೊಂದಿಗೆ ನಡೆಸಲಾಗುವುದು ಎಂದೂ ಅದು ಹೇಳಿದೆ.

ಎಡ, ಪ್ರಜಾಪ್ರಭುತ್ವವಾದಿ ಮತ್ತು ಜಾತ್ಯತೀತ ಶಕ್ತಿಗಳೊಂದಿಗೆ ಕೋಮುವಾದದ ವಿರುದ್ಧ ಪ್ರಚಾರವನ್ನು ಮತ್ತಷ್ಟು ಬಲಗೊಳಿಸಲಾಗುವುದು ಎಂದೂ ಸಿಪಿಐ(ಎಂ) ಕೇಂದ್ರ ಸಮಿತಿ ಹೇಳಿದೆ.

ಎಂ.ಜೆ.ಅಕ್ಬರ್ ತಕ್ಷಣ ರಾಜೀನಾಮೆ ಕೊಡಬೇಕು

–ಸಿಪಿಐ(ಎಂ) ಪೊಲಿಟ್‌ಬ್ಯುರೊ ಮತ್ತು ಎಐಡಿಡಬ್ಲ್ಯುಎ ಆಗ್ರಹ

ಏಳು ಪತ್ರಕರ್ತೆಯರು ಮುಂದೆ ಬಂದು ಕೇಂದ್ರ ಸರಕಾರದಲ್ಲಿ ರಾಜ್ಯಮಂತ್ರಿಯಾಗಿರುವ ಎಂ ಜೆ ಅಕ್ಬರ್ ವಿವಿಧ ಪತ್ರಿಕೆಗಳಲ್ಲಿ ಸಂಪಾದಕರಾಗಿದ್ದಾಗ ಅವರಿಂದ ಅನುಭವಿಸಿದ ಲೈಂಗಿಕ ಕಿರುಕುಳಗಳು ಮತ್ತು ಅವರ ಒಪ್ಪಲಾಗದ ವರ್ತನೆಯನ್ನು ನೆನಪಿಸಿಕೊಂಡಿದ್ದಾರೆ.

ಇವು ಗಂಭೀರ ಆಪಾದನೆಗಳಾಗಿರುವುದರಿಂದ ಎಂ ಜೆ ಅಕ್ಬರ್ ಮಂತ್ರಿಯಾಗಿ ಮುಂದುವರೆಯುವುದು ಅಸಮರ್ಥನೀಯ. ಅವರು ತಕ್ಕಣ ತಮ್ಮ ಮಂತ್ರಿ ಸ್ಥಾನಕ್ಕೆ ರಾಜೀನಾಮೆ ನೀಡಬೇಕು ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಆಗ್ರಹಿಸಿದೆ.

ಮಾನಸಿಕ ಯಾತನೆ ಅನುಭವಿಸಿರುವವರಿಗೆಲ್ಲ ಬಲವಾದ ಬೆಂಬಲ–ಎಐಡಿಡಬ್ಲ್ಯುಎ

ಕೇಂದ್ರ ಸಚಿವ ಎಂ.ಜೆ.ಅಕ್ಬರ್ ರವರ ಮೇಲೆ ಲೈಂಗಿಕ ಕಿರುಕುಳದ ಆರೋಪ ಇರುವುದರಿಂದ ತಕ್ಷಣ ರಾಜಿನಾಮೆ ಕೊಡಬೇಕೆಂದು ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆ(ಎಐಡಿಡಬ್ಲ್ಯುಎ) ಆಗ್ರಹಿಸಿದೆ. ಏಶ್ಯನ್ ಏಜ್ ಪತ್ರಿಕೆಯಲ್ಲಿ ತರಬೇತಿಗಾಗಿ ಸೇರಿದ ಘಝಾಲಾ ವಹಾಬ್ ಆಗ ಅಲ್ಲಿ ಸಂಪಾದಕರಾಗಿದ್ದ ಅಕ್ಬರ್ ಅವರಿಂದ ಎಂತಹ ಲೈಂಗಿಕ ಲೂಟಿಗಳನ್ನು ಎದುರಿಸಬೇಕಾಯಿತು ಎಂಬದು ಅತ್ಯಂತ ಆಘಾತಕಾರಿ. ಈಗ ಬಿಜೆಪಿ ಮಂತ್ರಿಯಾಗಿರುವ ಈತನ ಮೇಲೆ ಈಗಾಗಲೇ ಆರು ಜನ ಪತ್ರಕರ್ತೆಯರು ಆರೋಪ ಹೊರಿಸಿದ್ದಾರೆ. ಇವರೆಲ್ಲರಿಗೂ ಹಾಗೂ 'ಮಿಟೂ' ಪ್ರಚಾರಾಂದೋಲನದಲ್ಲಿ ತಾವು ಅನುಭವಿಸಿದ ಭೀಕರ ಶೋಷಣೆಗಳನ್ನು ಧೈರ್ಯದಿಂದ ಬೆಳಕಿಗೆ ತಂದಿರುವ ಎಲ್ಲರಿಗೂ ಎಐಡಿಡಬ್ಲ್ಯುಎ ಬಲವಾದ ಬೆಂಬಲ ಸೂಚಿಸಿದೆ.

ಮೋದಿ ಸರ್ಕಾರ ಈ ಮಹಿಳೆಯರ ನೋವು ಸಂಕಟಗಳಿಗೆ ಕಿವುಡಾಗಿ ವಹಿಸಿರುವ ಮೌನಕ್ಕೆ ಸಂಘಟನೆ ಆಕ್ರೋಶ ವ್ಯಕ್ತಪಡಿಸಿದೆ.

ತಕ್ಷಣವೇ ತನಿಖೆಗೆ ಆದೇಶ ನೀಡುವ ಮೂಲಕ ನ್ಯಾಯದ ಪರವಾಗಿ ನಿಲ್ಲಬೇಕಲ್ಲದೇ, ವಿಳಂಬ ನೀತಿ ಅನುಸರಿಸಿ ಮಹಿಳೆಯರ ಮೇಲೆ ದೌರ್ಜನ್ಯ ನಡೆಸುವವರಿಗೆ ಬೆಂಬಲ ನೀಡುವಂತೆ ವರ್ತಿಸಬಾರದೆಂದು ಅದು ಒತ್ತಾಯಿಸಿದೆ.

ಲೈಂಗಿಕ ಹಿಂಸಾಚಾರದ ವಿರುದ್ಧ ಮತ್ತು ಈ ಬಿಜೆಪಿ ಸಚಿವರ ರಾಜಿನಾಮೆಗೆ ಒತ್ತಾಯಿಸಿ ದೇಶಾದ್ಯಂತ ಪ್ರತಿಭಟನೆ ನಡೆಸಲು ತನ್ನ ಘಟಕಗಳಿಗೆ ಎಐಡಿಡಬ್ಲ್ಯುಎ ಕರೆ ನೀಡಿದೆ.

ಸಂಪಾದಕೀಯ

ಬಿಜೆಪಿಯನ್ನು ಸೋಲಿಸುವುದು ಆದ್ಯತೆಯಾಗಬೇಕು

ತನ್ನ ಜನಪ್ರಿಯತೆ ಹಾಗೂ ವಿಶ್ವಾಸಾರ್ಹತೆ ಕಳೆದುಕೊಳ್ಳುತ್ತಿರುವುದರ ಬಗ್ಗೆ ಅರಿವಿರುವ ಬಿಜೆಪಿ, ವಿರೋಧ ಪಕ್ಷಗಳ ಐಕ್ಯತೆ ಮುರಿಯುವುದಕ್ಕೆ ಆದ್ಯತೆ ಕೊಡುತ್ತಿದೆ. ಉಪಚುನಾವಣೆ ನಡೆಯುವ ಎರಡು ವಿಧಾನ ಸಭಾ ಮತ್ತು ಒಂದು ಲೋಕಸಭಾ ಕ್ಷೇತ್ರದಲ್ಲಿ ಬಿಜೆಪಿಗೆ ಗೆಲ್ಲುವ ಸಾಧ್ಯತೆ ಕಡಿಮೆಯಿದ್ದರೂ, ಅದು ಯಾವುದೇ ಚುನಾವಣೆಯಲ್ಲಿ ಮಾಡುವಂತೆ ಹೇಗಾದರೂ ಗೆಲ್ಲುವ ಛಲದಿಂದ ಕಣಕ್ಕೆ ಇಳಿದಿದೆ. ಆ ಮೂಲಕ ಕಾಂಗ್ರೆಸ್–ಜೆಡಿ(ಎಸ್) ಗಳಿಗೆ ನಿರ್ದಿಷ್ಟವಾಗಿ ಮತ್ತು ಸೆಕ್ಯುಲರ್ ಶಕ್ತಿಗಳಿಗೆ ಒಟ್ಟಾರೆಯಾಗಿ ರಾಜಕೀಯ ಸವಾಲು ಎಸೆದಿದೆ. ಈ ಸವಾಲನ್ನು ಎದುರಿಸಿ ಬಿಜೆಪಿಯನ್ನು ಸೋಲಿಸುವುದು ಕಾಂಗ್ರೆಸ್–ಜೆಡಿ(ಎಸ್) ಹಾಗೂ ಎಲ್ಲಾ ಎಡ–ಪ್ರಜಾಸತ್ತಾತ್ಮಕ ಶಕ್ತಿಗಳಿಗೆ ಆದ್ಯತೆಯ ಕೆಲಸವಾಗಬೇಕಾಗಿದೆ.

ಐದು ರಾಜ್ಯಗಳಲ್ಲಿ ವಿಧಾನಸಭಾ ಚುನಾವಣೆಗಳ ಜತೆ ಕರ್ನಾಟಕದ ಮೂರು ಲೋಕಸಭಾ ಮತ್ತು ಎರಡು ವಿಧಾನಸಭಾ ಕ್ಷೇತ್ರಗಳಲ್ಲೂ ಚುನಾವಣಾ ಆಯೋಗ ಉಪಚುನಾವಣೆ ಘೋಷಿಸಿದೆ. ಅಕ್ಟೋಬರ್ 16ರಂದು ನಾಮಪತ್ರ ಸಲ್ಲಿಕೆಗೆ ಕೊನೆದಿನ, ನವೆಂಬರ್ 3 ರಂದು ಚುನಾವಣೆ, ನವೆಂಬರ್ 6ರಂದು ಮತ ಎಣಿಕೆ ನಡೆಯಲಿದೆ. ಎರಡು (ರಾಮನಗರ, ಚನ್ನಪಟ್ಟಣ) ವಿಧಾನಸಭಾ ಕ್ಷೇತ್ರಗಳಲ್ಲಿ ಸ್ಪರ್ಧಿಸಿ ಗೆದ್ದು, ಎಚ್. ಡಿ.ಕುಮಾರಸ್ವಾಮಿ ಅವರು ರಾಮನಗರ ಬಿಟ್ಟು ಕೊಟ್ಟದ್ದರಿಂದ ಆ ಸ್ಥಾನ ತೆರವಾಗಿದೆ. ಜಮಖಂಡಿಯ ಕಾಂಗ್ರೆಸ್ ಶಾಸಕ ಸಿದ್ದುನ್ಯಾಮಗೌಡ ಪಾಟೀಲರ್ ನಿಧನದಿಂದ ಆ ಸ್ಥಾನ ತೆರವಾಗಿದೆ. 2018ರ ವಿಧಾನಸಭೆ ಚುನಾವಣೆಯಲ್ಲಿ ಸ್ಪರ್ಧಿಸಿ ಗೆದ್ದಿದ್ದ ಸಂಸದರ – ಬಿ.ಎಸ್. ಯಡಿಯೂರಪ್ಪ (ಶಿವಮೊಗ್ಗ), ಬಿ.ಶ್ರೀರಾಮುಲು (ಬಳ್ಳಾರಿ), ಮತ್ತು ಸಿ.ಎಸ್.ಪುಟ್ಟರಾಜು (ಮಂಡ್ಯ) – ರಾಜೀನಾಮೆಗಳಿಂದ ಮೂರು ಲೋಕಸಭಾ ಸ್ಥಾನಗಳು ತೆರವಾಗಿದ್ದವು. ವಿಧಾನಸಭೆಯ ತೆರವಾದ ಸ್ಥಾನಗಳಿಗೆ ಚುನಾವಣೆ ನಡೆಯುವುದು ನಿರೀಕ್ಷಿತವಾಗಿತ್ತು. ಆದರೆ ಲೋಕಸಭಾ ಚುನಾವಣೆ ಹತ್ತಿರದಲ್ಲೇ ಇರುವುದರಿಂದ ಆ ಸ್ಥಾನಗಳಿಗೆ ಚುನಾವಣೆ ಅನಿರೀಕ್ಷಿತವಾಗಿತ್ತು. ಅದರಲ್ಲೂ ನೆರೆಯ ಆಂಧ್ರ ಪ್ರದೇಶದಲ್ಲಿ ಐದು ವೈ.ಎಸ್.ಆರ್. ಕಾಂಗ್ರೆಸ್ ಸದಸ್ಯರುಗಳ ರಾಜಿನಾಮೆಯಿಂದ ತೆರವಾದ ಸ್ಥಾನಗಳಿಗೆ ಚುನಾವಣೆ ನಡೆಸದಿರಲು ತೀರ್ಮಾನಿಸಿರುವುದು, ಚುನಾವಣಾ ಆಯೋಗ ಬಿಜೆಪಿ ಕೇಂದ್ರ ಸರಕಾರದ ರಾಜಕೀಯ ಒತ್ತಡ/ನಿರ್ದೇಶನದಿಂದ ಹಾಗೆ ಮಾಡಿದೆ ಎಂದು ಮಾಧ್ಯಮಗಳಿಂದಲೂ ವಿರೋಧ ಪಕ್ಷಗಳಿಂದಲೂ ಆಪಾದನೆಗೆ ಒಳಗಾಗಿದೆ.

ಗುಜರಾತಿನ ವಿಧಾನಸಭಾ ಚುನಾವಣೆಯಿಂದ ಆರಂಭಿಸಿ ಹಲವು ಪ್ರಕರಣಗಳಲ್ಲಿ ಆಯೋಗದ ಹಲವು ಕ್ರಮಗಳು ನಿಷ್ಪಕ್ಷಪಾತವಾಗಿರದೆ, ಬಿಜೆಪಿ ಕೇಂದ್ರ ಸರಕಾರದ ರಾಜಕೀಯ ಒತ್ತಡ/ನಿರ್ದೇಶನಕ್ಕೆ ಒಳಗಾದಂತೆ ಮೇಲುನೋಟಕ್ಕೆ ಅನಿಸುವಂತೆ ಇತ್ತು. ಅದೇ ದಿನ 12 ಗಂಟೆಗೆ ಚುನಾವಣಾ ಘೋಷಣೆಯನ್ನು 3 ಗಂಟೆಯ ವರೆಗೆ ಮುಂದೂಡಿದ್ದು, ಮೋದಿ ಅವರ ರ್‍ಯಾಲಿ ಮುಗಿಯುವರೆಗೆ ಕಾಯಲು "ರಾಜಕೀಯ ಒತ್ತಡ/ನಿರ್ದೇಶನದಿಂದ" ಎಂಬ ಟೀಕೆ, ಅದನ್ನು ಇನ್ನೂ ಬಲಪಡಿಸುವಂತೆ ಇತ್ತು. ಮಾಧ್ಯಮಗಳಿಂದಲೂ ವಿರೋಧ ಪಕ್ಷಗಳಿಂದಲೂ ಟೀಕೆಗೆ ಆಯೋಗ ಸ್ಪಷ್ಟೀಕರಣ ಕೊಟ್ಟಿದೆ. ಸಂಬಂಧಿತ (ಜನತೆಯ ಪ್ರಾತಿನಿಧ್ಯ ಕಾನೂನು 1951ರ ಸೆಕ್ಷನ್ 151) ಕಾನೂನು ಪ್ರಕಾರ ತೆರವಾದಾಗ, ಆ ಸ್ಥಾನದ ಅವಧಿ 1 ವರ್ಷಕ್ಕಿಂತ ಹೆಚ್ಚು ಇರಬೇಕು. ಅದನ್ನು 6 ತಿಂಗಳೊಳಗೆ ಭರ್ತಿ ಮಾಡಬೇಕು. ಲೋಕಸಭಾಧ ಅವಧಿ ಜೂನ್ 3, 2019 ರಂದು ಕೊನೆಗೊಳ್ಳುತ್ತದೆ. ವೈ.ಎಸ್.ಆರ್. ಕಾಂಗ್ರೆಸಿನ ಆಂಧ್ರ ಸಂಸದರು ರಾಜಿನಾಮೆ ಕೊಟ್ಟಾಗ (ಎಪ್ರಿಲ್ 6, 2018) ಉಳಿದ ಅವಧಿ ಒಂದು ವರ್ಷಕ್ಕಿಂತ ಹೆಚ್ಚು ಇದ್ದರೂ, ಅದು ಸ್ಪೀಕರ್ ನಿಂದ ಅಂಗೀಕೃತವಾದಾಗ (ಜೂನ್ 6, 2018) ಇರಲಿಲ್ಲ! ಕರ್ನಾಟಕದ ಸಂಸದರು ಮೇ 18–21 ರಾಜೀನಾಮೆ ಕೊಟ್ಟಿದ್ದು, ಇನ್ನೂ ಒಂದು ವರ್ಷದ ಅವಧಿ ಇತ್ತು!. ಅದನ್ನು ಕಾನೂನು ಪ್ರಕಾರ 6 ತಿಂಗಳೊಳಗೆ (ಅಂದರೆ ನವೆಂಬರ್ 21, 2018 ರೊಳಗೆ)) ಭರ್ತಿ ಮಾಡಲಾಗುತ್ತಿದೆ. ಇದು ಆಯೋಗದ ಸ್ಪಷ್ಟೀಕರಣ.


ಆಯೋಗದ ಕ್ರಮ ತಾಂತ್ರಿಕವಾಗಿ ಸರಿಯಿದೆ. ರಾಜಿನಾಮೆ ಅಂಗೀಕಾರಕ್ಕೆ ಸ್ಪೀಕರ್ 2 ತಿಂಗಳು ವಿಳಂಬ ಮಾಡಿದ್ದಕ್ಕೆ ಮತ್ತು ಕರ್ನಾಟಕದ ಚುನಾವಣೆಯನ್ನು 5 ತಿಂಗಳು ವಿಳಂಬ ಮಾಡಿ ನಡೆಸುತ್ತಿರುವ ಸಂದರ್ಭ ಬಿಜೆಪಿಗೆ ರಾಜಕೀಯವಾಗಿ ಅನುಕೂಲಕರವಾಗಿದ್ದರೆ, ಅದಕ್ಕೆ ಚುನಾವಣಾ ಆಯೋಗದ ಮೇಲೆ ಆಪಾದನೆ ಹಾಕುವಂತಿಲ್ಲ. ಬಿಜೆಪಿಯ ನಾಯಕತ್ವದ ರಾಜಕೀಯ "ದೂರದೃಷ್ಟಿ"ಯನ್ನು ಮೆಚ್ಚಬೇಕು ಅಷ್ಟೇ!! ಕೇವಲ 6 ತಿಂಗಳು ಅವಧಿ (ಬೇಗ ಚುನಾವಣೆ ಅವಧಿ ಆದರೆ ಅದೂ ಇರುವುದಿಲ್ಲ!) ಇರುವಾಗ ಉಪಚುನಾವಣೆ ನಡೆಸುವುದರ ವಿರುದ್ಧ ಸಾರ್ವಜನಿಕ ಹಿತಾಸಕ್ತಿ ಅರ್ಜಿ ಸಲ್ಲಿಸಲಾಗಿದೆ. ಅದೇನೇ ಇರಲಿ, ಆಂಧ್ರ ಪ್ರದೇಶದಲ್ಲಿ ಲೋಕಸಭಾ ಉಪಚುನಾವಣೆ ನಡೆದರೆ ಬಿಜೆಪಿಗೆ ರಾಜಕೀಯವಾಗಿ ಅನಾನುಕೂಲ, ಏಕೆಂದರೆ ಅಲ್ಲಿ ಅದಕ್ಕೆ ತೆಲುಗು ದೇಸಂ ಜತೆ 'ಡೈವೋರ್ಸ್' ನಂತರ ರಾಜಕೀಯ ಮಿತ್ರರಿಲ್ಲ. ಗೆಲ್ಲುವ ಸಾಧ್ಯತೆಯಿಲ್ಲವೇ ಇಲ್ಲ. ಬರಿಯ ಮುಖಭಂಗ ಅಷ್ಟೇ. ಆದರೆ, ಕರ್ನಾಟಕದಲ್ಲಿ 3 ರಲ್ಲಿ 2 ಸ್ಥಾನಗಳು (ಶಿವಮೊಗ್ಗ, ಬಳ್ಳಾರಿ) ಅದರ ಭದ್ರಕೋಟೆ. ಈ ಉಪಚುನಾವಣೆಯನ್ನು ಬಳಸಿ ಕಾಂಗ್ರೆಸ್–ಜೆಡಿ(ಎಸ್) ಮೈತ್ರಿ ಒಡೆಯಲು ಸಾಧ್ಯವಾದರೆ, ಅದೇ ದೊಡ್ಡ ರಾಜಕೀಯ ಲಾಭ. ತನ್ನ ಜನಪ್ರಿಯತೆ ಹಾಗೂ ವಿಶ್ವಾಸಾರ್ಹತೆ ಕಳೆದುಕೊಳ್ಳುತ್ತಿರುವುದರ ಬಗ್ಗೆ ಅರಿವಿರುವ ಬಿಜೆಪಿ, ವಿರೋಧ ಪಕ್ಷಗಳ ಐಕ್ಯತೆ ಮುರಿಯುವುದಕ್ಕೆ ಆದ್ಯತೆ ಕೊಡುತ್ತಿದೆ. ಉಳಿದ ಸ್ಥಾನಗಳಲ್ಲಿ ಒಂದೆರಡನ್ನು ಗೆಲ್ಲಲು ಸಾಧ್ಯವಾದರೆ ಅದು ಬೋನಸ್. ಏನಿಲ್ಲದಿದ್ದರೂ ಕಾಂಗ್ರೆಸ್–ಜೆಡಿ(ಎಸ್) ಮೈತ್ರಿಯ ಪರಿಣಾಮ ಲೋಕಸಭಾ ಚುನಾವಣೆಯ ಮೇಲೆ ಏನು ಎಂಬುದಕ್ಕೆ 'ಟೆಸ್ಟ್ ಡೋಸ್' ಆಗಬಲ್ಲದು. ಉಪಚುನಾವಣೆ ನಡೆಯುವ ಎರಡು ವಿಧಾನ ಸಭಾ ಮತ್ತು ಒಂದು ಲೋಕಸಭಾ ಕ್ಷೇತ್ರದಲ್ಲಿ ಬಿಜೆಪಿಗೆ ಗೆಲ್ಲುವ ಸಾಧ್ಯತೆ ಕಡಿಮೆಯಿದ್ದರೂ, ಅದು ಯಾವುದೇ ಚುನಾವಣೆಯಲ್ಲಿ ಮಾಡುವಂತೆ ಹೇಗಾದರೂ ಗೆಲ್ಲುವ ಛಲದಿಂದ ಕಣಕ್ಕೆ ಇಳಿದಿದೆ. ಆ ಮೂಲಕ ಕಾಂಗ್ರೆಸ್–ಜೆಡಿ(ಎಸ್) ಗಳಿಗೆ ನಿರ್ದಿಷ್ಟವಾಗಿ ಮತ್ತು ಸೆಕ್ಯುಲರ್ ಶಕ್ತಿಗಳಿಗೆ ಒಟ್ಟಾರೆಯಾಗಿ ರಾಜಕೀಯ ಸವಾಲು ಎಸೆದಿದೆ. ಈ ಸವಾಲನ್ನು ಎದುರಿಸಿ ಬಿಜೆಪಿಯನ್ನು ಸೋಲಿಸುವುದು ಕಾಂಗ್ರೆಸ್–ಜೆಡಿ(ಎಸ್) ಹಾಗೂ ಎಲ್ಲಾ ಎಡ–ಪ್ರಜಾಸತ್ತಾತ್ಮಕ ಶಕ್ತಿಗಳಿಗೆ ಆದ್ಯತೆಯ ಕೆಲಸವಾಗಬೇಕಾಗಿದೆ.

ಆದರೆ ತಳಮಟ್ಟದ ರಾಜಕೀಯ ವಾಸ್ತವ ಅಷ್ಟೇನೂ ಆಶಾದಾಯಕವಾಗಿಲ್ಲ. ಲೋಕಸಭಾ ಕ್ಷೇತ್ರಗಳಲ್ಲಿ ಶಿವಮೊಗ್ಗದಲ್ಲಿ ಯಡಿಯೂರಪ್ಪ ಮಗ ಬಿ.ವೈ.ರಾಘವೇಂದ್ರ ಮತ್ತು ಬಳ್ಳಾರಿಯಲ್ಲಿ ಬಿ.ಶ್ರೀರಾಮುಲು ಸಹೋದರಿ ಶಾಂತಾ ಹಾಗೂ ಜಮಖಂಡಿ ವಿಧಾನ ಸಭಾ ಕ್ಷೇತ್ರಕ್ಕೆ ಮಾಜಿ ಶಾಸಕ ಶ್ರೀಕಾಂತ ಕುಲಕರ್ಣಿ ಇವರುಗಳನ್ನು ಅಭ್ಯರ್ಥಿಗಳಾಗಿ ಬಿಜೆಪಿ ಈಗಾಗಲೇ ಅಂತಿಮಗೊಳಿಸಿದೆ. ಅಭ್ಯರ್ಥಿಯ ಅಭಾವವನ್ನು ಎದುರಿಸುತ್ತಿದ್ದ ರಾಮನಗರದಲ್ಲಿ ವಿಧಾನ ಪರಿಷತ್ ಕಾಂಗ್ರೆಸ್ ಸದಸ್ಯ ಸಿ.ಎಂ.ಲಿಂಗಪ್ಪ ಅವರ ಮಗ ಎಲ್. ಚಂದ್ರಶೇಖರ್ ಮೇಲೆ "ಆಪರೇಶನ್' ನಡೆಸಿ ಬಿಜೆಪಿಗೆ ಸೇರಿಸಿಕೊಂಡಿದೆ. ಕಳೆದ ವಿಧಾನಸಭೆ ಚುನಾವಣೆಯಲ್ಲಿ ರಾಮನಗರ ಕ್ಷೇತ್ರದಿಂದ ಚಂದ್ರಶೇಖರ್ ಕಾಂಗ್ರೆಸ್ ಟಿಕೆಟ್ ಆಕಾಂಕ್ಷಿ ಆಗಿದ್ದರು. ಟಿಕೆಟ್‌ಗಾಗಿ ಅವರು ಹಾಗೂ ಇಕ್ಬಾಲ್ ಹುಸೇನ್ ನಡುವೆ ತೀವ್ರ ಪೈಪೋಟಿ ನಡೆದಿತ್ತು. ಅಂತಿಮವಾಗಿ ಪಕ್ಷವು ಇಕ್ಬಾಲ್ ಅವರಿಗೆ ಅವಕಾಶ ನೀಡಿತ್ತು. ಬಿಜೆಪಿ ಈ 'ಆಪರೇಶನ್' ಮೂಲಕ, ಕಾಂಗ್ರೆಸ್–ಜೆಡಿ(ಎಸ್) ಮೈತ್ರಿ ಒಡೆಯುವ ಹಾಗೂ ಜೆಡಿ–ಎಸ್ ಜತೆ ಮೈತ್ರಿ ಮಾಡಿಕೊಳ್ಳಬಾರದು ಎಂದು ವಾದಿಸುತ್ತಿರುವ ಸ್ಥಳೀಯ ಕಾಂಗ್ರೆಸ್ ನಾಯಕರ ಬೆಂಬಲ ಬಳಸಿ ಗೆಲ್ಲುವ ಪ್ರಯತ್ನ ಮಾಡುತ್ತಿದೆ. ಇದೇ ರೀತಿ ಮಂಡ್ಯ ಲೋಕಸಭಾ ಕ್ಷೇತ್ರವನ್ನು ಜೆಡಿಎಸ್‌ಗೆ ಬಿಟ್ಟುಕೊಟ್ಟಿರುವ ಬಗ್ಗೆ ವಿರೋಧ ವ್ಯಕ್ತಪಡಿಸಿದ ಮಾಜಿ ಸಚಿವ ಚಲುವರಾಯಸ್ವಾಮಿ ಅವರನ್ನು ಸೆಳೆದು ಕಣಕ್ಕೆ ಇಳಿಸಲು ಬಿಜೆಪಿ ಪ್ರಯತ್ನಿಸಿದೆ. ಆದರೆ ಅದು ಸಫಲವಾಗದ ಕಾರಣ, ವಿಧಾನಪರಿಷತ್ ಮಾಜಿ ಸದಸ್ಯ ಅಶ್ವತ್ಥನಾರಾಯಣ ಅವರನ್ನು ಅಭ್ಯರ್ಥಿ ಮಾಡಲಿದೆ. ಹೀಗೆ ಎಲ್ಲಾ ಐದು ಕ್ಷೇತ್ರಗಳಲ್ಲಿ ಬಿಜೆಪಿ ಅಭ್ಯರ್ಥಿ ಗುರುತಿಸಿ ರಾಜಕೀಯ ಓಟದಲ್ಲಿ ಮುಂದಿದೆ.

ಆದರೆ ಕಾಂಗ್ರೆಸ್–ಜೆಡಿ(ಎಸ್) ಮೈತ್ರಿಕೂಟ ಈ ಚುನಾವಣೆಗಳಲ್ಲಿ ಮುಂದುವರೆಯುತ್ತದೆ. ಜಂಟಿ ಪ್ರಚಾರವನ್ನೂ ಕೈಗೊಳ್ಳಲಾಗುತ್ತದೆ ಮತ್ತು ಐದೂ ಸ್ಥಾನಗಳನ್ನೂ ಗೆಲ್ಲುವುದು ನಮ್ಮ ಗುರಿ ಎಂಬ ಧೀರ ಹೇಳಿಕೆಗಳನ್ನು ಬಿಟ್ಟರೆ, ಬಿಜೆಪಿಯ ಈ ರಾಜಕೀಯ ಸವಾಲನ್ನು ಎದುರಿಸುವ ದೃಢತೆ ತೋರಿಸಿಲ್ಲ. ಯಾವ ಸ್ಥಾನ ಯಾರು ಸ್ಪರ್ಧಿಸುವುದು ಎಂಬುದರ ಬಗ್ಗೆ ಉನ್ನತ ನಾಯಕತ್ವದಲ್ಲಿ ಸ್ಥೂಲ ಸಹಮತ ಇದ್ದರೂ, ಕೆಳ ಹಂತಗಳಲ್ಲಿ ಅದರ ತೀವ್ರ ಕೊರತೆ ಇದೆ. ಶಿವಮೊಗ್ಗ ಕ್ಷೇತ್ರದ ಬಗ್ಗೆ ಉನ್ನತ ಮಟ್ಟದಲ್ಲೂ ಪೂರ್ಣ ಸಹಮತವಿಲ್ಲ. ತಾನು ಸ್ಪರ್ಧಿಸಿದರೆ ಗೆಲ್ಲುವ ಸಾಧ್ಯತೆ ಹೆಚ್ಚು ಎಂದು ಜೆಡಿ–ಎಸ್ ವಾದಿಸಿದೆಯೆಂದು ಹೇಳಲಾಗಿದೆ. ರಾಮನಗರ ವಿಧಾನಸಭೆಯಲ್ಲಿ ಅನಿತಾ ಕುಮಾರಸ್ವಾಮಿ ಜೆಡಿ–ಎಸ್ ಅಭ್ಯರ್ಥಿಯಾಗಿರುತ್ತಾರೆ ಎಂಬುದನ್ನು ಬಿಟ್ಟರೆ ಯಾವ ಕ್ಷೇತ್ರದ ಬಗೆಗೂ ಇನ್ನೂ ಸ್ಪಷ್ಟತೆಯಿಲ್ಲ. ಮಂಡ್ಯ ಲೋಕಸಭೆ ಕ್ಷೇತ್ರ ಅಭ್ಯರ್ಥಿ ಆಯ್ಕೆ ವಿಚಾರ ಜೆಡಿಎಸ್‌ನೊಳಗೆ ಗೊಂದಲ ಹುಟ್ಟುಹಾಕಿದೆ. ಐ.ಆರ್.ಎಸ್ ಹುದ್ದೆ ತ್ಯಜಿಸಿ ರಾಜಕೀಯಕ್ಕೆ ಬಂದಿರುವ ಲಕ್ಷ್ಮಿ ಅಶ್ವಿನ್ ಗೌಡ ಟಿಕೆಟ್ ಆಕಾಂಕ್ಷಿ. ಆದರೆ, ಅವರ ವಿರುದ್ಧ ಇನ್ನೊಬ್ಬ ಸ್ಪರ್ಧಾಕಾಂಕ್ಷಿ, ಎಲ್. ಆರ್. ಶಿವರಾಮೇಗೌಡ ಆಕ್ರೋಶ ವ್ಯಕ್ತಪಡಿಸಿದ್ದಾರೆ. ಜೆಡಿ–ಎಸ್ ಸ್ಪರ್ಧಿಸಲಿರುವ ರಾಮನಗರ ಮತ್ತು ಮಂಡ್ಯ ಕ್ಷೇತ್ರಗಳಲ್ಲಿ, ಸ್ಥಳೀಯ ಕಾಂಗ್ರೆಸ್ ನಾಯಕರು ಮೈತ್ರಿ ರಚಿಸದೆ ಕಾಂಗ್ರೆಸ್ ಸ್ಪರ್ಧಿಸಬೇಕು ಎಂದು ಇನ್ನೂ ವಾದಿಸುತ್ತಿದ್ದು, ಇದರ ಲಾಭ ಬಿಜೆಪಿ ಪಡೆಯದಂತೆ ಕಾಂಗ್ರೆಸ್ ಏನು ಮಾಡುತ್ತದೆ ಎಂದು ಕಾದು ನೋಡಬೇಕಾಗಿದೆ.

ಕಾಂಗ್ರೆಸ್ ಸ್ಪರ್ಧಿಸಬೇಕಾಗಿರುವ ಶಿವಮೊಗ್ಗ, ಬಳ್ಳಾರಿ ಎರಡು ಬಣಗಳ ಕಾದಾಟದಿಂದ ಮತ್ತಿತರ ಕರಣಗಳಿಂದ ಅಭ್ಯರ್ಥಿ ಅಂತಿಮಗೊಳಿಸುವುದು ಸಾಧ್ಯವಾಗಿಲ್ಲ. ಜಮಖಂಡಿಯಲ್ಲಿ ಮಾತ್ರ ಸಿದ್ದು ನ್ಯಾಮಗೌಡ ನಿಧನದಿಂದ ತೆರವಾದ ಸ್ಥಾನಕ್ಕೆ ಅವರ ಪುತ್ರ ಆನಂದ್ ನ್ಯಾಮಗೌಡ ಅವರನ್ನೇ ಅಭ್ಯರ್ಥಿಯನ್ನಾಗಿ ಮಾಡುವ ಮೂಲಕ ಅನುಕಂಪದ ಅಲೆಯ ಮೇಲೆ ಸವಾರಿ ಮಾಡಲು ಕಾಂಗ್ರೆಸ್ ಹೊರಟಿದೆ. ಬಳ್ಳಾರಿ ಗ್ರಾಮೀಣ ಕ್ಷೇತ್ರದ ಶಾಸಕ ಬಿ. ನಾಗೇಂದ್ರ, ತಮ್ಮ ಸಹೋದರ ವೆಂಕಟೇಶ್ ಪ್ರಸಾದ್ ಅವರನ್ನು ಬಳ್ಳಾರಿ ಲೋಕಸಭಾ ಕ್ಷೇತ್ರದಲ್ಲಿ ಕಣಕ್ಕಿಳಿಸಲು ಬಯಸಿದ್ದಾರೆ. ಆದರೆ, ಗಣಿ ಅಕ್ರಮದಲ್ಲಿ ಭಾಗಿಯಾದ ಆರೋಪ ಎದುರಿಸುತ್ತಿರುವ ನಾಗೇಂದ್ರ ಅವರ ಸಹೋದರನಿಗೆ ನೀಡುವ ಬದಲು, 20 ವರ್ಷಗಳಿಂದ ಪಕ್ಷದಲ್ಲಿ ಸಕ್ರಿಯವಾಗಿರುವ, ರಾಜ್ಯಶಾಸ್ತ್ರ ಪದವೀಧರೆ ಹಾಗೂ ಕೂಡ್ಲಿಗಿಯಲ್ಲಿ ಶಾಲೆ ನಡೆಸುತ್ತಿರುವ ಜಿ. ನಾಗಮಣಿ ಅವರನ್ನು ಕಣಕ್ಕಿಳಿಸಬೇಕು ಎಂಬ ಬೇಡಿಕೆಯನ್ನು ಸಂಡೂರು ಶಾಸಕ ತುಕಾರಾಂ, ಪರಮೇಶ್ವರ ನಾಯ್ಕ ಗುಂಪು ಮಂಡಿಸಿದೆ. ಇದರಲ್ಲಿ ಜಾರಕಿಹೊಳಿ–ಡಿಕೆಶಿ ಬಣಗಳ ಸಂಘರ್ಷವೂ ಸೇರಿ ಅಭ್ಯರ್ಥಿ ಅಂತಿಮಗೊಳಿಸುವುದು ಕಗ್ಗಂಟಾಗಿದೆ. ಶಿವಮೊಗ್ಗ ಲೋಕಸಭಾ ಕ್ಷೇತ್ರಕ್ಕೆ ಸಮರ್ಥ ಅಭ್ಯರ್ಥಿಯನ್ನು ಆಯ್ಕೆ ಮಾಡಲು ಕಾಂಗ್ರೆಸ್ ನಾಯಕರು ಹರಸಾಹಸ ಪಡುತ್ತಿದ್ದಾರೆ. ಬೇರೆ ಬೇರೆ ಕಾರಣಗಳಿಗೆ ಕಾಗೋಡು ತಿಮ್ಮಪ್ಪ ಮತ್ತು ಕಿಮ್ಮನೆ ರತ್ನಾಕರ ಸ್ಪರ್ಧಿಸಲು ಹಿಂದೇಟು ಹಾಕುತ್ತಿದ್ದಾರೆ. ಕಾಡಾ ಮಾಜಿ ಅಧ್ಯಕ್ಷ ಸುಂದರೇಶ್ ಸ್ಪರ್ಧಿಸಲು ಸಿದ್ಧರಿದ್ದು, 2019ರಲ್ಲೂ ತಮಗೆ ಟಿಕೇಟು ಕೊಡಬೇಕು ಎಂಬ ಷರತ್ತು ಹಾಕಿದ್ದಾರೆ. ಇದು ಕಾಂಗ್ರೆಸ್ ನಾಯಕತ್ವಕ್ಕೆ ನುಂಗಲಾರದ ತುತ್ತು. ಹೀಗೆ ಇಲ್ಲೂ ಅಭ್ಯರ್ಥಿ ಆಯ್ಕೆ ಸುಸೂತ್ರವಾಗಿ ಹೋಗುತ್ತಿಲ್ಲ.

ಈ ಉಪಚುನಾವಣೆಗಳ ಫಲಿತಾಂಶ ಮುಖ್ಯವಾಗಿ ಸ್ಥಳೀಯ ಅಂಶಗಳ ಮೇಲೆ ಅವಲಂಬಿಸಿದ್ದರೂ, ಇದರ ರಾಜಕೀಯ ಪರಿಣಾಮ ರಾಜ್ಯದ ರಾಷ್ಟ್ರದ ರಾಜಕಾರಣದ ಮೇಲೆ ಬೀರಲಿದೆ. ಬಿಜೆಪಿ ಈ ಉಪಚುನಾವಣೆಗಳನ್ನು ಬಳಸಿ ಕಾಂಗ್ರೆಸ್–ಜೆಡಿ(ಎಸ್) ಮೈತ್ರಿಕೂಟ ಒಡೆದು, 2019ರ ಲೋಕಸಭಾ ಚುನಾವಣೆಯ ಮೊದಲು ಸರಕಾರವನ್ನು ಉರುಳಿಸಿ, ಅದರಲ್ಲಿ ಹೆಚ್ಚಿನ ಸೀಟು ಗಳಿಸುವ ಸ್ಪಷ್ಟ ರಾಜಕೀಯ ಉದ್ದೇಶ ಹೊಂದಿದೆ. ಮಧ್ಯಪ್ರದೇಶ, ಛತ್ತಿಸಗಡ, ರಾಜಸ್ಥಾನಗಳಲ್ಲಿ ಮಹಾ–ಮೈತ್ರಿಕೂಟ ಕಟ್ಟುವುದರಲ್ಲಿ ವಿಫಲವಾಗಿ 2019ರ ಮಹಾಓಟದಲ್ಲಿ ಹಿಂದೆ ಬಿದ್ದಿರುವ ಕಾಂಗ್ರೆಸಿಗೆ ಕರ್ನಾಟಕದ ಮೈತ್ರಿಕೂಟ ಮತ್ತು ಅದರ ಸರಕಾರ ಉಳಿಸಿಕೊಳ್ಳುವುದು, ಈ ಉಪಚುನಾವಣೆಗಳಲ್ಲೂ ಮುಂದಿನ 2019 ಮಹಾಚುನಾವಣೆಗಳಲ್ಲೂ ಗರಿಷ್ಟ ಸೀಟುಗಳನ್ನು ಗೆಲ್ಲುವುದು ಜೀವನ್ಮರಣದ ಪ್ರಶ್ನೆ. ಬಿಜೆಪಿ ಮತ್ತು ಕಾಂಗ್ರೆಸುಗಳ ನಡುವೆ ಚೆಲ್ಲಾಟವಾಡಿ ತಮ್ಮ ಬೇಳೆ ಬೇಯಿಸಿಕೊಳ್ಳಬಹುದು ಎಂಬ ಲೆಕ್ಕಾಚಾರದಿಂದ ಇನ್ನೂ ಹೊರಬರದಿರುವ ಜೆಡಿ–ಎಸ್ ಗೆ, ಬಿಜೆಪಿ ತನ್ನ ಕೂಟದ ಸಹಚರ ಪಕ್ಷಗಳನ್ನು ಹೇಗೆ ನಡೆಸಿಕೊಂಡಿದೆ ಎಂಬುದು ಪಾಠವಾಗಬೇಕು. ಬಿಜೆಪಿ ಗೆಲ್ಲಲು ಬಿಟ್ಟರೆ ಪ್ರಜಾಪ್ರಭುತ್ವಕ್ಕೆ ಹಾಗೂ ಎರಡೂ ಪಕ್ಷಗಳ ಅಸ್ತಿತ್ವಕ್ಕೇ ಅಪಾಯವಿದೆ ಎಂಬುದನ್ನು ಮರೆತು ಬಿಡಬಾರದು. ಕಾಂಗ್ರೆಸ್–ಜೆಡಿ(ಎಸ್) ಮೈತ್ರಿಕೂಟ ಸಂಪುಟ ವಿಸ್ತರಣೆ–ಪುನರ್ರಚನೆ, ಉತ್ತಮ ಆಡಳಿತ ಮುಂತಾದ ಕಡೆ ಗಮನ ಕೊಡುತ್ತಲೇ, ಶುದ್ಧ ಅವಕಾಶವಾದಿ ರಾಜಕಾರಣ ಮಾಡುತ್ತಿರುವ ತಮ್ಮ ನಾಯಕರನ್ನು ಶಾಶಕರನ್ನು ಹದ್ದುಬಸ್ತಿನಲ್ಲಿಡಬೇಕಾಗಿದೆ. ಆ ಮೂಲಕ ಬಿಜೆಪಿಯ ಈ ಗಂಭೀರ ಸವಾಲನ್ನು ಎದುರಿಸಿ ಬಿಜೆಪಿಯನ್ನು ಉಪಚುನಾವಣೆಗಳಲ್ಲೂ, 2019ರ ಮಹಾಚುನಾವಣೆಯಲ್ಲೂ ಸೋಲಿಸುವುದು ಕಾಂಗ್ರೆಸ್–ಜೆಡಿ(ಎಸ್) ಗಳ ಆದ್ಯತೆಯ ಕೆಲಸವಾಗಬೇಕಾಗಿದೆ. ಹಾಗೆ ಮಾಡಲು ಒತ್ತಡ ಹೇರುವುದು ಎಲ್ಲಾ ಎಡ–ಪ್ರಜಾಸತ್ತಾತ್ಮಕ ಶಕ್ತಿಗಳ ಆದ್ಯತೆಯ ಜವಾಬ್ದಾರಿಯಾಗಿದೆ. ●



ವ್ಯಂಗ್ಯಚಿತ್ರ: ಪಿ.ಮಹಮ್ಮದ್

ಪಂಪ್‌ವೆಲ್ ಮೇಲ್ಸೇತುವೆ ಪೂರ್ಣಗೊಳಿಸಲು ಧರಣಿ

ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ ರಾಷ್ಟ್ರೀಯ ಹೆದ್ದಾರಿ ಮೇಲ್ಸೇತುವೆ ಹಾಗೂ ಟೋಲ್‌ಗೇಟ್ ಅಕ್ರಮಗಳದೇ ಈಗ ನಾಗರಿಕರನ್ನು ಕಾಡುವ ಸಂಗತಿಗಳಾಗಿವೆ. ದ.ಕ.ಜಿಲ್ಲೆಯ ತಲಪಾಡಿಯಿಂದ ಉಡುಪಿ ಜಿಲ್ಲೆಯ ಬೈಂದೂರಿನವರೆಗಿನ ಮುಂಬಯಿ ರಾಷ್ಟ್ರೀಯ ಹೆದ್ದಾರಿ ಅಗಲೀಕರಣ ಪ್ರಕ್ರಿಯೆ ಪ್ರಾರಂಭವಾಗಿ 8 ವರ್ಷಗಳೇ ಕಳೆದಿವೆ. ಈ ಮಾರ್ಗ ಮಧ್ಯೆ ತೊಕ್ಕೊಟ್ಟು, ಪಂಪ್‌ವೆಲ್ (ಮಂಗಳೂರು), ಕೊಟ್ಟಾರ (ಮಂಗಳೂರು), ಕೂಳೂರು, ಸುರತ್ಕಲ್, ಕಾಪು, ಉಡುಪಿ, ಕುಂದಾಪುರ ಇಲ್ಲೆಲ್ಲ ಮೇಲ್ಸೇತುವೆ ಆಗಬೇಕಿದ್ದು, ಅವುಗಳಲ್ಲಿ ತೊಕ್ಕೊಟ್ಟು, ಪಂಪ್‌ವೆಲ್, ಉಡುಪಿ ಮೇಲ್ಸೇತುವೆಗಳು ಆಮೆಗತಿಯಲ್ಲಿ ನಿರ್ಮಾಣವಾಗುತ್ತಿವೆ. ಆದರೆ ಈ ಸುಮಾರು 150 ಕಿ.ಮೀ.ವ್ಯಾಪ್ತಿಯ ಹೆದ್ದಾರಿಯಲ್ಲಿ ಆಗಲೇ ಪಂಪ್‌ವೆಲ್, ಸುರತ್ಕಲ್, ಹೆಜಮಾಡಿ ಮತ್ತು ಸಾಸ್ತಾನಗಳಲ್ಲಿ ಹೆದ್ದಾರಿ ಗುತ್ತಿಗೆದಾರ ಕಂಪೆನಿ ಟೋಲ್‌ಗೇಟ್‌ಗಳನ್ನು ಸ್ಥಾಪಿಸಿ, ಟೋಲ್ ವಸೂಲಿ ಆರಂಭಿಸಿ ಮೂರು ನಾಲ್ಕು ವರ್ಷಗಳಾಗುತ್ತಿವೆ. ತಲಪಾಡಿಯಿಂದ ಹೆಜಮಾಡಿ 45 ಕಿ.ಮೀ.ಮಾತ್ರ ದೂರವಿದ್ದು, ಅವೆರಡರ ಮಧ್ಯ ಸುರತ್ಕಲ್‌ನಲ್ಲಿ ಇನ್ನೊಂದು ಟೋಲ್‌ಗೇಟ್ ಸ್ಥಾಪಿಸಿ ಟೋಲ್ ವಸೂಲಿ ಮಾಡಲಾಗುತ್ತಿದೆ. ಸರ್ವಿಸ್ ರೋಡ್‌ಗಳು ತೀರಾ ಅಪೂರ್ಣವಾಗಿವೆ. ಪಂಪ್‌ವೆಲ್, ತೊಕ್ಕೊಟ್ಟು ಮೇಲುಸೇತುವೆ ಕಾಮಗಾರಿ ತೀರಾ ಮಂದಗತಿಯಲ್ಲಿದ್ದರೆ, ಮಂಗಳೂರಿನ ನಂತೂರಿನಲ್ಲಿ ಮೇಲ್ಸೇತುವೆ ತೀರಾ ಅಗತ್ಯವಿರುವಲ್ಲಿ ಯೋಜನಾ ಪ್ರಸ್ತಾಪವೇ ಇರುವುದಿಲ್ಲ. ಈ ವರ್ಷದ ಭಾರೀ ಮಳೆಯ ಸಂದರ್ಭದಲ್ಲಂತೂ ಪಂಪ್‌ವೆಲ್, ತೊಕ್ಕೊಟ್ಟು, ಮೇಲ್ಸೇತುವೆ ಕಾಮಗಾರಿ ನಡೆಯುವಲ್ಲಿ ಮಳೆನೀರು ತುಂಬಿಕೊಂಡು, ಪದೇ ಪದೇ ಸಂಚಾರಕ್ಕೆ ತೊಂದರೆಯುಂಟಾಗುತ್ತಿದೆ. ಈ ಎರಡೂ ಕಡೆ ವಾಹನ ದುರಂತಗಳು ಮುಖ್ಯವಾಗಿ ದ್ವಿಚಕ್ರ ವಾಹನ ಚಾಲಕರು ನಾಲ್ಕಾರು ಮಂದಿ ಅಪಘಾತಕ್ಕೀಡಾಗಿ ಸಾವಿಗೂ ಈಡಾಗಿದ್ದಾರೆ.

ಹೆದ್ದಾರಿ ಅವ್ಯವಸ್ಥೆಯಿಂದ ಪೀಡಿತರಾದ ಪ್ರದೇಶದ ನಾಗರಿಕರು ಅಲ್ಲಲ್ಲಿ ನಾಗರಿಕ ಹೋರಾಟ ಸಮಿತಿಗಳನ್ನು ರಚಿಸಿಕೊಂಡು ಅಲ್ಲಲ್ಲಿ ಧರಣಿ, ರಸ್ತೆತಡೆ ಇತ್ಯಾದಿ ಪ್ರತಿಭಟನೆಗಳನ್ನು ಮಾಡಿದ್ದಾರೆ. ಮೊದಲಾಗಿ ಸುರತ್ಕಲ್‌ನ ಅನಗತ್ಯ ಟೋಲ್‌ಗೇಟ್ ವಿರುದ್ಧವಾಗಿ ಡಿವೈಎಫ್‌ಐ ನೇತೃತ್ವದಲ್ಲಿ ರಚಿಸಲಾದ ನಾಗರಿಕ ಹೋರಾಟ ಸಮಿತಿ ಆಗಲೇ ನಾಲ್ಕು ಬಾರಿ ಪ್ರತಿಭಟನೆ ನಡೆಸಿದೆ. ಉಡುಪಿ ಜಿಲ್ಲೆಯ ಹೆಜಮಾಡಿ ಟೋಲ್‌ಗೇಟ್ ಬಳಿ ಮತ್ತು ಸಾಸ್ತಾನದ ಟೋಲ್‌ಗೇಟ್ ಬಳಿ ಅಲ್ಲಲ್ಲಿನ ನಾಗರಿಕ ಹೋರಾಟ ಸಮಿತಿಗಳು ಇತ್ತೀಚೆಗೆ ಪ್ರತಿಭಟನೆ ನಡೆಸಿವೆ. ತೊಕ್ಕೋಟು ಮೇಲ್ಸೇತುವೆ ಮತ್ತು ತಲಪಾಡಿ ಟೋಲ್‌ಗೇಟ್ ಬಳಿ ಡಿವೈಎಫ್‌ಐ ಉಳ್ಳಾಲ ವಲಯದ ನೇತೃತ್ವದಲ್ಲಿ ನಾಗರಿಕ ಹೋರಾಟ ಸಮಿತಿ ಈಗಾಗಲೇ 3 ಬಾರಿ ಪ್ರತಿಭಟನಾ ಪ್ರದರ್ಶನ ನಡೆಸಿದೆ. ನಂತೂರಿನಲ್ಲಿ ಮೇಲುಸೇತುವೆ ಆಗಬೇಕೆಂದು ಆಗ್ರಹಿಸಿ ಸಿಪಿಐ(ಎಂ) ಮಂಗಳೂರು ನಗರ ಸಮಿತಿ ನೇತೃತ್ವದಲ್ಲಿ ಈಗಾಗಲೇ 3 ಬಾರಿ ಪ್ರತಿಭಟನೆಗಳು ನಡೆದಿವೆ. ಈ ಯಾವ ಕಾರ್ಯಕ್ರಮಗಳೂ ರಾಷ್ಟ್ರೀಯ ಹೆದ್ದಾರಿ ಇಲಾಖೆಯನ್ನಾಗಲೀ, ಹೆದ್ದಾರಿ ಗುತ್ತಿಗೆದಾರರನ್ನಾಗಲೀ ಚುರುಕುಗೊಳಿಸುವಲ್ಲಿ ಯಶಸ್ವಿಯಾಗಲಿಲ್ಲ.



ಪಂಪ್‌ವೆಲ್ ವೃತ್ತದಲ್ಲಿ ರಚಿಸಲಾಗುತ್ತಿರುವ ಮೇಲುಸೇತುವೆ ಬಗ್ಗೆ ಇತರೆಡೆ ನಡೆಯುವ ಪ್ರತಿಭಟನೆಗಳಲ್ಲಿ ಪ್ರಸ್ತಾಪವಾಗುತ್ತಿದ್ದರೂ, ಅಲ್ಲೇ ಪ್ರತಿಭಟನೆ ನಡೆದಿರಲಿಲ್ಲ. ವೃತ್ತವೊಂದರ ಮಧ್ಯೆ ಬೃಹತ್ ಕಲಶವನ್ನೊಳಗೊಂಡ ಪಂಪ್‌ವೆಲ್ ವೃತ್ತ ಅಥವಾ ಮಹಾವೀರ ವೃತ್ತ ಮಂಗಳೂರು ನಗರ ಪ್ರವೇಶಕ್ಕೆ ಒಂದು ಸುಂದರ ಪ್ರವೇಶದ್ವಾರದಂತಿತ್ತು. ಕಳೆದ 8 ವರ್ಷಗಳಿಂದ ಆ ಕಲಶವನ್ನು ತೆಗೆದು ಮುಕ್ತಾಯಗೊಳ್ಳದ ಮೇಲ್ಸೇತುವೆ ಕಾಮಗಾರಿ ಆರಂಭಗೊಂಡದಿನಿಂದ ಆ ಪ್ರದೇಶದ ಸೌಂದರ್ಯ ಕೆಟ್ಟು ಹೋಗಿದೆ. ಮಾತ್ರವಲ್ಲ ಅಪಘಾತಗಳ ನೆಲೆಬೀಡಾಗಿದೆ. ಕೊಳಚೆಯ ಸಂಗ್ರಹಾಗಾರವಾಗಿದೆ. ಮಂಗಳೂರಿಗೇ ಕಳಂಕಪ್ರಾಯವಾಗಿದೆ. ಮಾಧ್ಯಮಗಳಲ್ಲಿ ನಾಗರಿಕರು ಈ ಬಗ್ಗೆ ಪ್ರಸ್ತಾಪಿಸುತ್ತಲೇ ಇದ್ದಾರೆ. ಹೆದ್ದಾರಿ ಪ್ರಾಧಿಕಾರ ನಾಲ್ಕಾರು ತಿಂಗಳುಗಳಲ್ಲಿ ಮುಕ್ತಾಯಗೊಳಿಸುವುದಾಗಿ ಭರವಸೆ ಕೊಡುತ್ತಾ ಇದ್ದಾರೆ. ರಾಷ್ಟ್ರೀಯ ಹೆದ್ದಾರಿ ಕೇಂದ್ರ ಸರಕಾರದ ವ್ಯಾಪ್ತಿಯಲ್ಲಿ ಬರುವುದಾದುದರಿಂದ 2 ಅವಧಿಗೆ ಸಂಸದರಾಗಿ ಮಂಗಳೂರನ್ನು ಪ್ರತಿನಿಧಿಸುತ್ತಿರುವ ನಳಿನ್ ಕುಮಾರ್ ಕಟೀಲ್ ಅವರು ಪ್ರತಿ ಸರ್ತಿ ಗದ್ದಲವಾದಾಗ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ ಹಾಗೂ ಗುತ್ತಿಗೆದಾರರನ್ನು ಶೀಘ್ರ ಮುಕ್ತಾಯಗೊಳಿಸಲು ನಿರ್ದೇಶನ ನೀಡಿರುವುದಾಗಿ ತಿಳಿಸಿರುತ್ತಾರೆ. ಗಣಪತಿಯ ಮದುವೆಯಂತೆ ಸಂಸದರು ನಿಗದಿಗೊಳಿಸಿದ ದಿನಗಳು ಮುಂದಕ್ಕೆ ಮುಂದಕ್ಕೆ ಹೋಗುತ್ತಿವೆ.

ಪಂಪ್‌ವೆಲ್ ಮೇಲುಸೇತುವೆ ಪೂರ್ಣಗೊಳಿಸಲು ಆಗ್ರಹಿಸಿ ರಚಿಸಲಾಗಿರುವ ನಾಗರಿಕ ಹೋರಾಟ ಸಮಿತಿಗೆ ಸಂಚಾಲಕತ್ವ ನೀಡಿದ್ದು, ಸಿಪಿಐ(ಎಂ) ಮಂಗಳೂರು ನಗರ ದಕ್ಷಿಣ ಸಮಿತಿ. ಹಲವಾರು ಸಂಘ ಸಂಸ್ಥೆಗಳನ್ನು ಒಳಗೊಳಿಸಿ, ಮೊನ್ನೆ ಅಕ್ಟೋಬರ್ 8 ರಂದು ಪಂಪ್‌ವೆಲ್ ವೃತ್ತದ ಬಳಿ ಪ್ರತಿಭಟನೆ ನಡೆಸಿ, ಬೇಜವಾಬ್ದಾರಿ ತೋರುತ್ತಿರುವ ಸಂಸದ ನಳಿನ್ ಕುಮಾರ್ ಕಟೀಲ್ ಅವರಿಗೆ ಹೋರಾಟ ಸಮಿತಿ ಛೀಮಾರಿ ಹಾಕಿತು. ಹೆದ್ದಾರಿ ಪ್ರಾಧಿಕಾರಕ್ಕೂ, ಗುತ್ತಿಗೆದಾರ ನವಯುಗ್ ಕಂಪೆಯವರಿಗೂ ಎಚ್ಚರಿಕೆ ನೀಡಿತು.

ಸಮಿತಿ ಸಂಚಾಲಕರಾದ ಸಿಪಿಐ(ಎಂ) ಮಂಗಳೂರು ನಗರ ದಕ್ಷಿಣ ಸಮಿತಿ ಕಾರ್ಯದರ್ಶಿ ಸುನಿಲ್ ಕುಮಾರ್ ಬಜಾಲ್ ಪ್ರಾಸ್ತಾವಿಕವಾಗಿ ಪರಿಸ್ಥಿತಿಯನ್ನು ವಿವರಿಸಿದರು. ಪ್ರತಿಭಟನೆಯನ್ನುದ್ದೇಶಿಸಿ ಡಿವೈಎಫ್‌ಐ ರಾಜ್ಯಾಧ್ಯಕ್ಷ ಮುನೀರ್ ಕಾಟಿಪಳ್ಳ, ಸಾಮಾಜಿಕ ಕಾರ್ಯಕರ್ತರಾದ ಎಂ.ಜಿ.ಹೆಗಡೆ, ಹನುಮಂತ ಕಾಮತ್, ಆಲಿ ಹಸನ್, ಕಾಂಗ್ರೆಸ್ ಪಕ್ಷದ ನಗರ ಪಾಲಿಕೆ ಸದಸ್ಯರಾದ ಪುರುಷೋತ್ತಮ ಚಿತ್ರಾಪುರ, ರೇವತಿ ಪುತ್ರನ್, ಪ್ರವೀಣ್ ಚಂದ್ರ ಆಳ್ವ, ಡಿವೈಎಫ್‌ಐ ದ.ಕ.ಜಿಲ್ಲಾಧ್ಯಕ್ಷ ಬಿ.ಕೆ.ಇಮ್ತಿಯಾಜ್, ಕಾರ್ಯದರ್ಶಿ ಸಂತೋಷ್ ಬಜಾಲ್, ಕರ್ನಾಟಕ ಪ್ರಾಂತ ರೈತ ಸಂಘದ ದ.ಕ.ಜಿಲ್ಲಾಧ್ಯಕ್ಷ ಕೃಷ್ಣಪ್ಪ ಸಾಲ್ಯಾನ್, ಸಿಟಿ ಬಸ್ ಮಾಲಕರ ಸಂಘದ ಅಧ್ಯಕ್ಷ ದಿಲ್‌ರಾಜ್ ಆಳ್ವ, ಟೂರಿಸ್ಟ್ ವಾಹನ ಚಾಲಕರ ಸಂಘದ ಜಿಲ್ಲಾಧ್ಯಕ್ಷ ದಿನೇಶ್ ಕುಂಪಲ ಮಾತನಾಡಿದರು. ಸಿಪಿ(ಎಂ) ದ.ಕ.ಜಿಲ್ಲಾ ಸಮಿತಿ ಸದಸ್ಯರಾದ ಜಯಂತಿ ಬಿ.ಶೆಟ್ಟಿ, ವಾಸುದೇವ ಉಚ್ಚಿಲ್, ಯೋಗೀಶ್ ಜಪ್ಪಿನಮೊಗರು, ಜಿಲ್ಲಾ ವಿಚಾರವಾದಿ ಸಂಘದ ಶ್ಯಾಮಸುಂದರ್ ರಾವ್, ಎಸ್‌ಎಫ್‌ಐನ ಜಿಲ್ಲಾ ಕಾರ್ಯದರ್ಶಿ ಮಾಧುರಿ ಬೋಳಾರ್ ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು. ●

ವಾ. ಉ.

ಕನ್ನಡ ಕಡಿ

ಕನಿಷ್ಟ ವೇತನ ಹಾಗೂ ಬಾಕಿ ತುಟ್ಟಿಭತ್ತೆ ಆಗ್ರಹಿಸಿ ಬೀಡಿ ಕಾರ್ಮಿಕ ಸಂಘಟನೆಗಳ ಸಂಯುಕ್ತ ಜಾಥಾ



ಬೀಡಿ ಕಟ್ಟುವ ಕಾರ್ಮಿಕರಿಗೆ ಕರ್ನಾಟಕ ರಾಜ್ಯ ಸರಕಾರ ಕಟ್ಟುವ ಸಾವಿರ ಬಿಡಿಗಳಿಗೆ ರೂ.210/– ಕನಿಷ್ಠ ಕೂಲಿಯನ್ನು ಆದೇಶ ಮಾಡಿದ್ದು, 2018 ಎಪ್ರಿಲ್ 1 ರಿಂದ ಅದು ಜಾರಿಯಾಗಬೇಕಾಗಿದೆ. ಕಾರ್ಮಿಕ ಸಂಘಟನೆಗಳು, ಬೀಡಿ ಮಾಲಕರು ಹಾಗೂ ರಾಜ್ಯ ಸರ್ಕಾರ ಈ ಸಂಬಂಧ ನಡೆಸಿದ ಮಾತುಕತೆಗಳ ಆಧಾರದಿಂದ ಸರ್ಕಾರ ಈ ಆದೇಶ ಮಾಡಿದ್ದು, ಅದನ್ನು ಜಾರಿಗೊಳಿಸಬೇಕಾದುದು ಮಾಲಕರ ಕರ್ತವ್ಯವಾಗಿದೆ. ಅವರು ಕನಿಷ್ಠ ಕೂಲಿ ನೀಡುವಂತೆ ಮಾಡುವುದು ರಾಜ್ಯ ಸರಕಾರದ ಹೊಣೆಗಾರಿಕೆಯಾಗಿದೆ.

ಅದೇ ರೀತಿ ಕಾಲಕಾಲಕ್ಕೆ ವೇತನದ ಮೇಲೆ ಬೆಲೆಏರಿಕೆ ಆಧಾರಿಸಿ ತುಟ್ಟಿಭತ್ತೆ ಆದೇಶವನ್ನು ರಾಜ್ಯ ಸರಕಾರ ನೀಡುತ್ತಿದೆ. ಅದರಂತೆ 2015 ಎಪ್ರಿಲ್ 1 ರಿಂದ ಏರಿಕೆಯಾಗಿರುವ ತುಟ್ಟಿಭತ್ತೆಯನ್ನು ಮಾಲಿಕರು ಇನ್ನೂ ಬೀಡಿ ಕಾರ್ಮಿಕರಿಗೆ ನೀಡಿಲ್ಲ. ಬೀಡಿ ಉದ್ಯಮ ಲಾಭದಾಯಕವಾಗಿಲ್ಲವೆಂದು ಮಾಲಕರು ಸಾರ್ವಜನಿಕರ ಮುಂದೆ ಬಿಂಬಿಸಿ ತಮಗಾಗಿ ದುಡಿದ ಕಾರ್ಮಿಕರಿಗೆ ನ್ಯಾಯಬದ್ಧವಾಗಿ ಸಲ್ಲತಕ್ಕ ತುಟ್ಟಿಭತ್ತೆ ಹಾಗೂ ಕನಿಷ್ಠ ವೇತನವನ್ನು ನೀಡದೆ ಕಾಡಿಸುತ್ತಿದ್ದಾರೆ.

ಬೀಡಿ ಕಾರ್ಮಿಕರ ಬಾಕಿ ತುಟ್ಟಿಭತ್ತೆಯನ್ನು ನೀಡಬೇಕು ಹಾಗೂ ಕನಿಷ್ಠ ಕೂಲಿ ಸರಕಾರಿ ಆದೇಶ ತಿಳಿಸಿದ ದಿನಾಂಕದಿಂದ ನೀಡಬೇಕು ಎಂದು ಆಗ್ರಹಿಸಿ ರಾಜ್ಯದಲ್ಲಿ ಸಿಐಟಿಯು ಸಂಯೋಜಿತ ರಾಜ್ಯ ಬೀಡಿ ಕಾರ್ಮಿಕರ ಫೆಡರೇಶನ್ ಹಾಗೂ ಇತರ ಬೀಡಿ ಕಾರ್ಮಿಕ ಸಂಘಟನೆಗಳು ಹೋರಾಟ ಮಾಡುತ್ತಾ ಬಂದಿವೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿಯೇ ಬೀಡಿ ಕಾರ್ಮಿಕರ ಜಿಲ್ಲಾ ಫೆಡರೇಶನ್ (ಸಿಐಟಿಯು) ನೇತೃತ್ವದಲ್ಲಿ ಈಗಾಗಲೇ ಎರಡು ಬಾರಿ ಪ್ರತಿಭಟನೆ ಹಾಗೂ ಒಂದು ವಾರ ಪೂರ್ತಿ ಧರಣಿ ಸತ್ಯಾಗ್ರಹ ಕಾರ್ಮಿಕ ಸಹಾಯಕ ಕಮೀಷನರ್ ಕಚೇರಿ ಮುಂದೆ ನಡೆದಿದೆ. ಆದಾಗ್ಯೂ ಸರಕಾರ ಮಾಲಕರಿಗೆ ಕಾರ್ಮಿಕರ ಬಾಕಿ ತುಟ್ಟಿಭತ್ತೆ ಕನಿಷ್ಠ ಕೂಲಿ ನೀಡುವಂತೆ ಕ್ರಮ ಕೈಗೊಂಡಿಲ್ಲ. ಸರಕಾರದ ನಿಷ್ಕ್ರಿಯತೆಗೆ ತಕ್ಕಂತೆ ಬೀಡಿ ಮಾಲಕರೂ ತಮ್ಮ ಕರ್ತವ್ಯವೆಂದು ಕಾರ್ಮಿಕರ ನ್ಯಾಯಬದ್ಧ ಹಕ್ಕುಗಳನ್ನು ಜಾರಿಗೊಳಿಸುತ್ತಿಲ್ಲ.

ಈ ಹಿನ್ನೆಲೆಯಲ್ಲಿ ದ.ಕ.ಜಿಲ್ಲೆಯ ಬೀಡಿ ಕಾರ್ಮಿಕ ಸಂಘಟನೆಗಳು ಸಿಐಟಿಯು, ಎಐಟಿಯುಸಿ, ಬಿಎಂಎಸ್ ಹಾಗೂ ಎಚ್‌ಎಂಎಸ್ ಗಳಿಗೆ ಸಂಯೋಜನೆಗೊಂಡಿರುವವುಗಳು ಅಕ್ಟೋಬರ್ 11 ರಿಂದ 13ರ ವರೆಗೆ 3 ದಿನಗಳ ವಾಹನ ಪ್ರಚಾರ ಜಾಥಾವೊಂದನ್ನು ಆಯೋಜಿಸಿದ್ದು, ಅಕ್ಟೋಬರ್ 11ರ ಬೆಳಿಗ್ಗೆ ಮಂಗಳೂರಿನಲ್ಲಿ ಜಿಲ್ಲಾಧಿಕಾರಿಗಳ ಕಚೇರಿ ಎದುರು ಉದ್ಘಾಟನೆಗೊಂಡಿತು.

ದ.ಕ. ಜಿಲ್ಲೆಯ ಹಿರಿಯ ಕಾರ್ಮಿಕ ಮುಖಂಡರೂ ಹಾಗೂ ಸಿಐಟಿಯು ಮುಂಖಂಡರೂ ಆದ ಕೆ.ಆರ್.ಶ್ರೀಯಾನ್ ಜಾಥಾವನ್ನು ಉದ್ಘಾಟಿಸಿ ಮಾತನಾಡಿದರು. ಅಲ್ಲದೆ ಬೀಡಿ ಕಾರ್ಮಿಕರು 2018 ಅಕ್ಟೋಬರ್ 23 ರಿಂದ ಮಂಗಳೂರು ಲಾಲ್‌ಬಾಗ್‌ನಲ್ಲಿರುವ ಗಣೇಶ್ ಬೀಡಿ ಕಚೇರಿಯ ಮುಂದುಗಡೆಯೂ ಮಂಗಳೂರು ಕದ್ರಿಯಲ್ಲಿರುವ ಭಾರತ್ ಬೀಡಿ ವರ್ಕ್ಸ್ ಕಚೇರಿಯ ಮುಂದುಗಡೆಯೂ ಅನಿರ್ದಿಷ್ಟ ಧರಣಿ ಸತ್ಯಾಗ್ರಹ ನಡೆಸುವುದಾಗಿ ಬೀಡಿ ಮಾಲಕರಿಗೆ ಹಾಗೂ ಸರಕಾರಕ್ಕೆ ಎಚ್ಚರಿಕೆ ನೀಡಿದರು.

ಉದ್ಘಾಟನಾ ಸಮಾರಂಭದಲ್ಲಿ ಎಐಟಿಯುಸಿ ಬೀಡಿ ಕಾರ್ಮಿಕ ಫೆಡರೇಶನಿನ ಬಿ.ಸೀತಾರಾಮ ಬೇರಿಂಜೆ ಹಾಗೂ ಬಿಎಂಎಸ್ ಬೀಡಿ ಸಂಘಟನೆಯ ಗೋಪಾಲಕೃಷ್ಣ ಅವರು ಮಾತನಾಡಿದರು. ಸಿಐಟಿಯು ಸಂಯೋಜಿತ ದ.ಕ.ಜಿಲ್ಲಾ ಬೀಡಿ ಕಾರ್ಮಿಕ ಫೆಡರೇಶನ್ನಿನ ಜ.ಬಾಲಕೃಷ್ಣ ಶೆಟ್ಟಿ ಪ್ರಾಸಾವಿಕ ಮಾತುಗಳನ್ನಾಡಿದರು. ಎಐಟಿಯುಸಿ ಬೀಡಿ ಫೆಡರೇಶನಿನ ಸುರೇಶ್ ಬಂಟ್ವಾಳ ಸ್ವಾಗತಿಸಿದರು.

ಜಾಥಾ ತಂಡದ ನಾಯಕ ಜೆ.ಬಾಲಕೃಷ್ಣ ಶೆಟ್ಟಿ ಹಾಗೂ ಜಾಥಾ ಸದಸ್ಯರಿಗೆ ಹಿರಿಯ ಸಿಐಟಿಯು ಮುಖಂಡ ಯು.ಬಿ.ಲೋಕಯ್ಯ ಅವರು ಗುಲಾಬಿ ನೀಡಿ ಅಭಿನಂದಿಸಿದರು.

ಸಿಐಟಿಯು ಬೀಡಿ ಫೆಡರೇಶನಿನ ಅಧ್ಯಕ್ಷ ವಸಂತ ಆಚಾರಿ ಮುಖಂಡರಾದ ಜಯಂತಿ ಶೆಟ್ಟಿ, ಭಾರತಿ ಬೋಳಾರ್, ಸದಾಶಿವ ದಾಸ್, ರಮಣಿ ಮೂಡಬಿದ್ರಿ, ಬಾಬು ದೇವಾಡಿಗ, ಸಿಐಟಿಯು ಜಿಲ್ಲಾ ಕಾರ್ಯದರ್ಶಿ ಸುನಿಲ್ ಕುಮಾರ್ ಬಜಾಲ್, ಮುಖಂಡರಾದ ಯೋಗೀಶ್ ಜಪ್ಪಿನಮೊಗರು, ಬಿ.ಕೆ.ಇಮ್ತಿಯಾಜ್, ಎಐಟಿಯುಸಿ ಜಿಲ್ಲಾಧ್ಯಕ್ಷ ಎಚ್.ವಿ.ರಾವ್, ಮುಖಂಡರಾದ ವಿ.ಕುಕ್ಯಾನ್, ಕರುಣಾಕರ, ಶೇಖರ ಬಂಟ್ವಾಳ, ಶಿವಪ್ಪ ಉದ್ಘಾಟನಾ ಸಮಾರಂಭದಲ್ಲಿ ಭಾಗವಹಿಸಿದ್ದರು.

ಮೂರು ದಿನಗಳ ಜಾಥಾ ಮಂಗಳೂರು, ತೊಕ್ಕೊಟ್ಟು, ದೇರಳಕಟ್ಟೆ, ಮುಡಿಪು, ವಿಟ್ಲ, ಬಿಸಿರೋಡ್, ಪುತ್ತೂರು, ಸುಳ್ಯ, ಉಪ್ಪಿನಂಗಡಿ, ಬೆಳ್ತಂಗಡಿ, ವೇಣೂರು, ಮೂಡಬಿದ್ರಿ, ಬಜ್ಪೆ, ಸುರತ್ಕಲ್ ಮೂಲಕ ಹಾದು ಅಕ್ಟೋಬರ್ 13 ರಂದು ಮಂಗಳೂರಿನ ಉರ್ವಸ್ಟೋರಿನಲ್ಲಿ ಸಮಾರೋಪಗೊಳ್ಳುವುದು. ಎಲ್ಲಾ ಕಡೆ ವಿವಿಧ ಸಂಘಟನೆಗಳ ಬೀಡಿ ಕಾರ್ಮಿಕರು ಜಾಥಾವನ್ನು ಎದುರುಗೊಂಡು ಪ್ರತಿಭಟನಾ ಪ್ರದರ್ಶನ ನಡೆಸಲಿರುವರು. ●



ಹಟ್ಟಿ ಚಿನ್ನದ ಗಣಿ: ಕಾರ್ಮಿಕರ ಕನಿಷ್ಟ ಬೇಡಿಕೆ ಈಡೇರಿಸದ ಟಿಯುಸಿಐ

– ರಮೇಶ ವೀರಾಪೂರು –

ಹಟ್ಟಿ ಚಿನ್ನದ ಗಣಿ ಸಿಐಟಿಯು ಸಂಘಟನೆ 1998 ರಿಂದ 2000 ವರೆಗೆ ಹಟ್ಟಿ ಚಿನ್ನದ ಗಣಿ ಸಿಬ್ಬಂದಿ ಹಾಗೂ ಕಾರ್ಮಿಕ ಸಂಘದ ಅಧಿಕಾರದ ಚುಕ್ಕಾಣಿ ಹೊಂದಿದಾಗ ಚಿನ್ನದ ಬೆಲೆ ಪಾತಾಳಕ್ಕಿಳಿದು ಗಣಿ ಕಂಪನಿ ಸಂಕಷ್ಟದಲ್ಲಿದ್ದರೂ ಕಾರ್ಮಿಕರಿಗೆ ಶೇ.20ರಷ್ಟು ಬೋನಸ್ ಕೊಡಿಸಿದ ಕೀರ್ತಿ ನಮ್ಮದಾಗಿದೆ ಎಂದು ಸಿಐಟಿಯು ಜಿಲ್ಲಾ ಪ್ರಧಾನ ಕಾರ್ಯದರ್ಶಿ ಶೇಕ್ಷಾಖಾದ್ರಿ ಹೇಳಿದರು.

ಹಟ್ಟಿ ಕ್ಯಾಂಪ್ ಪ್ರದೇಶದ ನಾಗಲಿಂಗೇಶ್ವರ ದೇವಸ್ಥಾನದ ಆವರಣದಲ್ಲಿ ಕರೆದ ಸುದ್ದಿಗೋಷ್ಠಿಯಲ್ಲಿ ಇತ್ತೀಚೆಗೆ ಮಾತನಾಡಿದ ಅವರು, ಸದ್ಯ ಕಂಪನಿ ಭಾರೀ ಲಾಭದಾಯಕವಾಗಿದೆ. ಅಕ್ಟೋಬರ್ ತಿಂಗಳು ಬಂದರೂ ಬೋನಸ್ ಕೊಡಿಸಲು ಸಾಧ್ಯವಾಗದ ಟಿಯುಸಿಐ ಸಂಘಟನೆಯ ಮುಖಂಡರು ಕಾರ್ಮಿಕರಿಗೆ ನಾಯಕತ್ವ ಕೊಡುವಲ್ಲಿ ಸಂಪೂರ್ಣವಾಗಿ ವಿಫಲರಾಗಿದ್ದಾರೆ ಎಂದು ಆರೋಪಿಸಿದರು.

ಸಂಘದ ಗೌರವಾಧ್ಯಕ್ಷರಾದ ಆರ್. ಮಾನಸಯ್ಯ ಟಿಯುಸಿಐನ ರಾಜ್ಯಾಧ್ಯಕ್ಷ, ಪ್ರಧಾನ ಕಾರ್ಯದರ್ಶಿ ಮಹಮ್ಮದ್ ಅಮೀರ್ ಅಲಿ ಹಿಂದೆ ರಾಷ್ಟ್ರಮಟ್ಟದ ಕಾರ್ಮಿಕ ಸಂಘಟನೆಯಲ್ಲಿ ಕೆಲಸ ಮಾಡಿದವರು. ಹಾಗೂ ಅಧ್ಯಕ್ಷರಾದ ವಾಲೇಬಾಬು ಕಾರ್ಮಿಕ ಸಂಘಕ್ಕೆ ಹಲವು ಸಾರಿ ಆಯ್ಕೆಗೊಂಡು ಮುಖಂಡತ್ವ ನೀಡಿದಂತಹ ವ್ಯಕ್ತಿ. ಬೇರೆ ಬೇರೆ ಸಂಘಟನೆಗಳವರು ಒಂದೆಡೆ ಸೇರಿ ಚುನಾವಣೆ ಎದುರಿಸಿದ್ದರಿಂದ ಕಳೆದ ಚುನಾವಣೆಯಲ್ಲಿ ಸಹಜವಾಗಿ ಕಾರ್ಮಿಕರಲ್ಲಿ ಆಶಾಭಾವನೆಯಿಂದ ಇವರನ್ನು ಚುನಾಯಿಸಿದ್ದಾರೆ. ಕಾರ್ಮಿಕ ಸಂಘಕ್ಕೆ ಆಯ್ಕೆಗೊಂಡು 12 ತಿಂಗಳು ಮುಗಿಯುತ್ತಾ ಬಂದರೂ ಕಾರ್ಮಿಕರ ಒಂದೂ ಬೇಡಿಕೆ ಸಹ ಈಡೇರಿಸಲು ಇವರಿಂದ ಸಾಧ್ಯವಾಗಿಲ್ಲ.

ಯಾವುದೇ ಒಂದು ಕಂಪನಿ ನಷ್ಟದಲ್ಲಿದ್ದರೆ ಮಾತ್ರ 8.33 ಬೋನಸ್ ಕೊಡುತ್ತಾರೆ. ಗಣಿ ಕಂಪನಿ ಲಾಭದಲ್ಲಿದೆ. ಅಂತಹದರಲ್ಲಿ ಶೇ.20ರಷ್ಟು ಬೋನಸ್ ಕೊಡಿಸಲು ಸಾಧ್ಯವಾಗದಿದ್ದರೆ, ಇವರಿಗೆ ಕಾರ್ಮಿಕ ಕಾಯ್ದೆ ಕಾನೂನುಗಳ ಮಾಹಿತಿ ಇಲ್ಲವೆಂದು ಗೊತ್ತಾಗುತ್ತದೆ. ಸಿಐಟಿಯು ಸಂಘಟನೆ ಕಾರ್ಮಿಕ ಸಂಘದಲ್ಲಿ 1998ರಿಂದ 2000ರವರೆಗೆ ಅಧಿಕಾರದಲ್ಲಿದ್ದಾಗ ಚಿನ್ನದ ಬೆಲೆ ಪಾತಾಳಕ್ಕೆ ಕುಸಿದಿತ್ತು. ಗಣಿ ಕಂಪನಿ ಸಂಬಳ ಕೊಡಲು ಹೆಣಗಾಡುತ್ತಿತ್ತು. ಅಂತಹ ಸಂದರ್ಭದಲ್ಲಿ ಖಾಯ್ದೆ ಕಾನೂನುಗಳ ಅಡಿ ನಮ್ಮ ರಾಜ್ಯ ನಾಯಕರು ಒತ್ತಡ ಹಾಕಿ ಸತತ 2 ವರ್ಷ ಶೇ.20ರಷ್ಟು ಬೋನಸ್ ಕೊಡಿಸಿದ್ದು, ಈಗಲೂ ಇತಿಹಾಸವಾಗಿದೆ.

ಚುನಾವಣೆ ಸಂದರ್ಭದಲ್ಲಿ ಬಣ್ಣದ ಮಾತುಗಳನ್ನಾಡಿ ಭಾರೀ ಭರವಸೆ ನೀಡಿ ಆಯ್ಕೆಯಾದ ಟಿಯುಸಿಐ ನಾಯಕರು ಇಂದು ನಾಯಕತ್ವದಲ್ಲಿ ಸಂಪೂರ್ಣವಾಗಿ ವಿಫಲವಾಗಿದ್ದಾರೆ. ಆಸ್ಪತ್ರೆಯನ್ನು ಸೂಪರ್ ಸ್ಪೆಷಾಲಿಟಿಸ್ ಆಸ್ಪತ್ರೆಯನ್ನಾಗಿ ಮಾಡುತ್ತೇವೆಂದು ಹೇಳಿದ್ದರು. ಆದರೆ ಇಂದು ಆಸ್ಪತ್ರೆಯಲ್ಲಿ ಔಷಧಿಗಳೂ ಸಹ ಸಿಗದಂತಹ ದುಸ್ತಿತಿಗೆ ತಲುಪಿದೆ. ವೇತನ ಒಪ್ಪಂದ ಕಾರ್ಮಿಕರ ಮೂಲಭೂತ ಹಕ್ಕು 30 ತಿಂಗಳು ಗತಿಸಿದರೂ ಅದು ಇನ್ನೂ ಜಾರಿಯಾಗುತ್ತಿಲ್ಲ. ಅದಲ್ಲದೇ ಅನೇಕ ಕಾರ್ಮಿಕರ ಸಮಸ್ಯೆಗಳಿದ್ದು, ಅವುಗಳಿಗೆ ಇವರ ಸ್ಪಂದನೆ ಇಲ್ಲದಿದ್ದರಿಂದ್ದಿಂದು ಕಾರ್ಮಿಕರು ಟಿಯುಸಿಐ ಮುಖಂಡರುಗಳಿಗೆ ಛೀಮಾರಿ ಹಾಕುತ್ತಿದ್ದಾರೆ.

ಕಾರ್ಮಿಕ ಸಂಘಕ್ಕೆ ಆಯ್ಕೆಗೊಂಡ ಮುಖಂಡರು ಕಾರ್ಮಿಕರ ಹಿತಕ್ಕಿಂತ ತಮ್ಮ ಸ್ವ ಹಿತಾಸಕ್ತಿಗಾಗಿ ಬಡಿದಾಡುತ್ತಿರುವುದರಿಂದ ಕಾರ್ಮಿಕರ ಬೇಡಿಕೆಗಳು ಈಡೇರುತ್ತಿಲ್ಲ. ಜಾತಿ, ಧರ್ಮ, ವ್ಯಕ್ತಿಗತ ಆಧಾರಿತ ನಾಯಕತ್ವ ಇದ್ದರೆ ಖಂಡಿತಾ ನಮ್ಮ ಕಾರ್ಮಿಕರಿಗೆ ನ್ಯಾಯ ಸಿಗುವುದಿಲ್ಲ. ಇವೆಲ್ಲವುಗಳನ್ನು ಮೀರಿ ನಾಯಕತ್ವ ನೀಡುವ ಸಿಐಟಿಯು ಒಂದೇ ಸ್ಥಳೀಯ ಕಾರ್ಮಿಕರಿಗೆ ನ್ಯಾಯ ಒದಗಿಸಬಲ್ಲದು. ಕಾರ್ಮಿಕರ ಬೇಡಿಕೆಗಳ ಈಡೇರಿಕೆಗಾಗಿ ಚುನಾಯಿತ ಕಾರ್ಮಿಕ ಸಂಘದ ಕಾನೂನು ರೀತಿಯ ಯಾವುದೇ ರೀತಿಯ ಹೋರಾಟಕ್ಕೆ ಬೆಂಬಲ ನೀಡಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಈ ಸಂದರ್ಭದಲ್ಲಿ ಸಿಐಟಿಯು ಹಟ್ಟಿ ಘಟಕದ ಎಂ.ಸಿ. ನಿಂಗಪ್ಪ, ಕಾರ್ಯದರ್ಶಿ ವೈ. ಬಸವರಾಜ್, ತಿಮ್ಮಣ್ಣ ಭೂಪೂರು, ಮುಖಂಡರಾದ ಎಂ.ಮೌಲಾಸಾಬ್, ಅಮೀನುದ್ದೀನ್ ಸಾಸಿಹಾಳ್, ಸಂಗಪ್ಪ, ಕೊಂಡಯ್ಯ, ಜಿ.ಎಸ್.ಯಂಕೋಬ, ಹನೀಫ್, ಸಿಪಿಎಂ ಮುಖಂಡ ರಮೇಶ ವೀರಾಪೂರು ಉಪಸ್ಥಿತರಿದ್ದರು. ಹಟ್ಟಿ ಚಿನ್ನದ ಗಣಿಯ ಚುನಾಯಿತ ಕಾರ್ಮಿಕ ಸಂಘಟನೆಯ ವೈಫಲ್ಯಗಳ ವಿರುದ್ಧ ಸಿಐಟಿಯುಯಿಂದ ಕರಪತ್ರ ಬಿಡುಗಡೆ ಮಾಡಲಾಯಿತು. ಇದೇ ವೇಳೆ ಕರಪತ್ರಗಳನ್ನು ಚಿನ್ನದ ಗಣಿಯ ಮಲ್ಲಪ್ಪ ಶಾಪ್, ಸೆಂಟ್ರಲ್ ಶಾಪ್, ವಿಲೇಜ್ ಶಾಪ್ ಹಾಗೂ ಹಳೇ ಕ್ಯಾಂಪ್ ಬಸ್ ಸ್ಟ್ಯಾಂಡ್ನಲ್ಲಿ ಕಾರ್ಮಿಕರಿಗೆ ಹಂಚಲಾಯಿತು.

ಕರಪತ್ರದಲ್ಲಿ ಕಾರ್ಮಿಕರು ಅನುಭವಿಸುತ್ತಿರುವ ಸಂಕಷ್ಟಗಳು, ಚುನಾಯಿತ ಸಂಘಟನೆಯ ವೈಫಲ್ಯಗಳುಮ ಆಸ್ಪತ್ರೆಯ ದುಸ್ಥಿತಿ ಹಾಗೂ ಕಾರ್ಮಿಕರಿಗೆ ಮೂಲಭೂತ ಸೌಕರ್ಯಗಳ ಕೊರತೆ ಕುರಿತಂತೆ ಬೆಳಕು ಚೆಲ್ಲಲಾಗಿದೆ. ಕೂಡಲೇ ಕಾರ್ಮಿಕರ ಬೇಡಿಕೆಗಳಿಗೆ ಸ್ಪಂದಿಸಿದೇ ಇದ್ದಲ್ಲಿ ಸಿಐಟಿಯು ನಿಂದ ಉಗ್ರವಾದ ಹೋರಾಟ ಮಾಡಲಾಗುವುದೆಂದು ಎಚ್ಚರಿಸಲಾಗಿದೆ. ●

ಹಟ್ಟಿ ಚಿನ್ನದ ಗಣಿಯ ಚುನಾಯಿತ ಕಾರ್ಮಿಕ ಸಂಘಟನೆಯ ವೈಫಲ್ಯಗಳ ವಿರುದ್ಧ ಸಿಐಟಿಯುಯಿಂದ ಕರಪತ್ರ ಬಿಡುಗಡೆ ಮಾಡುತ್ತಿರುವುದು





ಸಿಐಟಿಯು ಜೊತೆ ಮುಖ್ಯಮಂತ್ರಿ ಸಭೆ

ಅಕ್ಟೋಬರ್ 9 ರಂದು ಮಾನ್ಯ ಮುಖ್ಯಮಂತ್ರಿ ಕುಮಾರ ಸ್ವಾಮಿಯವರು ಸಿಐಟಿಯು ರಾಜ್ಯ ಮುಖಂಡರೊಂದಿಗೆ ಅಧಿಕೃತ ಸಭೆಯೊಂದನ್ನು ನಡೆಸಿ ರಾಜ್ಯದ ಕಾರ್ಮಿಕ ವರ್ಗ ಎದುರಿಸುತ್ತಿರುವ ಸಮಸ್ಯೆಗಳಿಗೆ ಮುಂದಿನ ದಿನಗಳಲ್ಲಿ ಪರಿಹಾರ ಒದಗಿಸುವ ಭರವಸೆ ನೀಡಿದರು.

ಮುಖ್ಯವಾಗಿ ಕನಿಷ್ಟ ವೇತನ, ಗುತ್ತಿಗೆ ಕಾರ್ಮಿಕರ ಪ್ರಶ್ನೆಗಳು, ಕಾರ್ಮಿಕ ಸಂಘಗಳಿಗೆ ಮಾನ್ಯತೆ, ಜಿಲ್ಲಾ ಮಟ್ಟದಲ್ಲಿ ಕಾರ್ಮಿಕ ನ್ಯಾಯಾಲಯ ಸ್ಥಾಪನೆ, ಅಸಂಘಟಿತ ಕಾರ್ಮಿಕರಿಗೆ ಸಾಮಾಜಿಕ ಭದ್ರತೆ, ಕಟ್ಟಡ ಕಾರ್ಮಿಕರಿಗೆ ತ್ವರಿತವಾಗಿ ಸೌಲಭ್ಯ ವಿತರಿಸಲು ಸಿಬ್ಬಂದಿ ನೇಮಕ, ವಸತಿ ಪ್ರಶ್ನೆ, ಸ್ಕೀಂ ನೌಕರರನ್ನು ಕನಿಷ್ಟ ವೇತನ ಶೆಡ್ಯೂಲ್ ಗೆ ಸೇರ್ಪಡೆ, ತ್ರಿಪಕ್ಷಿಯ ಸಮಿತಿಗಳಿಗೆ ನೇಮಕ, ಕಾರ್ಮಿಕ ಸಮ್ಮೇಳನ ಆಯೋಜನೆ ಇತ್ಯಾದಿಗಳ ಕುರಿತು ಸಿಐಟಿಯು ನಾಯಕರು ಪ್ರಸ್ತಾಪಿಸಿದ ಅಂಶಗಳನ್ನು ಮುಖ್ಯಮಂತ್ರಿಗಳು ತಾಳ್ಮೆ ಯಿಂದ ಕೇಳಿಸಿಕೊಂಡಿದ್ದು ಮಾತ್ರವಲ್ಲ, ಅವುಗಳಿಗೆ ಖಂಡಿತವಾಗಿ ಸ್ಪಂಧಿಸುವ ಭರವಸೆಯನ್ನು ನೀಡಿದರು.

ಸಭೆಯಲ್ಲಿ ರಾಜ್ಯ ಸರಕಾರದ ಹಿರಿಯ ಅಧಿಕಾರಿ ಶ್ರೀ ಸೆಲ್ವ ಕುಮಾರ್, ಕಾರ್ಮಿಕ ಆಯುಕ್ತರು ಹಾಗೂ ಅವರೊಂದಿಗೆ ಇತರೆ ಹಿರಿಯ ಅಧಿಕಾರಿಗಳು, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ನಿರ್ದೇಶಕರು, ಸಿಐಟಿಯು ರಾಜ್ಯ ಅಧ್ಯಕ್ಷರಾದ ಎಸ್.ವರಲಕ್ಷ್ಮೀ, ಪ್ರಧಾನ ಕಾರ್ಯದರ್ಶಿ ಮೀನಾಕ್ಷಿ ಸುಂದರಂ, ಉಪಾಧ್ಯಕ್ಷ ರಾದ ವಿಜೆಕ ನಾಯರ್, ಆರ್.ಶ್ರೀನಿವಾಸ್, ರಾಜ್ಯ ಕಾರ್ಯದರ್ಶಿಗಳಾದ ಕೆ.ಎನ್ ಉಮೇಶ, ಕೆ.ಮಹಾಂತೇಶ, ಸೈಯದ್ ಮುಜೀಬ್, ಪ್ರತಾಪ್ ಸಿಂಹ, ಸುನಂದಾ, ಮಾಲಿನಿ ಮೇಸ್ತಾ ಭಾಗವಹಿಸಿದ್ದರು. ●

ಉಳ್ಳಾಲ ವಲಯ ಕಟ್ಟಡ ನಿರ್ಮಾಣ ಕಾರ್ಮಿಕರ ಸಮಾವೇಶ

ಕಟ್ಟಡ ಕಾರ್ಮಿಕರ ಕಲ್ಯಾಣ ಪರಿಷತ್ತು ಸ್ಥಾಪನೆಯಾಗಿ 12 ವರ್ಷಗಳಾಗಿವೆ. ಈಗಾಗಲೇ ಕಾರ್ಮಿಕರ ಕೊಡುಗೆಯಿಂದ ಪರಿಷತ್ತಿನಲ್ಲಿ ಸಂಗ್ರಹವಾಗಿರುವ ಏಳುವರೆ ಸಾವಿರ ಕೋಟಿ ರೂಪಾಯಿಯಲ್ಲಿ ಕೇವಲ ರೂ.320 ಕೋಟಿ ಮಾತ್ರ ಕಾರ್ಮಿಕ ಕಲ್ಯಾಣಕ್ಕಾಗಿ ವ್ಯಯಿಸಲಾಗಿದೆ. ಕಟ್ಟಡ ಕಾರ್ಮಿಕರಿಗೆ ಪೆನ್ಷನ್, ವೈದ್ಯಕೀಯ ಸೌಲಭ್ಯ, ಮದುವೆ ಸಹಾಯಧನ, ಮಕ್ಕಳಿಗೆ ಸ್ಕಾಲರ್‌ಶಿಪ್ ಇತ್ಯಾದಿ ಯೋಜನೆಗಳಿದ್ದರೂ ಅದನ್ನು ಕಾರ್ಮಿಕರ ಕುಟುಂಬಗಳಿಗೆ ಪ್ರಯೋಜನವಾಗುವಂತೆ ಸೌಲಭ್ಯದ ಮೊತ್ತವನ್ನು ಹೆಚ್ಚಿಸುವ ಕಾರ್ಯಕ್ರಮಗಳನ್ನು ಸರಕಾರಗಳು ಮಾಡುತ್ತಿಲ್ಲ. ಸಂಗ್ರಹವಾದ ಮೊತ್ತವನ್ನು ಯೋಗ್ಯ ಕಾರಣಕ್ಕಾಗಿ ಬಳಸುವ ಬದಲು, ಕಾರ್ಮಿಕರಿಗೆ ಅಷ್ಟಾಗಿ ಪ್ರಯೋಜನವಿರದಂಥ ಕಲ್ಯಾಣ ಮಂಟಪ ನಿರ್ಮಾಣದಂಥ ಯೋಜನೆಗೆ ಬಳಸಲು ಸರಕಾರ ಮುಂದಾಗಿದೆ. ಕೇಂದ್ರ ರಾಜ್ಯ ಸರಕಾರಗಳು ಈ ನೀತಿಯನ್ನು ಅಕ್ಟೋಬರ್ 7 ರಂದು ಕುತ್ತಾರ್ ಪದವಿನಲ್ಲಿ ಸೇರಿದ ಕಟ್ಟಡ ನಿರ್ಮಾಣ ಕಾರ್ಮಿಕರ ಉಳ್ಳಾಲ ವಲಯ ಸಮಾವೇಶದಲ್ಲಿ ಖಂಡಿಸಲಾಯಿತು. ಹಾಗೂ ಕಾರ್ಮಿಕರಿಗೆ ಸವಲತ್ತು ನೀಡುವ ವಿಷಯದಲ್ಲಿ ವೈಜ್ಞಾನಿಕ ನೀತಿ ಅನುಸರಿಸಬೇಕೆಂದು ಆಗ್ರಹಿಸಲಾಯಿತು.

ಕರ್ನಾಟಕ ರಾಜ್ಯ ಕಟ್ಟಡ ಮತ್ತು ನಿರ್ಮಾಣ ಕಾರ್ಮಿಕರ ಫೆಡರೇಶನನ್ನಿನ ದ.ಕ.ಜಿಲ್ಲಾಧ್ಯಕ್ಷ ಸುನಿಲ್ ಕುಮಾರ್ ಬಜಾಲ್ ಸಮಾವೇಶಕ್ಕೆ ಚಾಲನೆ ಕೊಟ್ಟು ಮಾತನಾಡಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಉಳ್ಳಾಲ ವಲಯ ಅಧ್ಯಕ್ಷ ಜನಾರ್ಧನ ಕುತ್ತಾರ್ ವಹಿಸಿದ್ದರು. ಸಿಐಟಿಯು ಜಿಲ್ಲಾ ಉಪಾಧ್ಯಕ್ಷ ಯು.ಬಿ.ಲೋಕಯ್ಯ, ಉಳ್ಳಾಲ ವಲಯ ಅಧ್ಯಕ್ಷ ಕೃಷ್ಣಪ್ಪ ಸಾಲ್ಯಾನ್, ಕಟ್ಟಡ ಕಾರ್ಮಿಕರ ಜಿಲ್ಲಾ ಸಮಿತಿ ಕಾರ್ಯದರ್ಶಿ ಯೋಗೀಶ್ ಜಪ್ಪಿನಮೊಗರು, ಸಿಐಟಿಯು ಜಿಲ್ಲಾ ಸಮಿತಿಯ ಪದ್ಮಾವತಿ ಶೆಟ್ಟಿ, ಜಯಂತ ನಾಯ್ಕ್ ಸಮಾವೇಶದಲ್ಲಿ ಅತಿಥಿಗಳಾಗಿ ಭಾಗವಹಿಸಿದ್ದರು. ಸಮಾವೇಶದಲ್ಲಿ ಹಿರಿಯ ಕಾರ್ಮಿಕರಾದ ವಿಶ್ವನಾಥ ತೇವುಲ, ಬಂಟಪ್ಪ ಮೂಲ್ಯ ಕುತ್ತಾರ್‌ಪದವು, ಚಂದಪ್ಪ ಪೂಜಾರಿಯವರನ್ನು ಸನ್ಮಾನಿಸಲಾಯಿತು. ■

ಪೋಲೀಸ್ ದೌರ್ಜನ್ಯ ಖಂಡಿಸಿ ಮೂಡಬಿದರೆಯಲ್ಲಿ ಪ್ರತಿಭಟನೆ

ಮೂಡಬಿದ್ರಿ ಪ್ರದೇಶದ ಡಿವೈಎಫ್ಐ ಕಾರ್ಯಕರ್ತ ರಿಯಾಜ್ ಮಾಂತೂರು ಮತ್ತು ಆತನ ಸಹೋದರ ಇರ್ಷಾದ್ ಇವರು ಮೂಡಬಿದರೆಯ ತಮ್ಮ ಅಂಗಡಿ ಮುಚ್ಚಿ ಕೆಲವು ದಿನಗಳ ಹಿಂದೆ ಮೂಡಬಿದರೆಯಿಂದ ಬೆಳ್ತಂಗಡಿ ಸಮೀಪದ ತಮ್ಮ ಊರಿಗೆ ಹೋಗುತ್ತಿದ್ದಾಗ ವೇಣೂರು ಠಾಣಾ ಪೋಲೀಸರು ಕಾರಣವಿಲ್ಲದೆ ಅಮಾನವೀಯವಾಗಿ ಹಲ್ಲೆ ನಡೆಸಿದ್ದಾರೆ. ಅಲ್ಲದೆ ಪೋಲೀಸ್ ಠಾಣೆಯೊಳಗೆ ಕುಳ್ಳಿರಿಸಿ ದೌರ್ಜನ್ಯ ಎಸಗಿದ್ದಾರೆ. ಇದನ್ನು ವಿರೋಧಿಸಿ ಅಕ್ಟೋಬರ್ 10 ರಂದು ಸಿಪಿಐ(ಎಂ) ಪಕ್ಷದ ನೇತೃತ್ವದಲ್ಲಿ ಮೂಡಬಿದರೆ ನಾಡ ಕಚೇರಿಯ ಎದುರು ಪ್ರತಿಭಟನೆ ನಡೆಸಲಾಯಿತು.

ಹಲ್ಲೆ ನಡೆಸಿರುವ ಪೋಲೀಸ್ ಕಾನ್ಸ್‌ಟೇಬಲ್‌ಗಳ ವಿರುದ್ಧ ಮೇಲಾಧಿಕಾರಿಗಳು ಕ್ರಮಕೈಗೊಳ್ಳಬೇಕೆಂದು ಪ್ರತಿಭಟನಾಕಾರರು ಆಗ್ರಹಿಸಿದರು.

ಪ್ರತಿಭಟನೆಯನ್ನುದ್ದೇಶಿಸಿ ಡಿವೈಎಫ್ಐ ರಾಜ್ಯಾಧ್ಯಕ್ಷ ಮುನೀರ್ ಕಾಟಿಪಳ್ಳ ಮಾತನಾಡಿದರು. ಸಿಪಿಐ(ಎಂ) ರಾಜ್ಯ ಸಮಿತಿ ಸದಸ್ಯ ಯಾದವ ಶೆಟ್ಟಿ, ಮೂಡಬಿದರೆ ವಲಯ ಕಾರ್ಯದರ್ಶಿ ರಮಣಿ, ಸಿಪಿಐ(ಎಂ) ಮುಖಂಡರಾದ ಸುಂದರ ಶೆಟ್ಟಿ, ರಾಧಾ, ಗಿರಿಜ ಡಿವೈಎಫ್ಐ ದ.ಕ.ಜಿಲ್ಲಾಧ್ಯಕ್ಷ ಬಿ.ಕೆ.ಇಮ್ತಿಯಾಜ್, ಕಾರ್ಯದರ್ಶಿ ಸಂತೋಷ್ ಬಜಾಲ್ ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು. ■

ಅತಿಥಿ ಅಂಕಣ




ಗುಜರಾತ್–ಮಾದರಿ ರಾಷ್ಟ್ರೀಯತೆ, ಉಪ–ರಾಷ್ಟ್ರೀಯತೆ

ಪ್ರೊ. ರಾಜೇಂದ್ರ ಚೆನ್ನಿ

ಈಗ ನಮ್ಮೊಂದಿಗಿರುವ ಅತಿಶಯ ರಾಷ್ಟ್ರವಾದವು (hyper nationalism) ಈ ಪ್ರಮಾಣದಲ್ಲಿ ಬೆಳೆಯುತ್ತದೆಯೆಂದು ಅವರಾರೂ ನಂಬಿರಲಿಕ್ಕಿಲ್ಲ. ಆದರೆ ಟಾಗೋರ್ ಹೇಳಿದಂತೆ ಅದರ ಅಪಾಯಗಳು ಇದೀಗ ಸಾರ್ವಜನಿಕ ಹಿಂಸೆಯ ಸ್ವರೂಪವನ್ನು ಪಡೆದುಕೊಂಡಿದೆ. ಗುಜರಾತ್ ನಲ್ಲಿ ದುಡಿಯುತ್ತಿದ್ದ ಬಡ ಕೆಲಸಗಾರವನ್ನು ಬಡಿದು ಹೊರಹಾಕಲಾಗುತ್ತಿದೆ. ಈ ಹಿಂದೆ ಮಹಾರಾಷ್ಟ್ರದಲ್ಲಿ ಇಂಥದೇ ನಡೆದಿದೆ. ಏಕೆಂದರೆ ರಾಷ್ಟ್ರವಾದದ ಮರಿಯಾಗಿರುವ ಉಪ–ರಾಷ್ಟ್ರವಾದವು ಇನ್ನೂ ಆಕ್ರಾಮಕವಾಗಿರುತ್ತದೆ. ಗುಜರಾತ್ ನಲ್ಲಿ ಆಗುತ್ತಿರುವುದು ರಾಷ್ಟ್ರವಿರೋಧಿ ಕೆಲಸವಲ್ಲವೆ? ಇತ್ತೀಚಿನ ಈ ಗುಜರಾತ್ ಮಾದರಿಯನ್ನು, ಅಂದರೆ ಬೇರೆ ರಾಜ್ಯದವರನ್ನು ನುಸುಳುಕೋರರು ಎನ್ನುವುದನ್ನು ಉಳಿದ ರಾಜ್ಯಗಳು ಅನುಕರಿಸತೊಡಗಿದರೆ?

ಆಧುನಿಕ ಭಾರತದ ಮಹಾನ್ ಬರಹಗಾರ ಹಾಗೂ ಚಿಂತಕರಾದ ರವೀಂದ್ರನಾಥ ಟಾಗೋರ್ ಅವರು ರಾಷ್ಟ್ರವಾದವನ್ನು ತಾತ್ವಿಕವಾಗಿ ವಿರೋಧಿಸಿದ್ದರು. ಅದೂ ಕೂಡ ಸ್ವಾತಂತ್ರ್ಯ ಹೋರಾಟದ ಭಾವುಕವಾದ ತೀವ್ರ ಹೋರಾಟದ ಸಂದರ್ಭದಲ್ಲಿ. ಅವರ ಮುಖ್ಯ ವಾದವೆಂದರೆ ರಾಷ್ಟ್ರದ ಕಲ್ಪನೆಯು ತನ್ನಲ್ಲಿಯೇ ಒಂದು ಆಕ್ರಾಮಕವಾದ ಸ್ವರೂಪವನ್ನು ಪಡೆದುಕೊಂಡರೆ ಅದರ ದೂರಗಾಮಿ ಪರಿಣಾಮಗಳು ಅಪಾಯಕಾರಿಯಗಿರುತ್ತವೆ. ಅಲ್ಲದೆ ರಾಷ್ಟ್ರದ ಕಲ್ಪನೆಯು ಆಧುನಿಕ ಕಾಲದಲ್ಲಿ ಯುರೋಪಿನ ರಾಷ್ಟ್ರಗಳಿಂದ ಬಂದಿದ್ದು, ಅದು ಒಂದು ಭಾಷೆ, ಒಂದು ಸಂಸ್ಕೃತಿ ಒಂದು ಧರ್ಮಗಳ ಚೌಕಟ್ಟಿನಲ್ಲಿ ರೂಪಿತವಾಗಿದ್ದುದು. ಆ ಪರಿಕಲ್ಪನೆ ಬಹುಭಾಷಿಕ, ಬಹು ಧರ್ಮೀಯ ಬಹು ಸಂಸ್ಕೃತಿಗಳ ಭಾರತಕ್ಕೆ ಅಪಾಯಕಾರಿಯಾದದ್ದು. ಏಕೆಂದರೆ ಬಹುಮತವುಳ್ಳ ಧರ್ಮ ಹಾಗೂ ಭಾಷೆಗಳು ಇತರ ಧರ್ಮ ಭಾಷೆಗಳ ಮೇಲೆ ಅಧಿಕಾರ ಚಲಾಯಿಸತೊಡಗುತ್ತದೆ. ಅಲ್ಲದೆ ಒಂದು ಪ್ರಧಾನ ಸಂಸ್ಕೃತಿಯು ಇತರೆ ಕಿರುಸಂಸ್ಕೃತಿಗಳ ಮೇಲೆ ಆಕ್ರಮಣ ಮಾಡತೊಡಗುತ್ತದೆ. ತಮ್ಮ ವಿಚಾರಗಳಲ್ಲಿ ಟಾಗೋರ್ ವರಿಗೆ ಅದೆಷ್ಟು ನಂಬಿಕೆಯಿತ್ತೆಂದರೆ ಇದೇ ಮಾತನ್ನು ಜಪಾನ್ ನಲ್ಲಿ ತಮ್ಮ ಭಾಷಣಗಳಲ್ಲಿ ಹೇಳಿ ಅಲ್ಲಿಯ ಜನರ ಅಪಾರ ಟೀಕೆ ಹಾಗೂ ಅಸಹನೆಗೆ ಗುರಿಯಾದರು. ಟಾಗೋರ್ ರ ವಿಚಾರಗಳನ್ನು ವಿಸ್ತಾರವಾಗಿ ಅಧ್ಯಯನ ಮಾಡಿರುವ ಆಶೀಸ್ ನಂದಿಯವರು ಟಾಗೋರ್ ರ ಕೆಲವು ಕಾದಂಬರಿಗಳು ಕೂಡ ರಾಷ್ಟ್ರವಾದದ ಬಗ್ಗೆ ಅಪ್ರಿಯ ಸತ್ಯಗಳನ್ನು ಹೇಳಿ ವಿವಾದಗಳನ್ನು ಸೃಷ್ಟಿಸಿದ್ದನ್ನು ವಿವರಿಸುತ್ತಾರೆ. ಅವರು ಬರೆದ ಪುಟ್ಟ ಕಾದಂಬರಿ "ನಾಲ್ಕು ಅಧ್ಯಾಯಗಳು" ಅವರನ್ನು ಎಲ್ಲಾ ಕ್ರಾಂತಿಕಾರಿ ರಾಷ್ಟ್ರವಾದಿಗಳ ಶತ್ರುವನ್ನಾಗಿ ಮಾಡಿಬಿಟ್ಟಿತು. ತಮ್ಮ ಬರಹಗಳಲ್ಲಿ ಅವರು ರಾಷ್ಟ್ರವನ್ನು "ಅಪದೇವತಾ" ಎಂದು ಕರೆದಿದ್ದರು. ವಿಶೇಷವೆಂದರೆ ವಿವಿದಾತ್ಮಕ ವ್ಯಕ್ತಿಯಾದ ಅನಿ ಬೆಸೆಂಟ್ ಅವರು ಕಂಡ ಭಾರತವು ರಾಷ್ಟ್ರವಾದಕ್ಕೆ ಅದು ಯಾವ ಭಾಷೆಯಲ್ಲಿ ಮಾತನಾಡುತ್ತದೆ ಎಂದು ತುಂಬಾ ಮೊದಲೇ ಕೇಳಿದ್ದರು. ಹೀಗಾಗಿ ಸ್ವಾತಂತ್ರ್ಯಕ್ಕಾಗಿ ಹೋರಾಟ ಮಾಡುತ್ತಿದ್ದ ಪ್ರಮುಖರು (ಗಾಂಧಿ ಸೇರಿದಂತೆ) ರಾಷ್ಟ್ರವೆನ್ನುವ ಕಲ್ಪನೆಯ ಕುರುಡು ಹಿಂಬಾಲಕರಾಗಿರಲಿಲ್ಲ.

ಈಗ ನಮ್ಮೊಂದಿಗಿರುವ ಅತಿಶಯ ರಾಷ್ಟ್ರವಾದವು (hyper nationalism) ಈ ಪ್ರಮಾಣದಲ್ಲಿ ಬೆಳೆಯುತ್ತದೆಯೆಂದು ಅವರಾರೂ ನಂಬಿರಲಿಕ್ಕಿಲ್ಲ. ಆದರೆ ಟಾಗೋರ್ ಹೇಳಿದಂತೆ ಅದರ ಅಪಾಯಗಳು ಇದೀಗ ಸಾರ್ವಜನಿಕ ಹಿಂಸೆಯ ಸ್ವರೂಪವನ್ನು ಪಡೆದುಕೊಂಡಿದೆ. ಅಸ್ಸಾಂ ರಾಜ್ಯದಲ್ಲಿ ನಾಗರೀಕರನ್ನು ನೊಂದಾಯಿಸುವ ಕೆಲಸವು ಆರಂಭವಾದಾಗಿನಿಂದ, ಇದೇ ಕ್ರಮವನ್ನು ಎಲ್ಲಾ ರಾಜ್ಯಗಳಲ್ಲೂ ಜರುಗಿಸಬೇಕೆಂದು ಅಮಿತ್ ಶಾ ಹೇಳುತ್ತಿದ್ದಾರೆ. ಅಷ್ಟು ಮಾತ್ರವಲ್ಲ, ನಾಗರೀಕರಲ್ಲದ 'ನುಸುಳಿ' ಬಂದವರನ್ನು ಮುಗಿಸಿಬಿಡಬೇಕೆಂದು ಕೂಗುಗಳು ಕೇಳಿಬರುತ್ತಿದೆ. ಇದಾಗಿ ಕೆಲವೇ ದಿನಗಳಲ್ಲಿ ಗುಜರಾತ್ ನಲ್ಲಿ ದುಡಿಯುತ್ತಿದ್ದ ಬಡ ಕೆಲಸಗಾರವನ್ನು ಬಡಿದು ಹೊರಹಾಕಲಾಗುತ್ತಿದೆ. ಈ ಹಿಂದೆ ಮಹಾರಾಷ್ಟ್ರದಲ್ಲಿ ಇಂಥದೇ ನಡೆದಿದೆ. ಏಕೆಂದರೆ ರಾಷ್ಟ್ರವಾದದ ಮರಿಯಾಗಿರುವ ಉಪ–ರಾಷ್ಟ್ರವಾದವು ಇನ್ನೂ ಆಕ್ರಾಮಕವಾಗಿರುತ್ತದೆ. ಇಲ್ಲಿ ಪ್ರಶ್ನೆಯೆಂದರೆ ನಮ್ಮ ಸಂವಿಧಾನವು ಹೇಳುವ ಹಾಗೆ ಭಾರತವು federal union, ಒಕ್ಕೂಟವಲ್ಲವೆ? ಭಾರತದ ಯಾವುದೇ ಪ್ರಜೆಯು ಯಾವುದೇ ಅಡೆತಡೆಯಿಲ್ಲದೆ ಭಾರತದ ಯಾವುದೇ ರಾಜ್ಯಕ್ಕೆ ಹೋಗುವಂತಿಲ್ಲವೆ? ಉದ್ಯೋಗವನ್ನು ಮಾಡುವಂತಿಲ್ಲವೆ? ಇದು ಒಕ್ಕೂಟವಾದರೆ ಗುಜರಾತ್ ನಲ್ಲಿ ಆಗುತ್ತಿರುವುದು ರಾಷ್ಟ್ರವಿರೋಧಿ ಕೆಲಸವಲ್ಲವೆ? ಇದರ ದೂರಗಾಮಿ ಪರಿಣಾಮಗಳನ್ನು ಕೇಂದ್ರ ಸರಕಾರವು ಅರಿತಿಲ್ಲವೆ? ಭಾರತದ ವ್ಯಾಪಾರದ ಬೆನ್ನೆಲುಬಾಗಿರುವ ಗುಜರಾತಿಗಳನ್ನು ಬೇರೆ ಎಲ್ಲಾ ರಾಜ್ಯಗಳಿಂದ ಅಲ್ಲಿಯ ಜನರು ಹಿಂಸೆಯ ಮೂಲಕ ಹೊರಗೆ ಹಾಕಲು ಆರಂಭಿಸಿದರೆ ಏನಾಗಬಹುದು? ಎಲ್ಲರ, ಇತ್ತೀಚಿನ ಈ ಗುಜರಾತ್ ಮಾದರಿಯನ್ನು, ಅಂದರೆ ಬೇರೆ ರಾಜ್ಯದವರನ್ನು ನುಸುಳುಕೋರರು ಎನ್ನುವುದನ್ನು ಉಳಿದ ರಾಜ್ಯಗಳು ಅನುಕರಿಸತೊಡಗಿದರೆ? ಕ್ಷುಲ್ಲಕವಾದ ರಾಜಕೀಯ ಲಾಭಕ್ಕಾಗಿ ಆಳುವ ಪಕ್ಷವು ಹೀಗೆ ಭಾರತ ಒಕ್ಕೂಟದ ಕಲ್ಪನೆಯನ್ನು ಒಡೆಯತೊಡಗಿದರೆ ಭವಿಷ್ಯದಲ್ಲಿ ಆಂತರಿಕ ಯುದ್ಧವಾಗುವುದು ನಿಶ್ಚಿತ. ರಾಷ್ಟ್ರದ ಇನ್ನೂ ಅನೇಕ ವಿಭಜನೆಗಳು ಆಗಬೇಕೆನ್ನುವುದು ಈ ಪಕ್ಷದ ಉದ್ದೇಶವಾಗಿದೆಯೇ? ಇದು ಗಂಭಿರವಾದ ವಿಷಯ. 2019 ರ ಚುನಾವಣೆಗಳು ಭಾರತೀಯ ನಾಗರೀಕತೆಗಿಂತ ದೊಡ್ಡವು ಅಲ್ಲ. ಮುಖ್ಯವಾಗಿ ಬಡಜನರು ಶ್ರಮಿಕರು ಬೇರೆ ರಾಜ್ಯಗಳಿಗೆ ವಲಸೆ ಬರುವುದು ಎರಡು ಹೊತ್ತಿನ ಕೂಳಿಗಾಗಿ. ರಾಷ್ಟ್ರ ದ್ರೋಹ ಮಾಡುವುದಕ್ಕಲ್ಲ. ಇದಕ್ಕೆ ಕಾರಣ ರಾಜ್ಯ ಸರಕಾರಗಳು ತಮ್ಮ ಪ್ರಜೆಗಳನ್ನು ಬಡತನದ ಹೀನಾಯ ಸ್ಥಿತಿಯಲ್ಲಿಡುವುದು. ಉದಾಹರಣೆಗೆ ಉತ್ತರ ಕರ್ನಾಟಕ ಹಾಗೂ ಹೈದರಾಬಾದ್ ಕರ್ನಾಟಕದ ಬಡವರು ಬೇರೆ ರಾಜ್ಯಗಳಿಗೆ ಗುಳೆಹೋಗುವುದು ಅಲ್ಲಿ "ನುಸುಳಿ" ರಾಷ್ಟ್ರದ್ರೋಹ ಮಾಡುವುದಕ್ಕಲ್ಲ. ಬರೀ ಕೂಳಿಗಾಗಿ. ಅಂದ ಹಾಗೆ ನಮ್ಮ ರಾಷ್ಟ್ರವಾದಿಗಳ ವಾದವನ್ನು ತರ್ಕವನ್ನು ಮುಂದುವರೆಸುವುದಾದರೆ ಅಮೇರಿಕ ಹಾಗೂ ಇತರ ದೇಶಗಳಲ್ಲಿರುವ ಇವರ ಬಂಧುಗಳನ್ನು ಅಲ್ಲಿಯ ಜನರು ತಕ್ಷಣ ಹೊರಗೆ ಹಾಕಬೇಕಲ್ಲವೆ? ■



ವ್ಯಂಗ್ಯ ಚಿತ್ರ: ಸಂದೀಪ್ ಅಧ್ವರ್ಯು

#MeToo #UsToo
#ಪುರುಷರು_ಮನುಷ್ಯರಾಗುವುದು_ಯಾವಾಗ?



ಕ್ರೀಡಾಪಟು, ಪತ್ರಕರ್ತ, ಕಲಾವಿದ, ನಟ, ರಾಜಕಾರಣಿ.. ಹೀಗೆ ಪುರುಷ ಎಂಬ ಪ್ರಾಣಿಯ ವಿಕೃತಿಗಳು MeToo ಅಭಿಯಾನದಿಂದ ಅನಾವರಣಗೊಳ್ಳುತ್ತಿವೆ. ಸುದೀರ್ಘ ಕಾಲದ ನಂತರ ಸಂತ್ರಸ್ತರು ಸದ್ದು ಮಾಡುತ್ತಿರುವುದಕ್ಕೆ ಕುಹಕ, ವ್ಯಂಗ್ಯ ಮಾಡದೆ ಈಗಲಾದರೂ ಸಂತ್ರಸ್ತರ ಧ್ವನಿಗೆ ಹೆಮ್ಮೆಪಟ್ಟು ಬೆನ್ನು ತಟ್ಟಿ ಸಂತೈಸಬೇಕಿದೆ. ನಾವು ಪುರುಷರಷ್ಟೇ ಅಲ್ಲ ಮನುಷ್ಯರು ಎಂಬುದನ್ನು ಮರೆಯಬೇಕಿದೆ.

ಇಂತಹ ವಿಕೃತಿಗೆ ಗುರಿಯಾದವರಲ್ಲಿ ಆಗ ತಾನೇ ಆಯಾ ಕ್ಷೇತ್ರಗಳಿಗೆ ಕಾಲೂರಿದವರು, ಬದುಕಿಗೆ ನೆಲೆ ಅರಸಿ ಬಂದವರು ಏನಾದರೂ ಸಾಧಿಸುವ ಕನಸು ಕಂಡವರು. ಇವೆಲ್ಲಾ ಸಾಕಾರಗೊಳ್ಳಲು ಯಾರು ನೆರವಾಗಬಹುದು ಎಂದುಕೊಂಡರೋ ಅವರಿಂದಲೇ ವಿಕೃತಿ ನಡೆದು ನಿಂತ ನೆಲವೇ ಕುಸಿದು ಹೋದವರು.

MeToo ಅಭಿಯಾನ ಆರಂಭವಾಗಿ ಒಂದೊಂದೇ ಸುರುಳಿ ಬಿಚ್ಚಿಕೊಳ್ಳುತ್ತಿದ್ದಂತೆ, ಸಂಬಂಧಿಸಿದ ವ್ಯಕ್ತಿಗಳನ್ನು ವಯಕ್ತಿಕ ನೆಲೆಯಲ್ಲಿ ಟೀಕಿಸುತ್ತಾ ಇಡೀ ಪುರುಷರನ್ನೇ ಹೊಣೆಯಾಗಿಸುವ ಕ್ರಿಯೆ ಸಾಗಿದೆ. ಇಂತಹ ಹೀನ ಕಾರ್ಯದಲ್ಲಿ ತೊಡಗಿದ ವ್ಯಕ್ತಿಗಳನ್ನು ಶೋಧಿಸಿ ಶಿಕ್ಷಿಸುವಾಗಲೇ ಈ ರೀತಿಯ ಸನ್ನಿವೇಶವನ್ನು, ವ್ಯವಸ್ಥೆಯನ್ನು ಮರೆಮಾಚುವುದು ಸರಿಯಾಗಲಾರದು.

ಪಾಳೇಗಾರಿ ಪುರುಷಾಹಂಕಾರವನ್ನು ಕಾಯ್ದುಕೊಂಡೇ ಬಂಡವಾಳಶಾಹಿಯ ಭೋಗದ ಜಗತ್ತಿಗೆ ಕಾಲಿರಿಸಿದ್ದೇವೆ. ಎಲ್ಲರೂ ನನ್ನ ಅಧೀನ ಎಂಬ ಮನಸ್ಥಿತಿಯಿಂದ ಎಲ್ಲವೂ ನನ್ನ ಅನುಭೋಗದ 'ಸರಕು' ಎಂಬಲ್ಲಿಗೆ ತಲುಪಿದ್ದೇವೆ. ಮನುಷ್ಯರನ್ನು, ಮಹಿಳೆಯರನ್ನು ಸರಕಿನ ಮಟ್ಟಕ್ಕೆ ಇಳಿಸಿರುವ ಸಾಂಸ್ಕೃತಿಕ ವಾತಾವರಣದಲ್ಲಿ ಬದುಕುತ್ತಿದ್ದೇವೆ. ಇಂತಹ ಸಾಂಸ್ಕೃತಿಕ ಮೌಲ್ಯಗಳ ವಿರುದ್ಧ ಮಾತನಾಡದೆ, ಬದಲಾಯಿಸದೆ ವ್ಯಕ್ತಿಗತ ಟೀಕೆಗಳಿಂದ ತುಂಬಾ ಸಾಧಿಸಲು ಸಾಧ್ಯವಾಗದು.

ಎಲ್ಲಾ ಕ್ಷೇತ್ರಗಳಲ್ಲಿ ಕೆಲಸದ ಅಭದ್ರತೆ ಆವರಿಸಿದೆ. ಬಂಡವಾಳಶಾಹಿ ಸಮಾಜವೊಂದರ ಖಾಯಂ ಸ್ಥಿತಿ ಇದು. ಬಹಳಷ್ಟು ನೊಂದವರು ಆ ಕ್ಷಣದಲ್ಲೇ ಮಾತನಾಡಲು ಸಾಧ್ಯವಾಗದಿರುವುದು ಇಂತಹ ಅಭದ್ರತೆಯ ಕಾರಣಕ್ಕೆ. ಈ ಸ್ಥಿತಿ ಬದಲಾಗದೆ ವಿಕೃತಿಗಳು ನಿಲ್ಲುವುದಿಲ್ಲ. ಈ ವಾಸ್ತವವನ್ನು ಬದಲಾಯಿಸುವ ಹೊಣೆಗಾರಿಕೆ ಸಂತ್ರಸ್ತರೂ ಸೇರಿದಂತೆ ಸಮಾಜದ ಎಲ್ಲರ ಮೇಲೂ ಇದೆ. ಖಾಯಂ ಕೆಲಸ, ಕಾರ್ಮಿಕ ಕಾನೂನುಗಳ ಸಮರ್ಪಕ ಜಾರಿ, ಕೆಲಸದ ಸ್ಥಳದಲ್ಲಿ ಲೈಂಗಿಕ ದೌರ್ಜನ್ಯ ವಿರೋಧಿ ಸಮಿತಿಗಳು ಎಲ್ಲಕ್ಕಿಂತ ಮುಖ್ಯವಾಗಿ ಸಂಘಟಿತ ಹೋರಾಟ ಇಂತಹ ಪುರುಷಾಹಂಕಾರದ ವಿಕೃತಿಗಳನ್ನು ತಡೆಯಬಲ್ಲುದು. #MeeTooFascists #MeTooProgressive ಎಂದು ಹೇಳುವಾಗ ಫ್ಯಾಸಿಸ್ಟರು ಪುರುಷರನ್ನು ಮೃಗಗಳನ್ನಾಗಿಸುವ, ಪ್ರಗತಿಪರರು, ನಿರ್ದಿಷ್ಟವಾಗಿ ಎಡಪಂಥೀಯ ಚಳವಳಿ, ಪುರುಷನನ್ನು ಮನುಷ್ಯನನ್ನಾಗಿಸುವ ಕಾಯಕದಲ್ಲಿ ತೊಡಗಿರುವುದನ್ನು ಗುರುತಿಸಬೇಕಿದೆ.

ಪುರುಷ ಮನುಷ್ಯನಾಗಬೇಕಾದರೆ ಅವನು ಪುರುಷ ಎಂದು ಮೆರೆಯಲು ಕಾರಣವಾಗಿರುವ ಸಮಾಜವನ್ನು, ಆರ್ಥಿಕ–ಸಾಮಾಜಿಕ ಸಂಬಂಧಗಳನ್ನು ಬದಲಾಯಿಸಬೇಕಾಗಿದೆ. ಇದೊಂದು ದೂರದ, ದುರ್ಗಮ ಹಾದಿಯಾದರೂ ಕ್ರಮಿಸಲೇಬೇಕಾಗಿದೆ. ಆ ಹಾದಿಯಲ್ಲಿ ಸಿಗುವ ಅಕ್ಬರ್, ದೀಕ್ಷಿತ್, ಮಲಿಂಗಾ ... ತರದ ಕಲ್ಲುಮುಳ್ಳುಗಳನ್ನು ಪುಡಿಗುಟ್ಟುತ್ತಾ ಗುರಿ ಮುಟ್ಟಬೇಕಾಗಿದೆ. ನಮಗೀಗ ಬರೀ ಕಲ್ಲು, ಮುಳ್ಳುಗಳು ಮಾತ್ರ ಕಾಣುತ್ತಿವೆ.


– ಟಿ.ಎಲ್. ಕೃಷ್ಣೇಗೌಡ

ಮಾತೆಂದರೆ ಇದು

ಕಾಂಟ್ ಮತ್ತು ಪಿಸ್ಟೆ
ನೀಲ ಗಗನವನ್ನೇರಿದರು
ದೂರದತಿನಿಗೂಢ ತತ್ವಗಳ
ಹುಡುಕುತ್ತಾ !

ನಾನಾದರೂ
ಬೀದಿಗಿಳಿಯುತ್ತೇನೆ
ಊರು ಕೇರಿ ಸುತ್ತುತ್ತೇನೆ
ಅರಸುತ್ತ
ಬದುಕಿನ ಯಥಾರ್ಥಗಳ !

– ಕಾರ್ಲ್ ಮಾರ್ಕ್ಸ್



ಶಬರಿಮಲೆ ದೇವಸ್ಥಾನ
ಹಿಂದಕ್ಕೆ ಸರಿಯುವ ಪ್ರಶ್ನೆಯೇ ಇಲ್ಲ



ಕೇರಳದಲ್ಲಿ ಆರೆಸ್ಸೆಸ್ ತಿಪ್ಪರಲಾಗ ಹಾಕಿದೆ. ಕಾಂಗ್ರೆಸ್ ಸಮಯಸಾಧಕತನ ಪ್ರದರ್ಶಿಸುತ್ತಿದೆ. ಪ್ರತಿಗಾಮಿ ಮತ್ತು ಮತ್ತು ಸಂಪ್ರದಾಯಶರಣ ಶಕ್ತಿಗಳು "ಧರ್ಮ ಅಪಾಯದಲ್ಲಿದೆ" ಎಂಬ ಕೂಗೆಬ್ಬಿಸಲು ಪ್ರಯತ್ನಿಸುತ್ತಿವೆ. ಆದರೆ ಇಂತಹ ಕುತಂತ್ರ ಬಯಲಾಗುತ್ತದೆ. ಲಿಂಗ ಸಮಾನತೆಗೆ ಮತ್ತು ಮಹಿಳೆಯರ ಹಕ್ಕುಗಳಿಗೆ ಸವಾಲನ್ನು ಕೇರಳ ಸಮಾಜದ ಎಲ್ಲ ಪ್ರಗತಿಶೀಲ ಮತ್ತು ಪ್ರಜಾಪ್ರಭುತ್ವವಾದಿ ವಿಭಾಗಗಳು ನೇರವಾಗಿ ಎದುರಿಸಬೇಕು. ಅದು ಗತಕಾಲದ ಕತ್ತಲ ಗುಹೆಗಳಿಗೆ ಮರಳಲು ಈಗ ಸಾಧ್ಯವಿಲ್ಲ.



—ಪ್ರಕಾಶ ಕಾರಟ್

ಕೇರಳದ ಶಬರಿಮಲೆ ದೇವಸ್ಥಾನದಲ್ಲಿ ಎಲ್ಲ ವಯಸ್ಸಿನ ಮಹಿಳೆಯರಿಗೆ ಪ್ರವೇಶಕ್ಕೆ ಅವಕಾಶ ನೀಡಿರುವ ಸುಪ್ರಿಂ ಕೋರ್ಟ್ ತೀರ್ಪು ಮಹಿಳೆಯರ ಸಮಾನ ಹಕ್ಕುಗಳನ್ನು ಎತ್ತಿ ಹಿಡಿಯುವ ಮತ್ತು ಪೂಜೆಯ ಅವರ ಮೂಲಭೂತ ಹಕ್ಕನ್ನು ಎತ್ತಿ ಹಿಡಿಯುವ ಒಂದು ಶಕ್ತಿಶಾಲಿ ತೀರ್ಪು.

ನ್ಯಾಯಮೂರ್ತಿ ಚಂದ್ರಚೂಡ್ ಅವರ ಈ ಕುರಿತ ಸಹಮತಿಯ ತೀರ್ಪು ಶುದ್ಧತೆ ಮತ್ತು ಮಾಲಿನ್ಯದ ಶ್ರೇಣೀಕರಣದ ಮೇಲೆ ನಿಂತಿರುವ ಜಾತಿಪದ್ಧತಿ ಮತ್ತು ಮಹಿಳೆಯರನ್ನು ಹೊರಗಿಡುವುದರ ನಡುವಿನ ಸಾಮ್ಯತೆಯನ್ನು ಬಹಳ ಚೆನ್ನಾಗಿ ಗುರುತಿಸಿದೆ. "ಮುಟ್ಟಿನ ಆಧಾರದಲ್ಲಿ ಮಹಿಳೆಯರನ್ನು ಹೊರಗಿಡುವುದು ಅಸ್ಪೃಶ್ಯತೆಯ ಒಂದು ಸ್ವರೂಪವಷ್ಟೇ. ಇದು ಸಂವಿಧಾನಿಕ ಮೌಲ್ಯಗಳಿಗೆ ಹೊರತಾದ್ದು" ಎಂದು ಅವರು ಹೇಳಿದ್ದಾರೆ.

ಸಿಪಿಐ(ಎಂ) ಮತ್ತು ಕೇರಳದ ಎಲ್‌ಡಿಎಫ್ ಸರಕಾರ ತೀರ್ಪನ್ನು ಸ್ವಾಗತಿಸಿವೆ. ತಾನು ತೀರ್ಪನ್ನು ಜಾರಿಗೊಳಿಸಲು ಬದ್ಧ ಎಂದು ಎಲ್‌ಡಿಎಫ್ ಸರಕಾರ ಹೇಳಿದೆ. ಸರಕಾರ ಮರು ಪರಾಮರ್ಶೆ ಅರ್ಜಿ ಸಲ್ಲಿಸಬೇಕೆಂಬ ಬೇಡಿಕೆಯ ಬಗ್ಗೆ ಪ್ರತಿಕ್ರಿಯಿಸುತ್ತ ತಮ್ಮ ಸರಕಾರ ಹಾಗೆ ಮಾಡುವುದಿಲ್ಲ ಎಂದು ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಸ್ಪಷ್ಟ ಪಡಿಸಿದ್ದಾರೆ.

ಎಲ್‌ಡಿಎಫ್ ಸರಕಾರ ತಳೆದಿರುವ ನಿಲುವು ಕಳೆದ ಒಂದು ಶತಮಾನದಲ್ಲಿ ಕೇರಳದಲ್ಲಿ ನಡೆದಿರುವ ಪ್ರಗತಿಶೀಲ ಮತ್ತು ಸಾಮಾಜಿಕ ಸುಧಾರಣಾ ಚಳುವಳಿಯ ಇತಿಹಾಸಕ್ಕೆ ಅನುಗುಣವಾಗಿಯೇ ಇದೆ. ಕೇರಳ ಸ್ವಾತಂತ್ರ್ಯ ಹೋರಾಟದ ಸಮಯದಲ್ಲಿ ವೈಕೊಂ ಮತ್ತು ಗುರುವಾಯೂರಿನಲ್ಲಿ ದೇವಸ್ಥಾನ ಪ್ರವೇಶ ಪ್ರವೇಶ ಚಳುವಳಿಯನ್ನು ಕಂಡಿತ್ತು. ಇದು ಕೆಳಜಾತಿಗಳ ಜನರಿಗೆ ದೇವಸ್ಥಾನ ಪ್ರವೇಶಿಸಲು ಅವಕಾಶ ಇರಬೇಕೆಂದು ನಡೆಸಿದ ಹೋರಾಟ. ಶ್ರೀ ನಾರಾಯಣ ಗುರು, ಅಯ್ಯಂಕಲಿ ಮತ್ತು ಚಟ್ಟಾಂಬಿ ಸ್ವಾಮಿ ಯವರಂತಹ ಸಮಾಜ ಸುಧಾರಕರ ನೇತೃತ್ವದಲ್ಲಿ ಜಾತಿ ದಮನ ಮತ್ತು ಧಾರ್ಮಿಕ ಕಂದಾಚಾರಗಳ ವಿರುದ್ಧವೂ ಆಂದೋಲನಗಳನ್ನು ಕೇರಳ ಕಂಡಿದೆ.

ಹೀಗೆ, ಲಿಂಗ ಸಮಾನತೆಯ ಪರವಾಗಿ ಬಲವಾದ ಹೊಡೆತ ನೀಡಿರುವ ಸುಪ್ರಿಂ ಕೋರ್ಟ್ ತೀರ್ಪನ್ನು ಕೇರಳ ಸಮಾಜದ ಎಲ್ಲ ಪ್ರಗತಿಶೀಲ ಮತ್ತು ಪ್ರಜಾಪ್ರಭುತ್ವವಾದಿ ವಿಭಾಗಗಳು ಸ್ವಾಗತಿಸಿವೆ.

ಈ ತೀರ್ಪಿಗೆ ಕೆಲವು ಪ್ರತಿಕ್ರಿಯೆಗಳು ಕೆಲವು ರಾಜಕೀಯ ಪಕ್ಷಗಳ ಮತ್ತು ಜಾತಿ ಸಂಘಟನೆಗಳ ಗೋಸುಂಬೆತನವನ್ನು ಮತ್ತು ಪಿತೃಪ್ರಾಧಾನ್ಯತೆಯ ಮನೋಭಾವವನ್ನು ಬಯಲಿಗೆ ತಂದಿವೆ. ಆರೆಸ್ಸೆಸ್ 2016ರಲ್ಲಿ ಎಲ್ಲ ದೇವಸ್ಥಾನಗಳಲ್ಲಿ ಮಹಿಳೆಯರಿಗೆ ಪ್ರವೇಶದ ಹಕ್ಕು ಇರಬೇಕು ಎಂಬ ನಿಲುವು ತಳೆದಿತ್ತು. ಆದರೆ ಶಬರಿಮಲೆ ತೀರ್ಪಿಗೆ ಸಂಬಂಧಪಟ್ಟಂತೆ ಈ ನಿಲುವು ತಿರುವುಮುರುವಾಗಿದೆ. ಆರೆಸ್ಸೆಸ್ ಪ್ರಧಾನ ಕಾರ್ಯದರ್ಶಿ ಸುರೇಶ ಜೋಷಿ, ಶಬರಿಮಲೆಯಲ್ಲಿ ಮಹಿಳೆಯರಿಗೆ ಪ್ರವೇಶದ ಮೇಲೆ ಮಿತಿ ಕೋಟ್ಯಂತರ ಭಕ್ತರ ಸಂಪ್ರದಾಯ ಮತ್ತು ನಂಬಿಕೆಯ ಪ್ರಶ್ನೆ, ಅವರ "ಭಾವನೆ"ಗಳನ್ನು ಉಪೇಕ್ಷಿಸಬಾರದು ಎಂದಿದ್ದಾರೆ. ಕೇರಳದ ಆರೆಸ್ಸೆಸ್ ಮುಖಂಡ ಸಂಘ ತೀರ್ಪನ್ನು ಗೌರವಿಸುತ್ತದೆ ಎಂದಿದ್ದರು. ಆದರೆ ಮರುದಿನವೇ ತಿಪ್ಪರಲಾಗ ಹಾಕಿದ್ದಾರೆ.

ಆರೆಸ್ಸೆಸ್ ಮತ್ತು ಬಿಜೆಪಿ ಈಗ "ಭಕ್ತಜನ"ಗಳ ಸಂಪ್ರದಾಯ ಮತ್ತು ಪರಂಪರೆಯ ಉಲ್ಲಂಘನೆಗೆ ಪ್ರತಿಭಟನೆಯ ದನಿನೀಡಲು ಅವರನ್ನು ಸಂಘಟಿಸುವಲ್ಲಿ ನಿರತವಾಗಿವೆ. ಈ ಪರಿಶ್ರಮದಲ್ಲಿ ನಾಯರ್ ಸರ್ವಿಸ್ ಸೊಸೈಟಿ, ಈ ಹಿಂದೆ ಈ ದೇವಸ್ಥಾನದ ಉಸ್ತುವಾರಿ ನಡೆಸುತ್ತಿದ್ದ ಪಂಡಲಂನ ರಾಜಕುಟುಂಬ ಮತ್ತು ದೇವಸ್ಥಾನದ ಪಾರಂಪರಿಕ ಪುರೋಹಿತರ ಕುಟುಂಬ ಅವರೊಂದಿಗೆ ಕೈಜೋಡಿಸಿದೆ.

ಈ ಸಾಮಾಜಿಕ ಸಂಪ್ರದಾಯಶರಣರು ತಳೆದಿರುವ ನಿಲುವು ನಿರೀಕ್ಷಿತವೇ. ಆದರೆ ಕೇರಳದಲ್ಲಿನ ಕಾಂಗ್ರೆಸ್ ಪಕ್ಷದ ಗೋಸುಂಬೆ ಮತ್ತು ಸಮಯಸಾಧಕ ನಿಲುವು ಅನಿರೀಕ್ಷಿತವಾದದ್ದು. ತೀರ್ಪು ಬಂದಾಗ ಅಖಿಲ ಭಾರತ ಕಾಂಗ್ರೆಸ್ ಸಮಿತಿಯ ವಕ್ತಾರ ರಣದೀಪ್ ಸುರ್ಜೆವಾಲ " ನಾವು ಶಬರಿಮಲೆ ದೇವಸ್ಥಾನಕ್ಕೆ ಪ್ರವೇಶದ ಪ್ರಗತಿಪರ ಮತ್ತು ದೂರಗಾಮೀ ನಿರ್ಧಾರವನ್ನು ಹೃತ್ಪೂರ್ವಕವಾಗಿ ಸ್ವಾಗತಿಸುತ್ತೇವೆ" ಎಂದಿದ್ದರು.


ಅದರೆ ಕೇರಳದಲ್ಲಿ ಕಾಂಗ್ರೆಸ್ ಮುಖಂಡರ ನಿಲುವು ಇದಾಗಿರಲಿಲ್ಲ. ಈ ತೀರ್ಪನ್ನು ಜಾರಿಗೊಳಿಸಬಾರದು ಎಂಬುದು ಪ್ರತಿಪಕ್ಷದ ಮುಖಂಡ ರಮೇಶ್ ಚೆನ್ನಿತಾಲ ಆಶಯ, ರಾಜ್ಯ ಸರಕಾರ ಮತ್ತು ದೇವಸ್ಥಾನ ಮಂಡಳಿ ಸುಪ್ರಿಂ ಕೋರ್ಟಿನಲ್ಲಿ ಮರು ವಿಮರ್ಶೆ ಅರ್ಜಿ ಸಲ್ಲಿಸಬೇಕೆಂದು ಅವರು ಆಗ್ರಹಿಸಿದರು. ಅಷ್ಟೇ ಅಲ್ಲ, ಆತ ಶಬರಿಮಲೆ ದೇವಸ್ಥಾನದ "ಸಂಪ್ರದಾಯ ಮತ್ತು ಪರಂಪರೆಯನ್ನು ಉಳಿಸಲು" ಒಂದು ದಿನದ ಉಪವಾಸ ನಡೆಸಿದರು. ಕಾಂಗ್ರೆಸಿನ ಕಾರ್ಯಾಧ್ಯಕ್ಷ ಕೆ.ಸುಧಾಕರನ್ ರಂತಹ ಬೇರೆ ಮುಖಂಡರುಗಳು ಮುಟ್ಟು ಆಗಿರುವ ಮಹಿಳೆಯರು ಅಶುದ್ಧರು ಎಂಬ ಆಕ್ರೋಶಕಾರಿ ಹೇಳಿಕೆಗಳನ್ನು ಕೊಟ್ಟರು.

ಹೀಗೆ, ಈಗ ಕೇರಳ ಒಂದು ಕುತೂಹಲಕಾರಿ ದೃಶ್ಯವನ್ನು ವೀಕ್ಷಿಸುತ್ತಿದೆ- ಆರೆಸ್ಸೆಸ್-ಬಿಜೆಪಿ ಕೂಟದ ಮೇಲ್ಜಾತಿ ಮತ್ತು ಪಿತೃಪ್ರಾಧಾನ್ಯತೆಯ ಅಭಿಪ್ರಾಯಗಳನ್ನು ಕಾಂಗ್ರೆಸ್ ಪಾಲಿಸುತ್ತಿದೆ. ಕಾಂಗ್ರೆಸ್, ಇಂತಹ ಸಮಯಸಾಧಕ ನಿಲುವು ತಮಗೆ ಹಿಂದೂ ಮತಗಳನ್ನು ತರುತ್ತದೆ ಎಂದು ನಂಬಿದ್ದರೆ, ಅವರಿಗೆ ತೀವ್ರ ನಿರಾಸೆ ಕಾದಿದೆ. ಸಾಮಾಜಿಕವಾಗಿ ಪ್ರತಿಗಾಮಿಯಾದ ಹಿಂದುತ್ವ ಅಭಿಪ್ರಾಯಗಳನ್ನು ತುಷ್ಟೀಕರಿಸುವ ಅವರ ಪ್ರಯತ್ನ ಬಿಜೆಪಿ ಮತ್ತು ಆರೆಸ್ಸೆಸ್‌ನ ಕೈಗಳನ್ನೇ ಬಲಪಡಿಸುತ್ತದೆ, ಕೇರಳ ಸಮಾಜದಲ್ಲಿ ಗಡಿಯಾರದ ಮುಳ್ಳನ್ನು ಹಿಂದಕ್ಕೆ ತಳ್ಳುವವರ ಜತೆಗೆ ಕಾಂಗ್ರೆಸ್ ನಿಂತಿದೆ ಎಂದೇ ಕಾಣಲಾಗುತ್ತದೆ. "ಭಕ್ತಜನ"ಗಳ ಪ್ರತಿಭಟನೆಗಳ ಹಿಂದೆ ಇರುವುದು ಕೇರಳದಲ್ಲಿ ಸಾಮಾಜಿಕ ಬದಲಾವಣೆಗಳು ಮತ್ತು ಪ್ರಗತಿಶೀಲ ಸುಧಾರಣೆಗಳನ್ನು ಒಪ್ಪಿಕೊಳ್ಳಲಾರದ ಶಕ್ತಿಗಳು.

ಪ್ರತಿಗಾಮಿ ಮತ್ತು ಮತ್ತು ಸಂಪ್ರದಾಯಶರಣ ಶಕ್ತಿಗಳು "ಧರ್ಮ ಅಪಾಯದಲ್ಲಿದೆ" ಎಂಬ ಕೂಗೆಬ್ಬಿಸಲು ಪ್ರಯತ್ನಿಸುತ್ತವೆ. ಆದರೆ ಇಂತಹ ಕುತಂತ್ರ ಬಯಲಾಗುತ್ತದೆ. ಈಗಾಗಲೇ ಎಳವ ಸಮುದಾಯವನ್ನು ಪ್ರತಿನಿಧಿಸುವ ಎಸ್‌ಎನ್‌ಡಿಪಿ ಯ ಪ್ರಧಾನ ಕಾರ್ಯದರ್ಶಿ ಮತ್ತು ದಲಿತ ಸಮುದಾಯದ ಒಂದು ಸಂಘಟನೆ ಪುಲಯ ಮಹಾಸಭಾ ದ ಅಧ್ಯಕ್ಷರು ಕೋರ್ಟ್ ತೀರ್ಪಿಗೆ ಪ್ರತಿಭಟನೆಗಳನ್ನು ಟೀಕಿಸುವ ಹೇಳಿಕೆಗಳನ್ನು ನೀಡಿದ್ದಾರೆ, ಹಾಗೂ ವಿಳಂಬ ಮಾಡದೆ ಆ ತೀರ್ಪನ್ನು ಜಾರಿಗೆ ತರಬೇಕು ಎಂದು ಆಗ್ರಹಿಸಿದ್ದಾರೆ. ಎನ್‌ಡಿಎ ಕೂಟದಲ್ಲಿರುವ ಸಿಕೆ.ಜಾನು ನೇತೃತ್ವದ ಇನ್ನೊಂದು ಬುಡಕಟ್ಟು ಸಂಘಟನೆ ಇಂತಹುದೇ ನಿಲುವನ್ನು ತಳೆದಿದೆ.

ಎಲ್‌ಡಿಎಫ್ ಸರಕಾರ ಮೊತ್ತಮೊದಲ ಬಾರಿಗೆ ದಲಿತ ಪುರೋಹಿತರನ್ನು ದೇವಸ್ವೊಂ ಮಂಡಳಿ ನಡೆಸುವ ದೇವಸ್ಥಾನಗಳಲ್ಲಿ ನೇಮಿಸುವ ಒಂದು ಮೈಲಿಗಲ್ಲಾದ ನಿರ್ಧಾರವನ್ನು ಮಾಡಿದೆ. ಈ ಹೊಸದಾರಿ ಹಿಡಿದ ಕ್ರಮ ಮತ್ತು ಎಲ್ಲ ವಯಸ್ಸಿನ ಮಹಿಳೆಯರಿಗೆ ಶಬರಿಮಲೆ ದೇವಸ್ಥಾನದಲ್ಲಿ ಪ್ರವೇಶ ಇವೆಲ್ಲ ಕಂದಾಚಾರದ ಮತ್ತು ಪಿತೃಪ್ರಾಧಾನ್ಯತೆಯ ಕೋಟೆಗಳಿಗೆ ಬಂದಿರುವ ಬೆದರಿಕೆ ಎಂದು ಕಾಣಲಾಗುತ್ತಿದೆ.

ಲಿಂಗ ಸಮಾನತೆಗೆ ಮತ್ತು ಮಹಿಳೆಯರ ಹಕ್ಕುಗಳಿಗೆ ಸವಾಲನ್ನು ಕೇರಳ ಸಮಾಜದ ಎಲ್ಲ ಪ್ರಗತಿಶೀಲ ಮತ್ತು ಪ್ರಜಾಪ್ರಭುತ್ವವಾದಿ ವಿಭಾಗಗಳು ನೇರವಾಗಿ ಎದುರಿಸಬೇಕು. ಕೇರಳದಲ್ಲಿ, ಅಸ್ಪೃಶ್ಯ ಜಾತಿಗಳ ಜನರು ಮೇಲ್ಜಾತಿಯ ಜನಗಳು ನಡೆಯುವ ದಾರಿಗಳಲ್ಲಿ ನಡೆಯಬಾರದು, ಕಾಣಿಸಿಕೊಳ್ಳಲೂ ಬಾರದು ಎಂಬಂತಹ, ಕೆಳಜಾತಿ ಮಹಿಳೆಯರು ಸಾರ್ವಜನಿಕ ಸ್ಥಳಗಳಲ್ಲಿ ತಮ್ಮ ಎದೆಗಳನ್ನು ಮುಚ್ಚಿಕೊಳ್ಳಬಾರದು ಎಂಬಂತಹ ಕಾಲವೊಂದಿತ್ತು. ಈ ಎಲ್ಲ ಆಚರಣೆಗಳು, ಸಂಪ್ರದಾಯಗಳು ಇತಿಹಾಸದ ಕಸದ ಬುಟ್ಟಿಗೆ ಸೇರಿವೆ. ಗತಕಾಲದ ಕತ್ತಲ ಗುಹೆಗಳಿಗೆ ಮರಳಲು ಈಗ ಸಾಧ್ಯವಿಲ್ಲ. ●



ವ್ಯಂಗ್ಯಚಿತ್ರ: ಪಿ.ಮಹಮ್ಮದ್

ಲೈಂಗಿಕ ಹಲ್ಲೆಗಳು ಮತ್ತು ಕಿರುಕುಳಗಳಿಗೆ ಒಳಗಾದವರಿಗೆ ನ್ಯಾಯ ಸಿಗಬೇಕು–ಎಐಡಿಡಬ್ಲ್ಯುಎ ಆಗ್ರಹ

ಮಾಧ್ಯಮಗಳಲ್ಲಿ ಮಹಿಳೆಯರು ಎದುರಿಸುತ್ತಿರುವ ಲೈಂಗಿಕ ಕಿರುಕುಳ ಮತ್ತು ಮಾನಸಿಕ ಯಾತನೆಗಳ ಬಗ್ಗೆ ಅಖಿಲ ಭಾರತ ಜನವಾದಿ ಮಹಿಳಾ ಸಂಘ(ಎಐಡಿಡಬ್ಲ್ಯುಎ) ತೀವ್ರ ಆಕ್ರೋಶವನ್ನು ವ್ಯಕ್ತಪಡಿಸಿದೆ. ಅವರಲ್ಲಿ ಕೆಲವರು ಇತ್ತೀಚೆಗಷ್ಟೇ ಮೌನ ಮುರಿದು ಹಲವು ಮಾಧ್ಯಮ ಪ್ರಮುಖರಿಂದ ತಮಗೆ ಆದ ಲೈಂಗಿಕ ಕಿರುಕುಳಗಳ ಬಗ್ಗೆ ಆಘಾತಕಾರೀ ದೂರುಗಳನ್ನು ಹೊರಗೆಡಹಿದ್ದಾರೆ. ಆರೋಪಿಗಳಿಗಿಂತ ಹೆಚ್ಚಾಗಿ ಆರೋಪ ಮಾಡಿದವರನ್ನೇ ದೂಷಿಸುವ ಪಾಳೆಯಗಾರೀ ಮೌಲ್ಯಗಳೇ ವಿಜೃಂಭಿಸುತ್ತಿರುವ ಸಂದರ್ಭದಲ್ಲಿ ಧೈರ್ಯವಾಗಿ ಈ ಮಹಿಳೆಯರು ಮುಂದೆ ಬಂದಿದ್ದಾರೆ ಎಂದು ಅವರನ್ನು ಎಐಡಡಬ್ಲ್ಯುಎ ಅಭಿನಂದಿಸಿದೆ.

ಸಾಮಾಜಿಕ ಮಾಧ್ಯಮಗಳಲ್ಲಿ ಹೊಲಸು ದೂಷಣೆಗಳ ಟ್ರೋಲಿಂಗ್ ಮೂಲಕ ದೂರು ನೀಡಿದವರ ಚಾರಿತ್ರ್ಯವಧೆ ಮಾಡುತ್ತ ಅವರ ಮನೋಸ್ಥೈರ್ಯ ಕೆಡಿಸುವ, ಬೆದರಿಸಿ ಅವರ ಬಾಯಿ ಮುಚ್ಚಿಸುವ ಪ್ರಯತ್ನ ನಡೆಯುತ್ತಿದೆ ಎಂದಿರುವ ಎಐಡಿಡಬ್ಲ್ಯುಎ ಅವನ್ನು ಖಂಡಿಸಿದೆ. ಈ ಆತಂಕಭರಿತ ನ್ಯಾಯದ ಕೂಗುಗಳಿಗೆ ನ್ಯಾಯ ವ್ಯವಸ್ಥೆ ಮತ್ತು ಒಟ್ಟಾರೆಯಾಗಿ ಸಮಾಜ ಸ್ಪಂದಿಸಬೇಕು, ಈಗಿರುವ ಅಧಿಕಾರ ಕೇಂದ್ರದಲ್ಲಿ ರಾರಾಜಿಸುವ ಪುರುಷ ಪ್ರಧಾನ ಮೌಲ್ಯಗಳ ಪ್ರಬಲ ಅಧಿಕಾರ ವ್ಯವಸ್ಥೆಯಲ್ಲಿ ಅಭಯರಕ್ಷೆ ಹೊಂದಿರುವ ಲೈಂಗಿಕ ಭಕ್ಷಕರು ತಮ್ಮ ಕುಕೃತ್ಯಗಳಿಗೆ ಹೊಣೆಗಾರರಾಗುವಂತೆ ಮಾಡಬೇಕು ಎಂದು ಎಐಡಡಬ್ಲ್ಯುಎ ಆಗ್ರಹಿಸಿದೆ.



ತನ್ನದೇ ಸಚಿವ ಎಂ.ಜೆ.ಅಕ್ಬರ್ ಸೇರಿದಂತೆ ಹಲವು ಪ್ರಮುಖ ವ್ಯಕ್ತಿಗಳ ಮೇಲೆ ಲೈಂಗಿಕ ಹಗರಣದ ಆರೋಪಗಳ ವಿಷಯದಲ್ಲಿ ಬಿಜೆಪಿ ಸರಕಾರ ಮೌನ ತಳೆದಿದೆ. ಇದನ್ನು ಒಪ್ಪಲು ಸಾಧ್ಯವಿಲ್ಲ ಬಿಜೆಪಿ ನಾಯಕರೊಬ್ಬರು ತಮ್ಮ ಮಾನಸಿಕ ಯಾತನೆಗಳನ್ನು ಹೊರಗೆಡಹುತ್ತಿರುವ ಈ ಮಹಿಳೆಯರು ಈ ರೀತಿಯ ಆರೋಪಗಳನ್ನು ಹಣ ದೋಚಲು ಮಾಡುತ್ತಾರೆ ಎಂಬ ಉದ್ಧಟ ಹೇಳಿಕೆಯನ್ನು ಸಾರ್ವಜನಿಕವಾಗಿ ಕೊಟ್ಟರೂ ಅವರಿಗೆ ಕಡಿವಾಣ ಹಾಕುವ, ತರಾಟೆಗೆ ತಗೊಳ್ಳುವ ನಡೆಯೇ ಕಾಣುತ್ತಿಲ್ಲ. ಎಂದು ಬೇಸರ ವ್ಯಕ್ತಪಡಿಸಿರುವ ಎಐಡಿಡಬ್ಲ್ಯುಎ

ಲೈಂಗಿಕ ದೌರ್ಜನ್ಯಕ್ಕೆ ಒಳಗಾದ ಮಹಿಳೆಯರ ಬಗ್ಗೆ ತೋರಿಸುತ್ತಿರುವ ಈ ಅನಾದರ, ಮಹಿಳೆಯರು ಮತ್ತು ಅವರ ಹಕ್ಕುಗಳ ಬಗ್ಗೆ ಮೋದಿ ಸರಕಾರದ ತಿರಸ್ಕಾರಕ್ಕೆ ಸಾಕ್ಷಿಯಾಗಿದೆ ಎಂದು ಬಲವಾಗಿ ಟೀಕಿಸಿದೆ.

ಮಹಿಳಾ ಸಂಘಟನೆಗಳು, ಮತ್ತು ಈಬಗ್ಗೆ ಕಾಳಜಿ ಇರುವ ನಾಗರಿಕರ ದೀರ್ಘ ಹೋರಾಟದ ಫಲವಾಗಿ 2013 ರಲ್ಲಿ ಕೆಲಸದ ಸ್ಥಳದಲ್ಲಿ ಲೈಂಗಿಕ ಕಿರುಕುಳದಿಂದ ರಕ್ಷಣೆಯ ಒಂದು ಕಟ್ಟುನಿಟ್ಟಾದ ಕಾನೂನು ಜಾರಿಗೆ ಬಂದಿದೆ, ಅದನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸಬೇಕು ಎಂದು ಎಐಡಿಡಬ್ಲ್ಯುಎ ಆಗ್ರಹಿಸಿದೆ.

ಲೈಂಗಿಕ ಕಿರುಕುಳದ ಆಪಾದನೆಗಳಿಗೆ ಒಳಗಾಗಿರುವ ಎಲ್ಲ ಪುರುಷರ ವಿರುದ್ಧವೂ ಎಫ್‌ಐಆರ್‌ಗಳನ್ನು ಹಾಕಬೇಕು, ಅವುಗಳ ಸಮಯಬದ್ಧ ತನಿಖೆ ನಡೆಯಬೇಕು ಮತ್ತು ಸೂಕ್ತ ಶಿಕ್ಷೆಗಳನ್ನು ವಿಧಿಸಬೇಕು. ಯಾವ ವ್ಯಕ್ತಿಗೂ ತನ್ನ ಸ್ಥಾನ, ಅಧಿಕಾರಗಳ ಬಲದಿಂದ ಮಾಡಿದ ಕೃತ್ಯಕ್ಕೆ ತಕ್ಕ ಶಿಕ್ಷೆಯಿಲ್ಲದೇ ತಪ್ಪಿಸಿಕೊಳ್ಳಲು ಅವಕಾಶವಾಗಕೂಡದು. ಕಾನೂನಿನ ಪ್ರಕಾರ ಕಡ್ಡಾಯವಾಗಿರುವ ಕೆಲಸದ ಸ್ಥಳಗಳಲ್ಲಿ ಲೈಂಗಿಕ ಕಿರುಕುಳ–ವಿರೋಧಿ ಸಮಿತಿಗಳ (ಆಂತರಿಕ ದೂರು ಸಮಿತಿಗಳು) ರಚನೆ ವಿವಿಧ ಹಂತಗಳಲ್ಲಿ ನೆನೆಗುದಿಯಲ್ಲಿವೆ. ಇವನ್ನು ತುರ್ತಾಗಿ ರಚಿಸಬೇಕು, ಎಲ್ಲಕ್ಕೂ ಮಿಗಿಲಾಗಿ, ನಮ್ಮ ಪ್ರಜಾಪ್ರಭುತ್ವ ದೇಶದಲ್ಲಿ ಒಂದು ಸುರಕ್ಷಿತ ಕೆಲಸದ ವಾತಾವರಣ ಮತ್ತು ಸಮಾನ ಸ್ಥಾನಮಾನದ ಸಂವಿಧಾನಿಕ ಹಕ್ಕು ಲಭ್ಯವಾಗುವಂತೆ ಮಾಡಲು, ಲೈಂಗಿಕ ಹಿಂಸೆ, ಕಿರುಕುಳಗಳ ಹಿಂದಿರುವ ಪಿತೃಪ್ರಧಾನ ವಿಚಾರಗಳ ವಿರುದ್ಧ ಒಂದು ಪ್ರಚಾರಕಾರ್ಯವನ್ನು ನಡೆಸಬೇಕು ಎಂದು ಎಐಡಿಡಬ್ಲ್ಯುಎ ಆಗ್ರಹಿಸಿದೆ. ■



ಅಮೇರಿಕಾದ ಜೂನಿಯರ್ ಪಾರ್ಟನರ್ ಆಗಿರುವ ಭಾರತದ ಪಯಣ ಈಗ ನಿರ್ಣಾಯಕ ಹಂತ ತಲುಪಿದೆ. ಮಿಲಿಟರಿ ಚೌಕಟ್ಟಿನ ಮೂರು ಒಪ್ಪಂದವನ್ನು ಉಪಯೋಗಿಸಿಕೊಂಡು ಅಮೇರಿಕಾದ ರಕ್ಷಣಾ ವ್ಯವಸ್ಥೆಯಲ್ಲಿ ಭಾರತದ ಸೇನಾಪಡೆಯನ್ನು ಮುಷ್ಟಿಯಲ್ಲಿಟ್ಟುಕೊಂಡಿದೆ. ಈ ಅಮೇರಿಕಾ ಪರ ಧೋರಣೆಗೆ ಕಾರಣ ಆಳುವ ವರ್ಗಗಳು ಅನುಸರಿಸುತ್ತಿರುವ ನೀತಿಯಾಗಿದೆ. ಈ ಬದಲಾವಣೆ 1990 ರಲ್ಲಿ ಪ್ರಾರಂಭವಾಗಿದ್ದು, ಕಾರ್ಪೋರೆಟ್ ಮಾಧ್ಯಮಗಳು ಈ ದಿಕ್ಕಿನಲ್ಲಿ ಇಡುವ ಪ್ರತಿ ಹೆಜ್ಜೆಯನ್ನು ಸ್ವಾಗತಿಸುವುದಕ್ಕೆ ಇದೇ ಕಾರಣ. ರಶಿಯಾ ಕ್ಷಿಪಣಿ ಮತ್ತು ಇರಾನ್‌ನ ತೈಲದ ಆಮದಿನ ವಿಷಯದಲ್ಲಿ ಅಮೆರಿಕಕ್ಕೆ ಬೇಕಾದಂತೆ ಭಾರತ ತನ್ನ ಹಿತಾಸಕ್ತಿಯ ವಿರುದ್ಧ ನಡೆಯುವಂತೆ ನೋಡಿಕೊಂಡಿದೆ. 2+2 ಮಾತುಕತೆ ಭಾರತಕ್ಕೆ ಏನನ್ನೂ ನೀಡಿಲ್ಲ. ರಾಷ್ಟ್ರೀಯತೆ ಬಗ್ಗೆ ಬೊಬ್ಬೆ ಹೊಡೆಯುವ ಮೋದಿ ಸರ್ಕಾರ ಅಮೇರಿಕಾ ಜತೆ ವ್ಯವಹಾರ ನಡೆಸುವಾಗ ಮತ್ತು ಸಾಮ್ರಾಜ್ಯಶಾಹಿ ಬೇಡಿಕೆಗಳನ್ನು ಎದುರಿಸುವಾಗ ಧೈರ್ಯಗೇಡಿ ಎಂಬುದು ಸಾಬೀತಾಗಿದೆ.



ಭಾರತ–ಅಮೇರಿಕಾ ಮಾತುಕತೆ: 2+2=0

– ಪ್ರಕಾಶ್ ಕಾರಟ್ (ಅನು: ಎಂ.ಜಿ. ವೆಂಕಟೇಶ್)

ಅಮೇರಿಕಾದ ಜೂನಿಯರ್ ಪಾರ್ಟನರ್ ಆಗಿರುವ ಭಾರತದ ಪಯಣ ಈಗ ನಿರ್ಣಾಯಕ ಹಂತ ತಲುಪಿದೆ. ಸೆಪ್ಟೆಂಬರ್ 6 ರಂದು ನಡೆದ ಪ್ರಥಮ 2+2 ಸಚಿವ ಮಟ್ಟದ ಮಾತುಕತೆಯಲ್ಲಿ ಭಾರತದ ಹಾಗೂ ಅಮೇರಿಕಾದ ವಿದೇಶಾಂಗ ಮತ್ತು ರಕ್ಷಣಾ ಸಚಿವರು ಪಾಲ್ಗೊಂಡಿದ್ದರು. ಇದರೊಂದಿಗೆ ಭಾರತ–ಅಮೇರಿಕಾ ವ್ಯೂಹಾತ್ಮಕ ಕೂಟ ಒಂದು ಸಾಂಸ್ಥಿಕ ರೂಪ ಪಡೆದಿದೆ. ಅಮೇರಿಕಾದ ವಿದೇಶಾಂಗ ಕಾರ್ಯದರ್ಶಿ ಮೈಕ್ ಪಾಂಪಿಯೋ ಮತ್ತು ರಕ್ಷಣಾ ಕಾರ್ಯದರ್ಶಿ ಜೇಮ್ಸ್ ಮ್ಯಾಟಿಸ್ ದೆಹಲಿಗೆ ಉದ್ಘಾಟನಾ ಸಭೆಗಾಗಿ ಆಗಮಿಸಿದ್ದರು. 2+2 ಮಾತುಕತೆ ಮುಂದೆ ಪ್ರತಿ ವರ್ಷವೂ ನಡೆಯಲಿದೆ. 2+2 ರೂಪದಲ್ಲಿ ರಕ್ಷಣಾ ಮತ್ತು ವಿದೇಶಾಂಗ ಖಾತೆಯ ಸಚಿವರು ಎರಡೂ ಕಡೆಯಿಂದ ಭಾಗವಹಿಸುವುದರಿಂದ ಒಕ್ಕೂಟದ ರೂಪ ನಿಚ್ಚಳವಾಗಿದೆ–ಸ್ಪಷ್ಟವಾಗಿದೆ–ರಕ್ಷಣಾ ಮತ್ತು ಮಿಲಿಟರಿ ಸಹಯೋಗ.

ಹಿಂದೆ ಇದೇ ಸುಷ್ಮಾ ಸ್ವರಾಜ್ ವಿದೇಶಾಂಗ ಸಚಿವರಾಗಿ ಮತ್ತು ನಿರ್ಮಲಾ ಸೀತಾರಾಮನ್ ವಾಣಿಜ್ಯ ಸಚಿವರಾಗಿ 2+2 ಮಾತುಕತೆಯಲ್ಲಿ ಅಮೇರಿಕಾದ ವಿದೇಶಾಂಗ ಕಾರ್ಯದರ್ಶಿ ಮತ್ತು ವಾಣಿಜ್ಯ ಕಾರ್ಯದರ್ಶಿಯೊಡನೆ ಮಾತುಕತೆಯಲ್ಲಿ ಭಾಗವಹಿಸಿದ್ದರು. ಕಳೆದ ವರ್ಷ ಅಧ್ಯಕ್ಷ ಟ್ರಂಪ್ ಮಾತುಕತೆಯ ರೂಪದಲ್ಲಿ ವಾಣಿಜ್ಯದ ಬದಲಿಗೆ ರಕ್ಷಣಾ ಸಚಿವರಿರಬೇಕೆಂದು ಸೂಚಿಸಿದ್ದರು. ಆದ್ದರಿಂದ ನಿರ್ಮಲಾ ಸೀತಾರಾಮನ್ ಹೊಸ 2+2 ಆವೃತ್ತಿಯಲ್ಲಿ ರಕ್ಷಣಾ ಸಚಿವರಾದದ್ದರಿಂದ ಪಾಲ್ಗೊಳ್ಳುತ್ತಿದ್ದಾರೆ.

ಇದು ಅಮೇರಿಕಾದ ಸದಾ ಇಚ್ಛಿಸುತ್ತಿದ್ದ ಮಿಲಿಟರಿ ಮತ್ತು ರಕ್ಷಣಾ ಸಹಕಾರದ ಪ್ರಾಥಮಿಕ ಯುದ್ಧೋಪಾಯದ ಸಂಬಂಧ.

ಅಮೇರಿಕಾ ಯುದ್ಧೋಪಾಯದ ಕೀಲು:

ಚೈನಾ ಶಕ್ತಿ ಹೆಚ್ಚುತ್ತಿರುವುದರಿಂದ ಏಶಿಯಾ–ಫೆಸಿಫಿಕ್ ವಲಯದಲ್ಲಿ ಅದಕ್ಕೆ ತಡೆಯೊಡ್ಡುವುದ್ದೇ ಅಮೇರಿಕಾದ ಪರಮಗುರಿಯಾಗಿದ್ದು ಭಾರತಕ್ಕೆ ಅದರಲ್ಲಿ ಮುಖ್ಯ ಪಾತ್ರವನ್ನು ನೀಡಿದೆ. ಹಿಂದಿನ ವಿದೇಶಾಂಗ ಕಾರ್ಯದರ್ಶಿ ಲೇನ್ ಪ್ಯಾನೆಟ್ಟಾ 2012 ರಲ್ಲೇ ಭಾರತವನ್ನು, ಏಶಿಯಾದಲ್ಲಿ ಅಮೇರಿಕಾದ ವ್ಯೂಹಾತ್ಮಕ ಹಿತಾಸಕ್ತಿ ಕಾಪಾಡಲು ಬೇಕಾದ ಕೀಲೆಂದು ಹೇಳಿದ್ದರು. ಅದಕ್ಕೂ ಹಿಂದೆ ಜಾರ್ಜ್ ಬುಶ್ ಭಾರತ–ಅಮೇರಿಕಾ ನಾಗರಿಕ ಅಣು ಒಪ್ಪಂದದ ಮೂಲಕ ಭಾರತವನ್ನು ಮಿಲಿಟರಿ ಮಿತ್ರ ರಾಷ್ಟ್ರವನ್ನಾಗಿ ಮಾಡಿಕೊಳ್ಳಲು ಹವಣಿಸಿದ್ದರು. 2005 ರ ಭಾರತ – ಅಮೇರಿಕಾ ರಕ್ಷಣಾ ಒಪ್ಪಂದ ಯುಪಿಎ–1 ರ ಕಾಲದಲ್ಲಿ ನಡೆದಿದ್ದು ಮುಂದೆ ನಡೆದ ಅಣು ಒಪ್ಪಂದ ಅದರ ಮೊದಲ ಭಾಗವಾಗಿತ್ತು.

ಮೋದಿ ಸರ್ಕಾರ ಅಧಿಕಾರಕ್ಕೆ ಬಂದ ನಂತರ ಮಿಲಿಟರಿ ಒಪ್ಪಂದ ಮತ್ತು ಅಧೀನ ಸಂಬಂಧದ ವೇಗ ಹೆಚ್ಚಾಯಿತು. 2015 ರಲ್ಲಿ ಒಬಾಮ ಭೇಟಿಕಾಲದಲ್ಲಿ ಭಾರತ ಏಷಿಯಾ–ಫೆಸಿಫಿಕ್ ಮತ್ತು ಹಿಂದೂ ಮಹಾಸಮುದ್ರ ವಲಯಗಳಿಗೆ ಜಂಟಿ ವೀಕ್ಷಣಾ ಒಪ್ಪಂದಕ್ಕೆ ಸಹಿ ಹಾಕಿತು. ಇದರ ಘೋಷಣಾವಾಕ್ಯ ಭಾರತ ಏಷಿಯಾ ಫೆಸಿಫಿಕ್ ವಲಯದಲ್ಲಿ ಅಮೇರಿಕಾದ ಪಾಲುದಾರ್ ಮತ್ತು ಇದಕ್ಕೆ ಬದಲಾಗಿ 2016 ರಲ್ಲಿ ಭಾರತವನ್ನು ಅಧಿಕೃತ ಅಮೇರಿಕಾದ ಮುಖ್ಯ ರಕ್ಷಣಾ ಪಾಲುದಾರನೆಂದು ನ್ಯಾಟೋ ಒಪ್ಪಂದದ ರೀತಿಯಲ್ಲೇ ಜಪಾನ್ ಮತ್ತು ದಕ್ಷಿಣ ಕೊರಿಯಾದಂತೆ ಪರಿಗಣಿಸಲಾಯಿತು.

ಮೋದಿ ಸರ್ಕಾರ ರಕ್ಷಣಾ ಚೌಕಟ್ಟಿನ ಒಪ್ಪಂದವನ್ನು 2015 ರಿಂದ ಹತ್ತು ವರ್ಷಗಳಿಗೆ ವಿಸ್ತರಿಸಿತು. ಮುಂದುವರೆದಂತೆ 2016 ರಲ್ಲಿ ಸೈನ್ಯಕ್ಕೆ ನೆರವಾಗುವ ವ್ಯವಸ್ಥೆ ಮಾಡುವ ಒಪ್ಪಂದಕ್ಕೂ ಸಹಿ ಹಾಕಲಾಯಿತು. ಈ ಒಪ್ಪಂದದ ಅಂಗವಾಗಿ ಅಮೇರಿಕಾದ ನೌಕದಳ, ವಾಯು ದಳಗಳಿಗೆ ನೌಕಾ ಮತ್ತು ವಾಯು ನೆಲೆಗಳನ್ನು ಇಂಧನ ಒದಗಿಸುವುದಕ್ಕೆ, ರಿಪೇರಿ ಮತ್ತು ನಿರ್ವಹಣೆಗಾಗಿ ನಿರಂತರವಾಗಿ ಒದಗಿಸಬೇಕಾಗುತ್ತದೆ.

ಇದರಿಂದಾಗಿ ಅಮೇರಿಕಾದ ಯುದ್ಧ ವಿಮಾನಗಳು ಭಾರತದ ನೆಲೆಯನ್ನು ಉಪಯೋಗಿಸಿಕೊಂಡು ತೃತಿಯ ರಾಷ್ಟ್ರಗಳ ಮೇಲೆ ದಾಳಿ ನಡೆಸಬಹುದಾಗಿದೆ. ಈ ರೀತಿಯ ಒಪ್ಪಂದ ಅಮೇರಿಕಾ ಮತ್ತು ಅದರ ಮಿಲಿಟರಿ ಮಿತ್ರ ರಾಷ್ಟ್ರಗಳೊಂದಿಗೆ ಜಾರಿಯಲ್ಲಿದೆ.

ಕುತಂತ್ರದ ಒಪ್ಪಂದಗಳಿಂದ ಮಿಲಿಟರಿ ಮಿತ್ರರಾಷ್ಟ್ರವಾಗುವ ದಾರಿಯಲ್ಲಿ:

ಮಿಲಿಟರಿ ಚೌಕಟ್ಟಿನ ಮೂರು ಒಪ್ಪಂದವನ್ನು ಉಪಯೋಗಿಸಿಕೊಂಡು ಅಮೇರಿಕಾದ ರಕ್ಷಣಾ ವ್ಯವಸ್ಥೆಯಲ್ಲಿ ಭಾರತದ ಸೇನಾಪಡೆಯನ್ನು ಮುಷ್ಟಿಯಲ್ಲಿಟ್ಟುಕೊಂಡಿದೆ. ಮೊದಲನೇಯದಾಗಿ ಸಲಕರಣಾ ನಿರ್ವಹಣೆಗೆ ಬೆಂಬಲದ ಒಪ್ಪಂದ (Logistics Support Agreement - LSA), ಮೋದಿ ಸರ್ಕಾರ ಅಸ್ತಿತ್ವಕ್ಕೆ ಬಂದ ಮೇಲೆ ಸಾಧ್ಯವಾಯಿತು. ಎರಡನೇಯದಾಗಿ ಸಂವಹನ ಮತ್ತು ರಕ್ಷಣೆ (Communication Interoperability and Security Memorandum Agreement - CISMOA) ಮತ್ತು ಮೂರನೇಯದಾಗಿ ಸಾಮಾನ್ಯ ವಿನಿಮಯ ಮತ್ತು ಸಹಕಾರ ಒಪ್ಪಂದ (Basic Exchange and Cooperation Agreement for Geospatial Cooperation - BECA). 2+2 ಉದ್ಘಾಟನಾ ಸಭೆಯಲ್ಲೇ ಹಿಂದಿದ್ದ ಒಪ್ಪಂದದ ಹೆಸರನ್ನು ಕುತಂತ್ರ ಮತ್ತು ರಹಸ್ಯದಿಂದ ಕೂಡಿದ ಹೆಸರಿನಿಂದ ಬದಲಿಸಿಡುರುವುದಕ್ಕೆ ಕಾರಣ ಭಾರತದ ಸಾರ್ವಭೌಮತ್ವವನ್ನು ಧಕ್ಕೆ ತಂದಿರುವುದನ್ನು ಮರೆ ಮಾಚುವುದಾಗಿದೆ.

ಈ ಹೆಸರಿನ ಬದಲಾವಣೆಯಿಂದ ಒಪ್ಪಂದದ ನೈಜ ಆಶಯಗಳನ್ನು ಬಚ್ಚಿಡಲಾಗುವುದಿಲ್ಲ. ಉದಾಹರಣೆಗೆ "ಕಾಮ್‌ಕಾಸಾ" ಒಪ್ಪಂದವನ್ನು ಒತ್ತಡದಿಂದ ಸಹಿಮಾಡಲಾಗಿದೆ. ಭಾರತ ಅಮೇರಿಕಾದಿಂದ ಆಯುಧಗಳನ್ನು ಹೆಚ್ಚಿನ ಪ್ರಮಾಣದಲ್ಲಿ ಕೊಳ್ಳುತ್ತಿದ್ದು ಅದರ ಪ್ರಮಾಣ ರಶಿಯಾದಿಂದ ಕೊಳ್ಳುವುದಕ್ಕೂ ಹೆಚ್ಚಿದೆ. ಉದಾಹರಣೆಗೆ ಕಳೆದ ಮೂರುವರ್ಷಗಳಲ್ಲಿ ಅಮೇರಿಕಾ ಕಂಪನಿಗಳು ಪಡೆದ ಒಪ್ಪಂದದ ಮೊತ್ತ 288 ಬಿಲಿಯನ್ ಡಾಲರ್‌ಗಳಾದರೆ, ರಶಿಯಾ ಜತೆ ನಡೆಸಿರುವುದು 83 ಬಿಲಿಯನ್ ಡಾಲರ್‌ಗಳು (ಪಾರ್ಲಿಮೆಂಟ್ ರಕ್ಷಣಾ ಸಮಿತಿ ವರದಿ ಪ್ರಕಾರ). ಅಮೇರಿಕಾ ಭಾರತಕ್ಕೆ ಅತ್ಯಾಧುನಿಕ ಆಯುಧಗಳನ್ನು ಮಾರುವಾಗ ಅದರಲ್ಲಿ ಸಂಪರ್ಕ ಸಾಧನಗಳನ್ನು ಫಿಟ್ ಮಾಡುತ್ತಿಲ್ಲ. ಅದಕ್ಕಾಗಿ ಕಾಮ್‌ಕಾಸಾ ಒಪ್ಪಂದಕ್ಕೆ ಸಹಿ ಹಾಕಲು ಒತ್ತಾಯಿಸುತ್ತಿದೆ. ಈ ಒಪ್ಪಂದದ ಪ್ರಕಾರ ಅಮೇರಿಕಾ ಆಯುಧ ಮಾರಾಟದಲ್ಲಿ ಯಾವ ರಹಸ್ಯವೂ ಬಯಲಾಗದಂತೆ ನಿಗಾವಹಿಸುತ್ತದೆ. ಇದರ ಪ್ರಕಾರ ಭಾರತದ ಮಿಲಿಟರಿ ನೆಲೆಗಳನ್ನು ಅಮೆರಿಕಾ ಇನ್ಸ್‌ಪೆಕ್ಟರ್‌ಗಳಿಗೆ ಸಂಪರ್ಕ ಸಾಧನಗಳನ್ನು ಚೆಕ್ ಮಾಡಲು ತೆರೆದಿಡಬೇಕಾಗುತ್ತದೆ.

ರಶಿಯಾದಂತಹ ರಾಷ್ಟ್ರಗಳಿಂದ ಕೊಂಡ ಅತ್ಯಾಧುನಿಕ ಸಂಪರ್ಕ ಸಲಕರಣೆಗಳು ಉಳಿದ ಆಯುಧಸಲಕರಣೆಯೊಂದಿಗೆ ಹೊಂದಾಣಿಕೆಯಾಗದ ರೀತಿ ನಿರ್ವಹಿಸಿದಂತೆ ಎಚ್ಚರ ವಹಿಸಲಾಗುತ್ತದೆ.

ರಶಿಯಾದಿಂದ ಭಾರತ ಕೊಳ್ಳುತ್ತಿರುವ ಎಸ್–400 ಕ್ಷಿಪಣಿ ವ್ಯವಸ್ಥೆಯ ಜತೆ ಅಮೇರಿಕಾ ರಕ್ಷಣಾ ವ್ಯವಸ್ಥೆಯ ಉಪಕರಣಗಳು ಕೆಲಸ ಮಾಡುವುದಿಲ್ಲವೆಂಬ ವಾದವನ್ನು ಅಮೇರಿಕಾ ರಕ್ಷಣಾ ಪ್ರತಿನಿಧಿಗಳು ಸಾರುತ್ತಿದ್ದಾರೆ. ಈಗಿನ ಬಿಜೆಪಿ ಸರ್ಕಾರ ಗುಲಾಮಗಿರಿ ನೀತಿಯನ್ನು ನೋಡಿದರೆ ಮೂರನೇ ಒಪ್ಪಂದ ಸಹಿಹಾಕುವ ಕಾಲ ಶೀಘ್ರದಲ್ಲೇ ಒದಗಲಿದೆ (BECA).

ಈ ಜಂಟಿ ಪ್ರಕಟಣೆಯಂತೆ ಎರಡೂ ರಾಷ್ಟ್ರಗಳ ಸೈನ್ಯವನ್ನು ಏಶಿಯಾದಲ್ಲಿ ಯುದ್ಧ ತಂತ್ರಕ್ಕೆ ಎಳೆಯುವಂತೆ ಭಾರತ ಬಲಿಯಾಗುವಂತೆ 2+2 ಒಪ್ಪಂದದಲ್ಲಿ ನೋಡಿಕೊಳ್ಳಲಾಗಿದೆ. ಎರಡೂ ದೇಶಗಳ ವಿದೇಶಾಂಗ ಮತ್ತು ರಕ್ಷಣಾ ಸಚಿವರ ನಡುವೆ ನೇರ ಸಂಪರ್ಕ (Hotline) ಏರ್ಪಡಲಿದೆ. ಅಮೇರಿಕಾ ಭಾರತದೊಡನೆ ನಡೆಸಿರುವ ಸೇನಾ ಕವಾಯತುಗಳ ಪ್ರಮಾಣದಲ್ಲಿ, ಉಳಿದ ಯಾವುದೇ ದೇಶದೊಡನೆ ನಡೆಸಿರುವುದಿಲ್ಲ. ಇದುವರೆಗೆ ನಡೆದಿದ್ದ ಭೂ, ನೌಕಾ ಮತ್ತು ವಾಯು ಕಾರ್ಯಾಚರಣೆಗಳ ಬದಲಿಗೆ ಒಟ್ಟಿಗೆ ಮೂರೂ ವಿಭಾಗಗಳು ಸೇರಿ ಮಿಲಿಟರಿ ತರಬೇತು ನಡೆಯಲಿದೆ.

ಇನ್ನೊಂದು ಪ್ರಮುಖ ತೀರ್ಮಾನದ ಪ್ರಕಾರ ಅಮೇರಿಕಾ ನೌಕಾ ಕೇಂದ್ರ ಕಛೇರಿಯಲ್ಲಿ ಮತ್ತು ಭಾರತದ ನೌಕಾ ಕೇಂದ್ರ ಕಛೇರಿಯಲ್ಲಿ ಸಂವಹನಾ ಅಧಿಕಾರಿಗಳನ್ನು ನಿಯೋಜಿಸುವುದಾಗಿದೆ. ಅಮೇರಿಕಾ ಭಾರತಕ್ಕೆ ಫೆಸಿಫಿಕ್ ವಲಯದ ಕಮ್ಯಾಂಡ್‌ನಲ್ಲಿ ನಿಯೋಜನೆಗೆ ಸೂಚಿಸಿದರೆ, ಭಾರತ ಅದರ ಸೆಂಟ್ರಲ್ ಕಮ್ಯಾಂಡ್‌ನಲ್ಲಿ (ಬಹರಿನ್) ನಲ್ಲಿ ಇರುವುದಕ್ಕೆ ಆಸಕ್ತಿ ತೋರಿಸುತ್ತಿದೆ. ಈ ಹೊಂದಾಣಿಕೆಗೆ ಫೆಸಿಫಿಕ್ ಕಮ್ಯಾಂಡ್‌ಗೆ ಬದಲಾಗಿ ಇಂಡೋ–ಫೆಸಿಫಿಕ್ ಕಮ್ಯಾಂಡ್ ಎಂದೂ ಹೆಸರಿಡಲಾಗಿದೆ. ಈ ನಾಮಕರಣ ಜೂನ್ 2018 ರಲ್ಲಿ ನಡೆದಾಗ ಭಾರತದ ನೌಕಾ ಅಧಿಕಾರಿ ಭಾಗವಹಿಸಿರುವುದು ಅಚ್ಚರಿಯಲ್ಲ.

ಮೋದಿ ಸರ್ಕಾರ ಅಮೇರಿಕಾ ಸೂಚಿಸಿರುವ ಚತುರ್ಮುಖಿ ಸಹಕಾರ ಅಮೇರಿಕಾ, ಜಪಾನ್, ಆಸ್ಟ್ರೇಲಿಯಾ, ಭಾರತ ಸಹಭಾಗಿತ್ವಕ್ಕೂ ಒಪ್ಪಿಗೆ ನೀಡಿದೆ.

ಈ ಎಲ್ಲ ಬೆಳವಣಿಗೆಗಳು ಭಾರತವನ್ನು ಅಮೇರಿಕಾದ ಪೂರ್ಣ ಪ್ರಮಾಣದ ಮಿಲಿಟರಿ ಸ್ನೇಹ ರಾಷ್ಟ್ರವನ್ನಾಗಿ ಪರಿವರ್ತಿಸಿದೆ. ಈ ಸ್ನೇಹ ಅಸಮಾನತೆ ಮತ್ತು ಅಧೀನ ದರ್ಜೆ ನೀಡುವ ಸ್ನೇಹವಾಗಿದೆ.



ಈ ಅಮೇರಿಕಾ ಪರ ಧೋರಣೆಗೆ ಕಾರಣ ಆಳುವ ವರ್ಗಗಳು ಅನುಸರಿಸುತ್ತಿರುವ ನೀತಿಯಾಗಿದೆ. ಈ ಬದಲಾವಣೆ 1990 ರಲ್ಲಿ ಪ್ರಾರಂಭವಾಗಿದ್ದು ವಾಜಪೇಯಿ ಸರ್ಕಾರ, ಮನಮೋಹನ್ ಸರ್ಕಾರದಿಂದ ಇಂದಿನ ಸರ್ಕಾರದ ವರೆಗೂ ಎರಡು ದಶಕಗಳಲ್ಲಿ ಅಮೇರಿಕಾದೊಂದಿಗೆ ಸಹಭಾಗಿತ್ವಕ್ಕೆ

ಪುಟ 10 ಕ್ಕೆ





ಕರ್ನಾಟಕ ಹೈಕೋರ್ಟಿನ ನಿವೃತ್ತ ನ್ಯಾಯಧೀಶರಾದ ನ್ಯಾಯಮೂರ್ತಿ ನಾಗಮೋಹನದಾಸ್ ಭಾರತೀಯ ಸಂವಿಧಾನವನ್ನು ತಿಳಿಯಲು, ಅರ್ಥಮಾಡಿಕೊಳ್ಳಲು ಕೈಪಿಡಿಯಾಗಿ ರಚಿಸಿರುವ ಈ ಕಿರುಪುಸ್ತಕವನ್ನು ಸಹಯಾನ ಮತ್ತು ಸಮುದಾಯ -ಕರ್ನಾಟಕ ಜಂಟಿಯಾಗಿ ಪ್ರಕಟಿಸಿವೆ. ಮುಖ್ಯವಾಗಿ ವಿದ್ಯಾರ್ಥಿ-ಯುವಜನರಿಗಾಗಿ ರಚಿಸಿದ ಇದನ್ನು ಕಾರ್ಮಿಕರ ನಡುವೆಯೂ ಒಯ್ಯಬೇಕೆಂಬ ಆಶಯದಿಂದ ಸಿಐಟಿಯು ರಾಜ್ಯ ಸಮಿತಿ ಅಕ್ಟೋಬರ್ 7ರಂದು ಒಂದು ಕಾರ್ಯಾಗಾರವನ್ನು ಏರ್ಪಡಿಸಿತ್ತು. ಇದರಲ್ಲಿ ಲೇಖಕರೊಂದಿಗೆ ಭಾಗವಹಿಸಿದ ರಾಜ್ಯದ ಹಿರಿಯ ಕಾರ್ಮಿಕ ಮುಖಂಡರಾದ ವಿ ಜೆ ಕೆ ನಾಯರ್ ಇದು ಪ್ರಗತಿಶೀಲ ಆಂದೋಲನದ ಎಲ್ಲ ವಿಭಾಗಗಳಗೂ ಅನುಕರಣೀಯವಾದ ಒಂದು ಕಾರ್ಯಕ್ರಮ ಎನ್ನುತ್ತಲೇ, ಕಾರ್ಮಿಕ ಆಂದೋಲನದ ದೃಷ್ಟಿಯಿಂದ ಇಲ್ಲಿ ಈ ಕೃತಿಯನ್ನು ಪರಿಚಯಿಸಿದ್ದಾರೆ. ಅದರೊಂದಿಗೇ ಹೇಗೆ ಮತ್ತು ಏಕೆ ಸಂವಿಧಾನ ಹೇಗೆ ಕೆಲಸ ಮಾಡಿದೆ ಎಂಬ ದುಡಿಯುವ ಜನಗಳ ಅನುಭವಗಳನ್ನು ಗಮನಿಸದೆ ಸಂವಿಧಾನದ ಅಮೂರ್ತ ಓದಿನಿಂದಷ್ಟೇ ದುಡಿಯುವ ಜನಗಳು ತೃಪ್ತರಾಗಬಾರದು ಎಂದೂ ಎಚ್ಚರಿಸಿದ್ದಾರೆ.

ಭಾರತೀಯ ಸಂವಿಧಾನ, 'ಸಂವಿಧಾನ ಓದು' ಮತ್ತು ಕಾರ್ಮಿಕ ವರ್ಗದ ಆಂದೋಲನ

ವಿ ಜೆ ಕೆ ನಾಯರ್

ನ್ಯಾಯಮೂರ್ತಿ ನಾಗಮೋಹನ ದಾಸ್ ತಮ್ಮ 'ಸಂವಿಧಾನ ಓದು' ಕುರಿತ ಸಿಐಟಿಯು ರಾಜ್ಯಸಮಿತಿ ಪ್ರಾಯೋಜಿತ ಕಾರ್ಯಕ್ರಮದಲ್ಲಿ ಪ್ರಸ್ತುತಪಡಿಸಿದ ಕಾರ್ಮಿಕ ವರ್ಗದ ಕಣ್ಣೋಟದ ಸಾರಾಂಶ ಮತ್ತು ಅದರಲ್ಲಿ ಕೆಲವು ಕಾರ್ಮಿಕ ಮುಖಂಡರು ಎತ್ತಿರುವ ಗಂಭೀರ ಪ್ರಶ್ನೆಗಳ ಬಗ್ಗೆ ಒಂದು ಸಣ್ಣ ಲೇಖನ ಅಗತ್ಯ ಎಂದು ಭಾವಿಸಿ ಇದನ್ನು ಬರೆಯುತ್ತಿದ್ದೇನೆ.

ಸಿದ್ಧಾಂತ ಮತ್ತು ಅದರ ಆಚರಣೆಯನ್ನು ಬೆಸೆಯಬೇಕು ಎನ್ನುತ್ತದೆ ಕಾರ್ಮಿಕ ವರ್ಗದ ತತ್ವ. ಇಟಾಲಿಯನ್ ಮಾರ್ಕ್ಸ್‌ವಾದಿ ತತ್ವಜ್ಞಾನಿ ಗ್ರಾಮ್ಶಿ ಇದಕ್ಕೆ 'ಪ್ರಾಕ್ಸಿಸ್' ಎಂಬ ಪದವನ್ನು ಜನಪ್ರಿಯಗೊಳಿಸಿದರು. ಅಂದರೆ ಕಾರ್ಮಿಕ ವರ್ಗಕ್ಕೆ ಸಂವಿಧಾನವನ್ನು, ಅಥವ ಬೇರೆ ಯಾವುದೇ ದಸ್ತಾವೇಜನ್ನು ಓದುವುದು, ಅದರ ಓದಿಗಿಂತ ಹೆಚ್ಚಾಗಿ ಅದನ್ನು ದುಡಿಸುವತ್ತ ಒಯ್ಯುವ ಕ್ರಿಯೆಯಾಗಬೇಕು.

ನ್ಯಾಯಮೂರ್ತಿ ನಾಗಮೋಹನದಾಸ್ ಅವರು ರಚಿಸಿರುವ ಈ ಉತ್ಕೃಷ್ಟ ಕೃತಿ 40 ದಿನಗಳಲ್ಲಿ ಹತ್ತು ಬಾರಿ ಮರುಮುದ್ರಣಗೊಂಡು 25,000 ಕ್ಕಿಂತ ಹೆಚ್ಚು ಪ್ರತಿಗಳು ಮಾರಾಟವಾಗಿವೆ. ಈ ಪುಸ್ತಕದೊಂದಿಗೆ ಸ್ವತಃ ಅದರ ಲೇಖಕರೇ ರಾಜ್ಯದಲ್ಲೆಲ್ಲ ಸಂಚರಿಸಿ ಈ ಬಗ್ಗೆ ಕಾರ್ಯಕ್ರಮಗಳಲ್ಲಿ ಭಾಗವಹಿಸುತ್ತಿದ್ದಾರೆ. ಇದು ಪ್ರಗತಿಶೀಲ ಆಂದೋಲನದ ಎಲ್ಲ ವಿಭಾಗಗಳಿಗೂ ಅನುಕರಣೀಯ. ರಾಜ್ಯ ಸಿಐಟಿಯು ಇದನ್ನು ರಾಜ್ಯಾದ್ಯಂತ ತನ್ನ ಮೂರು ಲಕ್ಷಕ್ಕೂ ಹೆಚ್ಚು ಸದಸ್ಯರ ನಡುವೆ ಒಯ್ಯಲು ಮತ್ತು ತಾವೇ ಇದರ ಒಂದು ಲಕ್ಷ ಪ್ರತಿಗಳನ್ನು ಮಾರಲು ಯೋಜನೆ ಹಾಕಿರುವುದು ಪ್ರಶಂಸನೀಯ. ವಿವಿಧ ಪ್ರದೇಶಗಳ ಸಿಐಟಿಯು ಕಾರ್ಯಕರ್ತರನ್ನು ತಲುಪಲು ಮೂರು-ನಾಲ್ಕು ಪ್ರಾದೇಶಿಕ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದು ಇವುಗಳಲ್ಲಿ 'ಸಂವಿಧಾನ ಓದು' ಸಂದೇಶವನ್ನು ಒಯ್ಯುವಲ್ಲಿ ತಾನೂ ಭಾಗವಹಿಸುವುದಾಗಿ ಲೇಖಕರು ಸಿಐಟಿಯುಗೆ ಆಶ್ವಾಸನೆ ನೀಡಿದ್ದಾರೆ. ಇದನ್ನೊಂದು ಅತ್ಯಂತ ಯಶಸ್ವಿ ಕಾರ್ಯಕ್ರಮವನ್ನಾಗಿ ಮಾಡಲು ನಾವೆಲ್ಲ ಕೈಜೋಡಿಸಬೇಕು.

ಈ ಪುಸ್ತಕವನ್ನು ರಚಿಸುವಲ್ಲಿ ಮತ್ತು ಅದರ ಕಣ್ಣೋಟವನ್ನು ಪಸರಿಸುವ ಪ್ರಯತ್ನದ ನೇತೃತ್ವ ವಹಿಸಿರುವುದರಲ್ಲಿ ನ್ಯಾಯಮೂರ್ತಿ ದಾಸ್ ಅವರ ಕಣ್ಣೋಟ ತುಂಬಾ ಸ್ಪಷ್ಟವಾಗಿದೆ. ಜನಗಳು ಸಂವಿಧಾನವನ್ನು ಅರ್ಥಮಾಡಿಕೊಳ್ಳಲು, ಅಂಗೀಕರಿಸಲು, ತಮ್ಮದಾಗಿ ಮಾಡಿಕೊಳ್ಳಲು ಮತ್ತು ಬಲಪಂಥೀಯ ಶಕ್ತಿಗಳ ಹೊಡೆತಗಳಿಂದ ಅದನ್ನು ರಕ್ಷಿಸಿಕೊಳ್ಳಲು ಇದು ಅನುವು ಮಾಡಿಕೊಡುತ್ತದೆ.

ಎಲ್ಲ ದೇಶಗಳಲ್ಲೂ ಸಂವಿಧಾನ ರಚನೆಯ ಮೂಲವನ್ನು ಈ ಪುಸ್ತಕ ವಿವರಿಸುತ್ತದೆಯಷ್ಟೇ ಅಲ್ಲ, ನಮ್ಮ ಈ ವೈವಿಧ್ಯಮಯ ದೇಶದಲ್ಲಿ ಅದು ಎಷ್ಟು ಕಾರ್ಯಸಾಧ್ಯ, ಅದರ ಅಂತಸ್ಸತ್ವ, ಸಾಮಾಜಿಕ ಪ್ರಸ್ತುತತೆ ಏನು ಎಂಬುದನ್ನು ಕೂಡ ಇದು ವಿವರಿಸುತ್ತದೆ. ಅದನ್ನು ಚಾರಿತ್ರಿಕ ಮತ್ತು ಸಾಮಾಜಿಕ ಸಂದರ್ಭದಲ್ಲಿ ನಮಗೆ ಅರ್ಥಮಾಡಿಕೊಳ್ಳುವಂತೆ ಸುಲಲಿತವಾಗಿ ವಿಷಯವನ್ನು ಈ ಪುಸ್ತಕದಲ್ಲಿ ಮಂಡಿಸಲಾಗಿದೆ. ಅಷ್ಟೇ ಅಲ್ಲ, ಸಂವಿಧಾನ ಹೇಗೆ ಕೆಲಸ ಮಾಡುತ್ತಿದೆ, ಅದಕ್ಕೆ ಮಾಡಿರುವ ತಿದ್ದುಪಡಿಗಳೇನು, ಸಂವಿಧಾನದ ಮೂಲರಚನೆಯನ್ನೇ ಬದಲಿಸಿ ಅದನ್ನು ಒಳಗಿಂದಲೇ ಹಾಳುಗೆಡವದಂತೆ ಸಂಸತ್ತಿನ ಅಧಿಕಾರಕ್ಕೆ ಕಡಿವಾಣ ಹಾಕಿದ ಸುಪ್ರಿಂ ಕೋರ್ಟಿನ ತೀರ್ಪುಗಳೇನು ಮತ್ತು ಈಗಿನ ಸವಾಲುಗಳೇನು ಎಂಬುದರ ಸಾರವನ್ನೂ ಇದರಲ್ಲಿ ಕೊಡಲಾಗಿದೆ,

"ತತ್ವಜ್ಞಾನಿಗಳು ಇದುವರೆಗೆ ಜಗತ್ತನ್ನು ವಿವಿಧ ರೀತಿಗಳಲ್ಲಿ ವ್ಯಾಖ್ಯಾನಿಸಿದ್ದಾರೆ, ಆದರೆ ಮುಖ್ಯವಾದ ಅಂಶ ಎಂದರೆ ಅದನ್ನು ಬದಲಾಯಿಸುವುದು" ಎಂದು ಕಾರ್ಲ್ ಮಾರ್ಕ್ಸ್ ತನ್ನ 'ಫೊಯೆರ್‌ಬಾಖ್ ಕುರಿತ ಪ್ರಮೇಯ' ಕೃತಿಯಲ್ಲಿ ಹೇಳಿದ್ದಾರೆ. ಅದರ 11ನೇ ಪ್ರಮೇಯದಲ್ಲಿ ಅವರು ಅಮೂರ್ತವಾಗಿರಬಾರದು, ಮೂರ್ತವಾಗಿರಬೇಕು ಎಂಬ ತೀರ್ಮಾನಕ್ಕೆ ಬಂದಿದ್ದರು. ಕಾರ್ಮಿಕ ವರ್ಗದ ಆಂದೋಲನಕ್ಕೆ ಮಾನವಕುಲದ ಉದ್ಧಾರವೇ ಪರಮ ಗುರಿ. ಆದ್ದರಿಂದ ಅದನ್ನು "ಈಗಿರುವ ಹಾಗೆ' ಸ್ವೀಕರಿಸುವುದು ಅದು 'ಹೇಗಿರಬೇಕು' ಎನ್ನುವ ಗುರಿಯತ್ತ ಮುಂದೆ ಸಾಗಲು ಒಂದು ಶರತ್ತು ಮಾತ್ರ. ಆದ್ದರಿಂದಲೇ ಅಸ್ತಿತ್ವದ ಪರಿಸ್ಥಿತಿಗಳನ್ನು ಬದಲಿಸಬೇಕೆಂಬ ಅಂಶವನ್ನು ಮಾರ್ಕ್ಸ್ ಎತ್ತುತ್ತಾರೆ.

ಕೇರಳದಲ್ಲಿ ಆಡಳಿತವನ್ನು ನಿರ್ವಹಿಸುವಾಗ ಸಂವಿಧಾನವನ್ನು ದುಡಿಸುವಲ್ಲಿ ಎದ್ದುಬಂದ ಈ ಪ್ರಶ್ನೆಯನ್ನು ಎದುರಿಸುವಲ್ಲಿಯೇ, ಕಾಮ್ರೇಡ್ ಇ ಎಂ ಎಸ್ ನಂಬೂದಿರಿಪಾಡ್, 1957ರಲ್ಲಿ, ಮತ್ತು 1967ರಲ್ಲೂ, ಎರಡೂ ಬಾರಿ ವಜಾಗೊಳ್ಳುವಾಗ ಸಂವಿಧಾನವನ್ನು ಬದಲಿಸುವ ಅಂಶವನ್ನು ಕೈಗೆತ್ತಿಕೊಂಡರು. ಅವರು ಸಂವಿಧಾನವನ್ನು ಪೂರ್ತಿಯಾಗಿ ಬದಲಿಸಬೇಕು ಎಂದು ಈ ಹಿಂದೆ ಎಪ್ಪತ್ತರ ದಶಕದಲ್ಲಿ ಆಗ್ರಹಿಸಿದ್ದರು. ಇದಕ್ಕೆ ಸುಪ್ರಿಂ ಕೋರ್ಟ್ ಒಂದು ರೂಪಾಯಿಯ ಸಾಂಕೇತಿಕ ದಂಡ ವಿಧಿಸಿ ಅವರನ್ನು ಶಿಕ್ಷಿಸಿತ್ತು. ಸಂವಿಧಾನವನ್ನು ರಕ್ಷಿಸುವ ಈ ಶಿಕ್ಷೆಯನ್ನು ಸಂವಿಧಾನದ ಪ್ರಕಾರ ವಿಧಿಸಲಾಗಿತ್ತು.

ಈಗ 'ಸಂವಿಧಾನ ಓದು' ಸಂದರ್ಭದಲ್ಲಿಯೂ ಅದೇ ಸನ್ನಿವೇಶ, ಸಂವಿಧಾನವನ್ನು ರಕ್ಷಿಸಬೇಕಾದ ಸನ್ನಿವೇಶ ಇದೆ. ಇಲ್ಲಿನ ಸಂದೇಶ ಸ್ಪಷ್ಟ. ಸಂವಿಧಾನ ಹೇಗೆ ಕೆಲಸ ಮಾಡಿದೆ ಎಂಬ ದುಡಿಯುವ ಜನಗಳ ಅನುಭವಗಳನ್ನು ಗಮನಿಸದೆ ಸಂವಿಧಾನದ ಅಮೂರ್ತ ಓದಿನಿಂದಷ್ಟೇ ದುಡಿಯುವ ಜನಗಳು ತೃಪ್ತರಾಗಬಾರದು.

ಸಂವಿಧಾನದ ಕೆಲಸದ ಅನುಭವ

ಕಾರ್ಮಿಕ ವರ್ಗದ ಆಂದೋಲನ ತನ್ನ ಅನುಭವ ಮತ್ತು ಬದ್ಧತೆಯಿಂದಾಗಿ ಸಂವಿಧಾನಕ್ಕೆ ಬಹುಮುಖೀ ಸವಾಲುಗಳನ್ನು ಒಡ್ಡಿತು. 1950ರಲ್ಲಿ , ಜನವರಿ 26ರಂದು, ಅಂದರೆ ಮೊದಲ ಗಣತಂತ್ರ ದಿನದಂದೇ ಸಂವಿಧಾನವನ್ನು ಪ್ರತಿಭಟಿಸುವಾಗ ಒಬ್ಬ ಕಟ್ಟಾ ಕಮ್ಯುನಿಸ್ಟ್ ಸರ್ದಾರ್ ಗೋಪಾಲಕೃಷ್ಣನ್ ಹುತಾತ್ಮರಾದರು. ನಂತರ ಎ.ಕೆ.ಗೋಪಾಲನ್, ತನ್ನ ಬಂಧನದ ವಿರುದ್ಧ ಮದ್ರಾಸ್ ಹೈಕೋರ್ಟಿನಲ್ಲಿ ವಾದಿಸುತ್ತ ಪ್ರತಿಬಂಧಕ ಬಂಧನಕ್ಕೆ ಸವಾಲು ಹಾಕಿದರು. ಇದರಿಂದಾಗಿ ಅವರ ಬಿಡುಗಡೆಯಾಯಿತು. ಎಕೆಜಿ ಸ್ವಾತಂತ್ರ್ಯ ಹೋರಾಟಗಾರನಾಗಿ 17 ವರ್ಷ ಜೈಲುವಾಸ ಅನುಭವಿಸಿದವರು, ದೇಶ ಸ್ವತಂತ್ರವಾಗುವ ದಿನದಂದೂ ಅವರು ಬಂಧನದಲ್ಲಿದ್ದರು, ಕಣ್ಣೂರು ಜೈಲಿನಲ್ಲೆ ಅವರು ರಾಷ್ಟ್ರೀಯ ಬಾವುಟವನ್ನು ಹಾರಿಸಿ, ವಿಜಯದ ಮೆರವಣಿಗೆ ನಡೆಸಿ ಸ್ವಾತಂತ್ರ್ಯ ದಿನಾಚರಣೆ ನಡೆಸಿದರು ಎಂಬುದನ್ನು ಇಲ್ಲಿ ನೆನಪಿಸಿಕೊಳ್ಳಬಹುದು. ಸಂವಿಧಾನ ಅಸ್ತಿತ್ವಕ್ಕೆ ಬಂದ ಮೇಲೂ, ಮದ್ರಾಸ್ ಹೈಕೋರ್ಟ್ ಅವರನ್ನು ಬಿಡುಗಡೆಗೊಳಿಸುವ ವರೆಗೂ ಅವರ ಜೈಲುವಾಸ ಮುಂದುವರೆಯಿತು.

ನಂತರ ಸಂವಿಧಾನದ 356ನೇ ವಿಧಿಯ ದುರುಪಯೋಗ ಹಲವು ಬಾರಿ ನಡೆಯಿತು. ಇದು ಸಂವಿಧಾನಿಕ ಮತ್ತು ಪ್ರಜಾಪ್ರಭುತ್ವ ಪ್ರಕ್ರಿಯೆಗೆ ಒಂದು ಸವಾಲಾಯಿತು. ಆ ಮೇಲೆ ಇದರ ಮೇಲೂ ಕಡಿವಾಣ ಬಿತ್ತು. ಸುಪ್ರಿಂ ಕೋರ್ಟ್ ಎಸ್ ಆರ್ ಬೊಮ್ಮಾಯಿ ಕೇಸಿನಲ್ಲಿ ಅದಕ್ಕೆ ಸಂಸತ್ತಿನ ಮಂಜೂರಾತಿ ಬೇಕು ಎಂಬುದನ್ನು ಸೇರಿಸಿತು.

1973ರಲ್ಲಿ ಕೇಶವಾನಂದ ಭಾರತಿ ಮೊಕದ್ದಮೆ(ಈ ಬಗ್ಗೆ ಈ ಪುಸ್ತಕದಲ್ಲಿ ಒಂದು ಪ್ರತ್ಯೇಕ ಅಧ್ಯಾಯವೇ ಇದೆ) ತೀರ್ಪು ಬಂತು. 1975ರಲ್ಲಿ ಅಲಹಾಬಾದ್ ಹೈಕೋರ್ಟ್‌ನಿಂದ ಇಂದಿರಾ ಗಾಂಧಿಯವರ ಲೋಕಸಭಾ ಸದಸ್ಯತ್ವವನ್ನು ರದ್ದು ಮಾಡುವ ತೀರ್ಪು ಬಂತು. ಇಂದಿರಾ ಗಾಂಧಿ ತುರ್ತು ಪರಿಸ್ಥಿತಿ ಹೇರಿ ಲೋಕಸಭೆಯ ಕಾರ್ಯಕಾಲವನ್ನು ಅದರ ಮೂಲ ಅವಧಿಗಿಂತಲೂ ಆಚೆ ಒಂದು ವರ್ಷ ವಿಸ್ತರಿಸಿದರು. ಮೂಲಭೂತ ಹಕ್ಕುಗಳನ್ನು ಅಮಾನತುಗೊಳಿಸಿದರು, ಸಾವಿರಾರು ಮಂದಿಯನ್ನು ಜೈಲಿಗೆ ಹಾಕಿದರು, ಅಂತಿಮವಾಗಿ ಚುನಾವಣೆಗಳನ್ನು ನಡೆಸಲೇ ಬೇಕಾಗಿ ಬಂದಾಗ ಶೋಚನೀಯವಾಗಿ, ಅದೂ ಉತ್ತರ

ಪುಟ 10 ಕ್ಕೆ



"ಕಾರ್ಮಿಕ ಆಂದೋಲನಕ್ಕೆ ಸಂವಿಧಾನವನ್ನು ಕಾಪಾಡಿಕೊಳ್ಳುವುದು ಮತ್ತು ರಕ್ಷಿಸುವುದು ಅಗತ್ಯವಾಗಿದ್ದರೂ ಕೂಡ, ಅದು ಸಂವಿಧಾನದ ಮೂಲರಚನೆಯನ್ನು ಬಲಪಡಿಸುವ ಮತ್ತು ಕಾರ್ಮಿಕ ವರ್ಗದ ಪರವಾಗಿ ಕೆಲಸ ಮಾಡುವಂತಾಗುವ ಪ್ರಯತ್ನವಾಗಿ ವಿಕಾಸಗೊಳ್ಳಬೇಕು, ನ್ಯಾಯಮೂರ್ತಿ ನಾಗಮೋಹನ ದಾಸ್ ಅವರ ಅವಿಶ್ರಾಂತ ಪರಿಶ್ರಮಕ್ಕೆ ಈ ರುಚಿಯನ್ನು ಸೇರಿಸಲು ಸಿಐಟಿಯುಗೆ ಸಾಧ್ಯವಾಗಬೇಕು. ನಾವು ಅವರ ಪ್ರಯತ್ನಗಳೊಂದಿಗೆ ಕೈಜೋಡಿಸೋಣ, ಇದನ್ನು ಸಂವಿಧಾನವನ್ನು ಪುನರ್‍ರಚಿಸುವ, ಅದನ್ನು ಎಂದೂ ಕಾರ್ಮಿಕ ವರ್ಗದ ಮತ್ತು ಪ್ರಜಾಪ್ರಭುತ್ವ ಆಂದೋಲನದ ವಿರುದ್ಧ ಬಳಸಲಾಗದಂತೆ ಮಾಡುವ ತಾರ್ಕಿಕ ನೆಲೆಯತ್ತ ಮುಂದಕ್ಕೆ ಒಯ್ಯೋಣ."

....'ಸಂವಿಧಾನ ಓದು' ಮತ್ತು ಕಾರ್ಮಿಕ ವರ್ಗದ ಆಂದೋಲನ

ಪುಟ 9 ರಿಂದ

ಭಾರತದಾದ್ಯಂತ, ಸೋತರು. ಆಂತರಿಕ ತುರ್ತು ಪರಿಸ್ಥಿತಿ ಸಂವಿಧಾನಿಕ ಪ್ರಕ್ರಿಯೆಗೆ ಒಂದು ದೊಡ್ಡ ಸವಾಲಾಗಿತ್ತು.

ಬಲಪಂಥೀಯ ಶಕ್ತಿಗಳಿಂದ ಸವಾಲು

ಇಂದಿರಾ ಅವರಿಗೆ ಸವಾಲು ಮುಖ್ಯವಾಗಿ ಬಲಪಂಥೀಯ ಶಕ್ತಿಗಳಿಂದ ಬಂದಿತ್ತು. ಆದರೂ ಸಿಪಿಐ(ಎಂ)ನ್ನು ಏಕಾಂಗಿಯಾಗಿಸಲು ಆಕೆ ಪ್ರಹಾರ ನಡೆಸುತ್ತಿದ್ದರು, ಸಿಪಿಐ(ಎಂ) ಅವರನ್ನು ಖಡಾಖಂಡಿತವಾಗಿ ವಿರೋಧಿಸುತ್ತಿತ್ತು ಎಂಬುದನ್ನೂ ಗಮನಿಸದಿರಲು ಸಾಧ್ಯವಿಲ್ಲ. ಎಡ ಐಕ್ಯತೆಯನ್ನು ಛಿದ್ರಗೊಳಿಸುವಲ್ಲಿ ಆಕೆ ಯಶಸ್ವಿಯಾದರು. ಪಶ್ಚಿಮ ಬಂಗಾಲದಲ್ಲಿ ಸಂಯುಕ್ತ ರಂಗ ಸರಕಾರಗಳನ್ನು ವಜಾ ಮಾಡಲಾಯಿತು, 1972ರಿಂದ 1977 ರ ವರೆಗೆ ಬಂಗಾಲದಲ್ಲಿ ಅರೆ-ಫ್ಯಾಸಿಸ್ಟ್ ಭಯೋತ್ಪಾದನೆಯನ್ನು ಹೇರಲಾಯಿತು. ಜನತಾ ಪಾರ್ಟಿಯ ಸ್ವರೂಪದಲ್ಲಿ ಒಟ್ಟುಗೂಡಿದ ಎಲ್ಲ ವಿರೋಧಿ ಶಕ್ತಿಗಳಿಂದಾಗಿ ಆಕೆಗೆ ಸೋಲಾಗುವ ವರೆಗೆ ಇದು ಮುಂದುವರೆಯಿತು.

ಆದಾಗ್ಯೂ, ಈಗ ಹಿಂದಿರುಗಿ ನೋಡುವಾಗ, ಸಂವಿಧಾನವನ್ನು ಇಂದಿರಾ ಗಾಂಧಿ ದುಡಿಸಿಕೊಂಡುದರಲ್ಲಿಯೂ ಕೆಲವು ಪ್ರಗತಿಪರ ಅಂಶಗಳಿದ್ದವು ಎಂಬುದನ್ನು ಗಮನಿಸಬೇಕು. 1976ರಲ್ಲಿ 42ನೇ ತಿದ್ದುಪಡಿ ಎಂದು ಹೆಸರಿಸಿ ಜಾತ್ಯತೀತತೆ ಮತ್ತು ಸಮಾಜವಾದ ಎಂಬುದನ್ನು ಸಂವಿಧಾನದ ಪೀಠಿಕೆಯಲ್ಲಿ ಸೇರಿಸಲಾಯಿತು. ಇದು ನಮಗೆ ಈಗ ಸಂತೋಷದ ಸಂಗತಿ. ಮೂಲಭೂತ ಕರ್ತವ್ಯಗಳು ಎಂಬೊಂದು ಅಧ್ಯಾಯವನ್ನೂ ಆಕೆ ಸೇರಿಸಿದರು. ನಿರ್ದೇಶಕ ಸೂತ್ರಗಳನ್ನು ಜಾರಿಗೆ ತರಲು ತಂದ ಕಾನೂನುಗಳು ಮೂಲಭೂತ ಹಕ್ಕುಗಳ ಕೆಲವು ಅಂಶಗಳನ್ನು ಬಾಧಿಸಿದರೂ ಅವನ್ನು ಸಂವಿಧಾನಬಾಹಿರ ಎಂದು ಕಿತ್ತುಹಾಕದಂತೆ ನ್ಯಾಯಾಲಯದ ಅಧಿಕಾರಕ್ಕೆ ಕತ್ತರಿ ಹಾಕಲಾಯಿತು. ಹೀಗೆ, ಕೆಲವು ಮೂಲಭೂತ ಹಕ್ಕುಗಳಿಗೆ ಅಡ್ಡಿಯಾದರೂ ನಿರ್ದೇಶಕ ಸೂತ್ರಗಳನ್ನು ಒಂದು ಪ್ರಣಾಳಿಕೆಯಂತೆ ಜನಗಳ ಮುಂದೆ ಇಟ್ಟಿರುವುದು ಈಗ ಪ್ರಗತಿಪರ ಶಕ್ತಿಗಳು ಅವಲಂಬಿಸಬಹುದಾದ ಒಂದು ಸರಿಯಾದ ಹೆಜ್ಜೆ.

ಪ್ರಸಕ್ತ ಕರ್ತವ್ಯ

ಪ್ರಸಕ್ತ ಸಂದರ್ಭವನ್ನು ನ್ಯಾಯಮೂರ್ತಿ ದಾಸ್‌ರವರೇ ಈ ಪುಸ್ತಕದಲ್ಲಿ ನಿರೂಪಿಸಿದ್ದಾರೆ. ಪ್ರತಿಗಾಮಿ ಪ್ರಕ್ರಿಯೆಗಳಿಂದ ಬೆದರಿಕೆಗಳು ಬರುತ್ತಿವೆ. ಅವು ಸಂವಿಧಾನವನ್ನು ಬುಡಮೇಲು ಮಾಡಲು ಗಂಭೀರ ಪ್ರಯತ್ನಗಳನ್ನು ನಡೆಸಿವೆ. ಅಕ್ಟೋಬರ್ 7ರಂದು ಬೆಂಗಳೂರಿನ ಸೆನೆಟ್ ಹಾಲ್‌ನಲ್ಲಿ ಸಿಐಟಿಯು ಮುಖಂಡರನ್ನು ಉದ್ದೇಶಿಸಿ ಮಾಡಿದ ಭಾಷಣದಲ್ಲಿ ನ್ಯಾಯಮೂರ್ತಿ ದಾಸ್ ಸಂವಿಧಾನದ ಮೂಲರಚನೆಯಲ್ಲಿ, ರಾಜಕೀಯ ಪಕ್ಷಗಳು ತಮ್ಮ ಪ್ರಣಾಳಿಕೆಗಳಲ್ಲಿ ಜನತೆಗೆ ನೀಡುವ ವಾಗ್ದಾನಗಳನ್ನು ಈಡೇರಿಸಬೇಕಾದ ಅಂಶವನ್ನು ಸೇರಿಸುವ ಅಗತ್ಯ ಇದೆ ಎಂದರು.

ಬಲಪಂಥೀಯರು ಸಂವಿಧಾನವನ್ನು ದುಡಿಸಿಕೊಳ್ಳಲು ಅದರ ಮೇಲೆ ಮಾಡುತ್ತಿರುವ ದಾಳಿಗಳಿಂದ ಅದನ್ನು ರಕ್ಷಿಸಲು ಉನ್ನತ ನ್ಯಾಯಾಂಗದ ಪ್ರಯತ್ನಗಳನ್ನು 'ನ್ಯಾಯಾಂಗದ ಸಕ್ರಿಯತೆ' ಎಂದು ವರ್ಣಿಸಲಾಗುತ್ತಿದೆ ಎಂಬುದು ಗಮನಾರ್ಹ. ಇಂತಹ ಒಂದು ಸುಪ್ರಿಂ ಕೋರ್ಟ್ ತೀರ್ಪಿನಿಂದಾಗಿ, ಯಾವುದೇ ರಾಜಕೀಯ ಪಕ್ಷ ಚುನಾವಣಾ ಪ್ರಕ್ರಿಯೆಯಲ್ಲಿ ಭಾಗವಹಿಸಲು ಸಾಧ್ಯವಾಗಬೇಕಾದರೆ ಅದು ತನ್ನ ಪಕ್ಷದ ಸಂವಿಧಾನದಲ್ಲಿ ಭಾರತೀಯ ಸಂವಿಧಾನಕ್ಕೆ ಬದ್ಧವಾಗಿದ್ದೇನೆ ಎಂಬ ಅಂಶವನ್ನು ಒಳಗೊಂಡಿರಬೇಕು ಎಂದು ಚುನಾವಣಾ ಆಯೋಗ ಆಗ್ರಹಿಸುವಂತೆ ಆಗಿದೆ. ಇದರ ಸಕಾರಾತ್ಮಕ ಅಂಶವೆಂದರೆ ಬಿಜೆಪಿ ಕೂಡ ತನ್ನ ಸಂವಿಧಾನವನ್ನು ತಿದ್ದುಪಡಿ ಮಾಡಿ ಜಾತ್ಯತೀತತೆ ಮತ್ತು ಸಮಾಜವಾದಕ್ಕೆ ತಾನು ಬದ್ಧ ಎಂದು ಹೇಳಬೇಕಾಗಿ ಬಂದಿದೆ. ಸಿಪಿಐ(ಎಂ) ಕೂಡ ಹೈದರಾಬಾದಿನಲ್ಲಿ ನಡೆದ ತನ್ನ 22ನೇ ಮಹಾಧಿವೇಶನದಲ್ಲಿ ತಿದ್ದುಪಡಿ ಮಾಡಿದೆ.

ಈ ದಾರಿಯಲ್ಲಿ, ಸಂವಿಧಾನವನ್ನು ಹೀಗೆ ದುಡಿಸಿಕೊಳ್ಳುವಂತೆ ಮಾಡಬಹುದು: ಎಲ್ಲ ಪಕ್ಷಗಳೂ ಸಂವಿಧಾನದ ಪೀಠಿಕೆಯಲ್ಲಿ ಹೇಳಿರುವ ನಾಲ್ಕು ಸ್ತಂಭಗಳಿಗೆ, ಅಂದರೆ ಸಾರ್ವಭೌಮತೆ, ಗಣತಂತ್ರ, ಪ್ರಜಾಪ್ರಭುತ್ವ, ಜಾತ್ಯತೀತತೆ ಮತ್ತು ಸಮಾಜವಾದಕ್ಕೆ ಬದ್ಧವಾಗುವಂತೆ ಮಾಡುವುದು, ಮತ್ತು ಪ್ರಣಾಳಿಕೆ ಪ್ರಧಾನವಾಗಿ ಸಮಾಜವಾದದ ನಿರ್ದೇಶಕ ಸೂತ್ರಗಳಾಗುವಂತೆ ಮಾಡುವುದು. ನಿಜ, ಇವು ಆಯಾಯ ಪಕ್ಷಗಳ ತತ್ವ-ಸಿದ್ಧಾಂತ ಮತ್ತು ಧೋರಣೆಯ ವ್ಯಾಖ್ಯಾನಗಳಿಗೆ ಅನುಗುಣವಾಗಿ ಭಿನ್ನವಾಗಿರುತ್ತವೆ., ಇವನ್ನು ಜನಗಳ ಮುಂದಿಡುತ್ತವೆ, ಆದರೆ ಈ ಯಾವ ವ್ಯಾಖ್ಯಾನವೂ ಸಂವಿಧಾನದ ಮೂಲರಚನೆಯನ್ನು ಬುಡಮೇಲು ಮಾಡಲಾರದು.

ದಾಳಿಗಳಿಂದ ಸಂವಿಧಾನವನ್ನು ಕಾಯ್ದುಕೊಳ್ಳುವ ಮತ್ತು ರಕ್ಷಿಸುವ ಈ ಅಗತ್ಯದಿಂದ ನ್ಯಾಯಮೂರ್ತಿ ದಾಸ್‌ರವರ ಈ ಪ್ರಚಾರಾಂದೋಲನವನ್ನು ಸಕ್ರಿಯವಾಗಿ ಬೆಂಬಲಿಸಬೇಕಾಗಿದೆ.



ಆತಂಕಿತ ಸಿಐಟಿಯು ಮುಖಂಡರು ಎತ್ತಿದ ಪ್ರಶ್ನೆಗಳು

ಪ್ರಶ್ನೋತ್ತರ ಅಧಿವೇಶನದಲ್ಲಿ ನ್ಯಾಯಮೂರ್ತಿ ದಾಸ್ ಕೆಲವಾರು ಪ್ರಶ್ನೆಗಳಿಗೆ, ಟಿಪ್ಪಣಿಗಳಿಗೆ ಉತ್ತರ ನೀಡಿದರು. ಇವುಗಳಲ್ಲಿ ಎರಡನ್ನು ಅವುಗಳಲ್ಲಿರುವ ಅಂಶಗಳಿಗೆ ಒತ್ತು ನೀಡುವುದಕ್ಕಾಗಿ ಇಲ್ಲಿ ಪರಿಶೀಲಿಸಲಾಗಿದೆ. ಒಬ್ಬ ಸಿಐಟಿಯು ಮುಖಂಡರು ನ್ಯಾಯನೀಡಿಕೆಯಲ್ಲಿ ವಿಳಂಬದಿಂದಾಗಿ, ಅನ್ಯಾಯಗಳಿಗೆ ಬಲಿಯಾದ ಕಾರ್ಮಿಕರು ದಶಕಗಳ ಕಾಲ ಕೆಲಸವಿಲ್ಲದೆ ಇರಬೇಕಾದ ಪರಿಸ್ಥಿತಿಯ ಬಗ್ಗೆ ಆತಂಕ ವ್ಯಕ್ತಪಡಿಸಿದರು.

ಈ ಪ್ರಶ್ನೆಗೆ ಸಿಕ್ಕಿದ ಉತ್ತರ, ಇದಕ್ಕೆ ಕಾರಣ ಸಂವಿಧಾನ ಕೆಲಸ ಮಾಡುವಲ್ಲಿನ ದೌರ್ಬಲ್ಯಗಳೇ ಹೊರತು, ಸಂವಿಧಾನದಲ್ಲೇ ಇರುವ ಸೀಮಿತತೆ ಅಲ್ಲ ಎಂದು. ಅರ್ಧಕ್ಕಿಂತಲೂ ಹೆಚ್ಚು ನ್ಯಾಯಾಧೀಶರ ಹುದ್ದೆಗಳನ್ನು ಭರ್ತಿ ಮಾಡಿರದಿರುವುದು ಇತ್ಯಾದಿ ಕಾರಣಗಳಿವೆ ಎಂದು ಅವರು ಹೇಳಿದರು.

ವಿಧಿ-ವಿಧಾನಗಳಲ್ಲಿನ ವಿಳಂಬದ ಪ್ರಯೋಜನವನ್ನು ಬಂಡವಾಳಶಾಹಿಗಳು ಪಡೆಯುತ್ತಾರೆ, ಆ ಮೂಲಕ ಕನಿಷ್ಟ ಕೂಲಿ ಮುಂತಾದ ಕಾರ್ಮಿಕ-ಸ್ನೇಹಿ ಅಧಿಸೂಚನೆಗಳು ಜಾರಿಯಾಗದಂತೆ ಮಾಡುತ್ತಾರೆ ಎಂಬುದು ನಿಜ. ಆದರೆ ಸುಪ್ರಿಂ ಕೋರ್ಟ್ ರೆಕಿಟ್ ಬ್ರೆಕ್ಕ್‌ಮನ್ ಮೊಕದ್ದಮೆಯಲ್ಲಿ 1993 ರಲ್ಲಿ ಹೇಳಿದ ಮತ್ತು ಹಲವು ಬಾರಿ ಪುನರುಚ್ಚರಿಸಿದ ಅಗತ್ಯ ಆಧಾರಿತ ಕನಿಷ್ಟ ಕೂಲಿಯ ಮಟ್ಟವನ್ನು ದಿಲ್ಲಿ ಸರಕಾರದ ಕನಿಷ್ಟ ಕೂಲಿ ಅಧಿಸೂಚನೆ ಮುಟ್ಟಿರದಿದ್ದರೂ ಕೂಡ ಅದನ್ನು ದಿಲ್ಲಿ ಹೈಕೋರ್ಟ್ ಅಸಿಂಧುಗೊಳಿಸಿತು ಎಂಬುದನ್ನು ಕಾರ್ಮಿಕ ಆಂದೋಲನ ಉಪೇಕ್ಷಿಸಲು ಸಾಧ್ಯವಿಲ್ಲ.

ವಿಧಿ-ವಿಧಾನಗಳಲ್ಲಿನ ವಿಳಂಬವಂತೂ ಮಾಲಕರಿಗೆ ಸಂವಿಧಾನದ 226ನೇ ವಿಧಿಯ ದುರುಪಯೋಗ ಮಾಡಿಕೊಳ್ಳುವ ಭರವಸೆ ನೀಡುವಂತದ್ದು. ಇದು ಕರ್ನಾಟಕದಲ್ಲಿ ಕೂಡ ಒಂದು ಅತ್ಯಂತ ಕೆಟ್ಟ ಅನುಭವವೂ ಹೌದು- ಕನಿಷ್ಟ ಕೂಲಿಯ ವಿಷಯದಲ್ಲೂ, ನಿವೃತ್ತಿಯ ವಿಷಯದಲ್ಲೂ.

ಹಿಂದಿರುಗಿ ನೋಡುವಾಗ, ಹೈಕೋರ್ಟುಗಳು ಸಂವಿಧಾನದ 226ನೇ ವಿಧಿಯನ್ನು ತಪ್ಪಾಗಿ ದುಡಿಸಿಕೊಳ್ಳುವುದೇ ಮುಖ್ಯ ಕಾರಣ ಎಂದು ಖಂಡಿತವಾಗಿಯೂ ಹೇಳಬಹುದು. ಇದಕ್ಕೆ ಬಲಿಯಾಗಿರುವುದು ಕೈಗಾರಿಕಾ ನ್ಯಾಯನಿರ್ಣಯ. ಸುಪ್ರಿಂ ಕೋರ್ಟ್ ಅಸ್ತಿತ್ವಕ್ಕೆ ಬರುವ ಮೊದಲು ಒಕ್ಕೂಟ ಮಟ್ಟದಲ್ಲಿ ಇದ್ದ ಕಾರ್ಮಿಕ ಅಪೀಲು ನ್ಯಾಯಮಂಡಳಿ ಪ್ರಗತಿಪರ ಸ್ವರೂಪವನ್ನು ಹೊಂದಿತ್ತು. ಶ್ರಮಜೀವಿಗಳ ಪರವಾಗಿ ನಿರ್ದೇಶಕ ಸೂತ್ರಗಳ ಜಾರಿಗಾಗಿ ನ್ಯಾಯಾಂಗ ಸಕ್ರಿಯತೆ ಎಂಬುದು ಸುಪ್ರಿಂ ಕೋರ್ಟಿನಲ್ಲಾಗಲೀ, ಅಥವ ಇತರ ಉನ್ನತ ನ್ಯಾಯಾಂಗದಲ್ಲಾಗಲೀ ಕಾಣಬರುತ್ತಿಲ್ಲ, ವಿಶೇಷವಾಗಿ ಸಂಸತ್ತು ಈ ವಿಷಯದಲ್ಲಿ ತನ್ನ ಕರ್ತವ್ಯದಲ್ಲಿ ವಿಫಲವಾಗಿರುವಾಗ ಇದು ಇನ್ನೂ ಮುಖ್ಯವಾಗುತ್ತದೆ.

ಎರಡನೇ ಪ್ರಶ್ನೆ- ಕಾರ್ಮಿಕ ಸಂಘದ ಚಟುವಟಿಕೆಯನ್ನು ಹೊಸಕಿ ಹಾಕಲು ಕೈಗಾರಿಕೆಗಳ ಮುಚ್ಚಿಕೆ(ಕ್ಲೋಶರ್)ಗಳ ಬಳಕೆ. ಇಂದಿರಾಗಾಂಧಿ ಪ್ರಧಾನಮಂತ್ರಿ ಯಾಗಿದ್ದಾಗ ಇದನ್ನು ಸರಕಾರದ ಮತ್ತು ಸಂಸತ್ತಿನ ಸೀಮಿತ ಅಧಿಕಾರಗಳ ಒಳಗೇ ನಿಭಾಯಿಸಲು ಸಾಧ್ಯವಾಗಿತ್ತು. ಅವರ ಆಳ್ವಿಕೆಯ ಪ್ರಗತಿಪರ ಅವಧಿಯಲ್ಲಿ ಆಕೆ ಒಂದಿಷ್ಟು ರಾಷ್ಟ್ರೀಕರಣಗಳನ್ನು ತಂದರು, ಸಾರ್ವಜನಿಕ ವಲಯದ ಪರವಾಗಿ ಬಲವಾದ ಕ್ರಮಗಳನ್ನು ಕೈಗೊಂಡರು. ಈ ಅವಧಿ ಆಂತರಿಕ ತುರ್ತು ಪರಿಸ್ಥಿತಿಯ ವೇಳೆಗೆ ತಾರಕಕ್ಕೆ ಮುಟ್ಟಿ ಅವರ ಸೋಲಿನೊಂದಿಗೆ ಕೊನೆಗೊಂಡಿತು. 1980ರಿಂದ 1985ರ ನಡುವೆ ಆಕೆ ಒಬ್ಬ ಬದಲಾದ ಪ್ರಧಾನ ಮಂತ್ರಿಯಾಗಿದ್ದರು. ಐಎಂಎಫ್ ವ್ಯವಹಾರ ಇತ್ಯಾದಿಗಳು ನಡೆದವು. ಆಕೆಯ ಮಗ ಮತ್ತು ನಂತರ ಬಂದವರು ಕೂಡ ಅದನ್ನು ಮುಂದುವರೆಸಿದರು.

ಕಾರ್ಮಿಕ ವರ್ಗದ ಆಂದೋಲನಕ್ಕೆ ಸಂವಿಧಾನವನ್ನು ಕಾಪಾಡಿಕೊಳ್ಳುವುದು ಮತ್ತು ರಕ್ಷಿಸುವುದು ಅಗತ್ಯವಾಗಿದ್ದರೂ ಕೂಡ, ಅದು ಸಂವಿಧಾನದ ಮೂಲರಚನೆಯನ್ನು ಬಲಪಡಿಸುವ ಮತ್ತು ಕಾರ್ಮಿಕ ವರ್ಗದ ಪರವಾಗಿ ಕೆಲಸ ಮಾಡುವಂತಾಗುವ ಪ್ರಯತ್ನವಾಗಿ ವಿಕಾಸಗೊಳ್ಳಬೇಕು, ನ್ಯಾಯಮೂರ್ತಿ ನಾಗಮೋಹನ ದಾಸ್ ಅವರ ಅವಿಶ್ರಾಂತ ಪರಿಶ್ರಮಕ್ಕೆ ಈ ರುಚಿಯನ್ನು ಸೇರಿಸಲು ಸಿಐಟಿಯುಗೆ ಸಾಧ್ಯವಾಗಬೇಕು. ನಾವು ಅವರ ಪ್ರಯತ್ನಗಳೊಂದಿಗೆ ಕೈಜೋಡಿಸೋಣ, ಇದನ್ನು ಸಂವಿಧಾನವನ್ನು ಪುನರ್ರಚಿಸುವ, ಅದನ್ನು ಎಂದೂ ಕಾರ್ಮಿಕ ವರ್ಗದ ಮತ್ತು ಪ್ರಜಾಪ್ರಭುತ್ವ ಆಂದೋಲನದ ವಿರುದ್ಧ ಬಳಸಲಾಗದಂತೆ ಮಾಡುವ ತಾರ್ಕಿಕ ನೆಲೆಯತ್ತ ಮುಂದಕ್ಕೆ ಒಯ್ಯೋಣ. ●

ಭಾರತ-ಅಮೇರಿಕಾ ಮಾತುಕತೆ: 2+2=0......

ಪುಟ 8 ರಿಂದ

ಹಾತೊರೆದಿದೆ. ಕಾರ್ಪೊರೇಟ್ ಮಾಧ್ಯಮಗಳು ಈ ದಿಕ್ಕಿನಲ್ಲಿ ಇಡುವ ಪ್ರತಿ ಹೆಜ್ಜೆಯನ್ನು ಸ್ವಾಗತಿಸುವುದಕ್ಕೆ ಇದೇ ಕಾರಣ.

ಭಾರತ-ರಶಿಯಾ ಸಂಬಂಧಕ್ಕೆ ಬೆದರಿಕೆ

2+2 ಸಭೆಯ ನಂತರ ಮೂಡಿರುವ ಮೋದಿ ಸರ್ಕಾರದ ಅಧೀನತೆ ಹೆಚ್ಚು ನಿಚ್ಚಳವಾಗಿದೆ. ಮೊದಲನೇಯದಾಗಿ ಅಮೆರಿಕಾ ಕಾಂಗ್ರೆಸ್‌ನಲ್ಲಿ ಅಂಗೀಕರಿಸಿದ ಕಾನೂನಿನಂತೆ ಅಮೇರಿಕಾದ ವಿರೋಧಿಗಳನ್ನು ದಿಗ್ಬಂಧನಕ್ಕೆ ಒಳಪಡಿಸುವುದು. ಇದರ ಪ್ರಕಾರ ರಶಿಯಾದೊಡನೆ ಯಾವುದೇ ರಾಷ್ಟ್ರ ವ್ಯವಹಾರ ನಡೆಸಿದರೆ ಅದನ್ನು ದಿಗ್ಬಂಧನಕ್ಕೆ ಒಳಪಡಿಸಬಹುದು.

ಭಾರತ ನಡೆಸಿರುವ ಕ್ಷಿಪಣಿ ಎಸ್-400 ವ್ಯವಹಾರ ಸಹಿತ ದಿಗ್ಬಂಧನಕ್ಕೆ ಒಳಪಡಲಿದೆ. ಮೋದಿ ಸರ್ಕಾರ ಈ ನೀತಿಯನ್ನು ಸಡಿಲಿಸುವಂತೆ ಬೇಡಿಕೊಳ್ಳುತ್ತಿದೆ. 2+2 ಸಭೆಯಲ್ಲಿ ಈ ನಿಟ್ಟಿನಲ್ಲಿ ಯಾವ ಭರವಸೆಯನ್ನು ನೀಡಿಲ್ಲ. ಮೋದಿ ಸರ್ಕಾರ ಈಗ ಇಕ್ಕಟಿನಲ್ಲಿ ಸಿಲುಕಿದೆ. ದಿಗ್ಬಂಧನ ಸಡಿಲಿಸುವುದಕ್ಕೆ ರಶಿಯಾದಿಂದ ಕೊಳ್ಳುವ ರಕ್ಷಣಾ ಸಲಕರಣೆಗಳ ಪ್ರಮಾಣವನ್ನು ತಗ್ಗಿಸುವ ಷರತ್ತುಗಳನ್ನು ವಿಧಿಸಬಹುದು. ಇಂತಹ ಷರತ್ತು ಭಾರತದ ರಕ್ಷಣೆ ಮತ್ತು ರಾಷ್ಟ್ರೀಯ ಹಿತ್ತಕ್ಕೆ ಧಕ್ಕೆ ತರಬಹುದಾಗಿದೆ. ನಮಗೆ ಪಾರಂಪರಿಕವಾಗಿ ರಶಿಯಾ ಸೊವಿಯೆಟ್ ಯೂನಿಯನ್ ಕಾಲದಿಂದಲೂ ರಕ್ಷಣಾ ಸಲಕರಣೆಗಳನ್ನು ಸರಬರಾಜು ಮಾಡುತ್ತಿದೆ. ಅಮೇರಿಕಾ ರಶಿಯಾ ಸ್ಥಾನದಲ್ಲಿ ಕೂರುವ ಇಚ್ಛೆಯನ್ನು ಪ್ರಕಟಪಡಿಸಿದೆ. ಈಗ ಇರುವ ಮಿಲಿಟರಿ ಒಪ್ಪಂದ ಪ್ರಕಾರ "ಪರಸ್ಪರ ಕೆಲಸ ಮಾಡುವ ಸಾಧ್ಯತೆ" ಉಪಯೋಗಿಸಿ ಭಾರತವನ್ನು ಹಿಂಡಿ ಅಮೇರಿಕಾದಿಂದ ಯುದ್ಧೋಪಕರಣ ಸರಬರಾಜು ಪಡೆಯುವಂತೆ ಸ್ಥಿತಿ ನಿರ್ಮಿಸಬಹುದು.

ಡೊನಾಲ್ಡ್ ಟ್ರಂಪ್ ರವರ "ಅಮೇರಿಕಾ ಮೊದಲು" ನೀತಿಗೆ ಒತ್ತು ನೀಡಿ ವ್ಯವಹಾರ ಅಧಿಕಾಂಶವನ್ನು ಮುಂದೆ ಮಾಡಿ ಬಿಲಿಯನ್ ಡಾಲರ್‌ಗಳ ಯುದ್ಧ ಸಲಕರಣೆಗಳನ್ನು ಕೊಳ್ಳುವಂತೆ ನಿರಂತರ ಒತ್ತಾಯ ಮಾಡಬಹುದಾಗಿದೆ.

ಇರಾನ್ ತೈಲ ನಿರ್ಬಂಧ:

ಈ ಅಧೀನ ಸ್ನೇಹದ ಇನ್ನೊಂದು ಲಕ್ಷಣ ಅಮೇರಿಕಾದ ಇರಾನ್ ಮೇಲಿನ ನಿರ್ಬಂಧ. ಟ್ರಂಪ್ ಏಕಪಕ್ಷೀಯವಾಗಿ ಇರಾನ್‌ನೊಡನೆ ಆರು ದೇಶಗಳೊಡನೆ ಇದ್ದ ಪರಮಾಣು ಒಪ್ಪಂದದಿಂದ ಹಿಂದೆ ಬಂದು ಮೇ ತಿಂಗಳಿನಲ್ಲಿ ದಿಗ್ಬಂಧನವನ್ನು ಮತ್ತೆ ವಿಧಿಸಿದ್ದಾರೆ. ಎಲ್ಲ ದೇಶಗಳಿಗೂ ನವೆಂಬರ್ ತಿಂಗಳಿನಿಂದ ಇರಾನ್‌ನಿಂದ ತೈಲವನ್ನು ಕೊಳ್ಳದಂತೆ ಎಚ್ಚರಿಕೆ ನೀಡಿದ್ದಾರೆ. ಇದನ್ನು ಪಾಲಿಸದಿದ್ದಲ್ಲಿ ಆ ದೇಶಗಳ ಮತ್ತು ಆ ದೇಶದ ವ್ಯವಹಾರ ನಡೆಸುವ ಸಂಸ್ಥೆಗಳ ವಿರುದ್ಧ ದಿಗ್ಬಂಧನವನ್ನು ಹೇರಲಾಗುತ್ತದೆ. ವಿಶ್ವಸಂಸ್ಥೆ ದಿಗ್ಬಂಧನವನ್ನು ಸಡಿಲಿಸಿದ ನಂತರ ಭಾರತ ನಿರಂತರವಾಗಿ ಇರಾನ್‌ನಿಂದ ಹೆಚ್ಚು ತೈಲ ಕೊಳ್ಳುತ್ತಿದೆ. ಈಗ ಅಮೇರಿಕಾದ ನಿರ್ಬಂಧದ ಭೀತಿ ಭಾರತವನ್ನು ಆವರಿಸಿದೆ. ಹಿಂದೆ ಇದೇ ಭೀತಿಯಲ್ಲಿ ಮನ್‌ಮೋಹನ್‌ಸಿಂಗ್ ಸರ್ಕಾರ ಇರಾನ್‌ನಿಂದ ತೈಲ ಪಡೆಯುವುದನ್ನು ಕಡಿಮೆ ಮಾಡಿತ್ತು. ಈಗ 2+2 ಮಾತುಕತೆಯಲ್ಲಿ ಭಾರತವನ್ನು ಕೊಳ್ಳುವಿಕೆಯನ್ನು ಶೂನ್ಯ ಮಟ್ಟಕ್ಕೆ ತರಲು ಸ್ಪಷ್ಟ ಪಡಿಸಿದೆ. ಭಾರತ ತೈಲ ಆಮದನ್ನು ಗಣನೀಯ ಪ್ರಮಾಣದಲ್ಲಿ ತಗ್ಗಿಸಿದರೆ ನವೆಂಬರ್ ತಿಂಗಳಲ್ಲೇ ದಿಗ್ಬಂಧನವನ್ನು ವಿಧಿಸದೇ ಇರಬಹುದು. ಆದರೆ ಅಗಸ್ಟ್ ನಿಂದಲೇ ಭಾರತ ತೈಲ ಆಮದನ್ನು ಕಡಿಮೆ ಮಾಡಿರಬಹುದು ಎಂಬ ಅನುಮಾನವಿದೆ.

ಇರಾನ್‌ನ ಚಾಬಾರ್ ತೀರದಲ್ಲಿ ಭಾರತದ ಹೂಡಿಕೆಯ ಬಗ್ಗೆ ಅಮೇರಿಕಾ ಯಾವ ನಿಶ್ಚಿತವಾದ ಪರಿಹಾರಗಳನ್ನು ನೀಡಿರುವುದಿಲ್ಲ.

ಭಾರತಕ್ಕೆ ಶೂನ್ಯ:-

ರಶಿಯಾ ಕ್ಷಿಪಣಿ ಮತ್ತು ಇರಾನ್‌ನ ತೈಲದ ಆಮದಿನ ವಿಷಯದಲ್ಲಿ ಅಮೇರಿಕಕ್ಕೆ ಬೇಕಾದಂತೆ ಭಾರತ ತನ್ನ ಹಿತಾಸಕ್ತಿಯ ವಿರುದ್ಧ ನಡೆಯುವಂತೆ ನೋಡಿಕೊಂಡಿದೆ. 2+2 ಮಾತುಕತೆ ಭಾರತಕ್ಕೆ ಏನನ್ನೂ ನೀಡಿಲ್ಲ.

ಟ್ರಂಪ್ ತಂಡ ಭಾರತವನ್ನು ತಾನು ಗಳಿಸಿರುವ ವ್ಯವಹಾರ ಮಿಗುತಾಯವನ್ನು ಅಮೇರಿಕಾ ಸರಕು ಮತ್ತು ಆಯುಧಗಳನ್ನು ಕೊಳ್ಳುವಂತೆ ಒತ್ತಾಯಿಸಿದೆ. ಭಾರತದ ಮಾರುಕಟ್ಟೆಗೆ ಮತ್ತು ವಿದೇಶಿ ಬಂಡವಾಳ ಹೂಡಿಕೆಗೆ ಇರುವ ಕಾನೂನುಗಳನ್ನು ಸಡಿಲಿಸಲು ಒತ್ತಾಯಿಸುತ್ತಿದೆ. ಸ್ಟೀಲ್ ಮತ್ತು ಅಲ್ಯೂಮಿನಿಯಮ್ ಸುಂಕದ ಬಗ್ಗೆಯಾಗಲಿ ಅಥವಾ ವೀಸಾ ನಿಯಮಗಳ ಸಡಿಲಿಕೆ ಬಗ್ಗೆ ಚಕಾರವೆತ್ತುತ್ತಿಲ್ಲ.

ರಾಷ್ಟ್ರೀಯತೆ ಬಗ್ಗೆ ಬೊಬ್ಬೆ ಹೊಡೆಯುವ ಮೋದಿ ಸರ್ಕಾರ ಅಮೇರಿಕಾ ಜತೆ ವ್ಯವಹಾರ ನಡೆಸುವಾಗ ಮತ್ತು ಸಾಮ್ರಾಜ್ಯಶಾಹಿ ಬೇಡಿಕೆಗಳನ್ನು ಎದುರಿಸುವಾಗ ಧೈರ್ಯಗೇಡಿ ಎಂಬುದು ಸಾಬೀತಾಗಿದೆ. ಈ ಶರಣಾಗತಿಗೆ ಸೋಲೊಪ್ಪುವಿಕೆಗೆ ಭಾರತ ಮುಂದೆ ಭಾರಿ ಬೆಲೆಯನ್ನು ತೆರಬೇಕಾಗುತ್ತದೆ. ●

ಜನಶಕ್ತಿ ಫೇಸ್ ಬುಕ್ ಪುಟ: ಮತ್ತೊಂದು ಮೈಲಿಗಲ್ಲು ಪೇಜ್ ಫಾಲೋವರ್ಸ್ 11 ಸಾವಿರ+, ವೈರಲ್ ವಿಡಿಯೊ 4+ ಲಕ್ಷ ವ್ಯೂ

ಜನಶಕ್ತಿ ಮೀಡಿಯಾ ಫೇಸ್ ಬುಕ್ ಪುಟದಲ್ಲಿ ನಿರಂತರ ಸುದ್ದಿ ಆರಂಭವಾದ ನಂತರ reach ಪೇಜ್ ಲೈಕುಗಳು, ಹಾಗೂ ಚಕ್ರವರ್ತಿ ಸೂಲಿಬೆಲೆಗೆ, ಇತಿಹಾಸ ಕ್ಲಾಸು ತೆಗೆದುಕೊಂಡ ವೈರಲ್ ಆದ ವಿಡಿಯೋ ಬಗ್ಗೆ ಕಳೆದ ವಾರ ಬರೆದಿದ್ದೆವು. ಈ ಟ್ರೆಂಡ್ ಮುಂದುವರೆಯುತ್ತಿರುವುದು ಕಂಡು ಬಂದಿದೆ. ಸಾಮಾನ್ಯವಾಗಿ ವೈರಲ್ ಆದ ವಿಡಿಯೋ ವ್ಯೂಗಳು ಮೊದಲ ಕೆಲವು ದಿನಗಳ ನಂತರ ಕಡಿಮೆ ಯಾಗಿ ನಿಂತು ಹೋಗುತ್ತವೆ. ಆದರೆ ಈ ವಿಡಿಯೋ ಮೊದಲ ವಾರದಲ್ಲಿ (ಅಕ್ಟೋಬರ್ 5 ರಾತ್ರಿ 10ಗಂಟೆ ಹೊತ್ತಿಗೆ) 2.33 ಲಕ್ಷಕ್ಕೂ ಹೆಚ್ಚು ಜನ ನೋಡಿದ್ದರೆ, ಎರಡನೇ ವಾರದಲ್ಲಿ (ಅಕ್ಟೋಬರ್ 12 ರಾತ್ರಿ 6.30 ಗಂಟೆ ಹೊತ್ತಿಗೆ) 4.17 ಲಕ್ಷ (ಅಂದರೆ ಇನ್ನೂ ಸುಮಾರು 2 ಲಕ್ಷ) ಜನ ನೋಡಿದ್ದಾರೆ. ಶೇರ್ ಮಾಡಿದವರ ಸಂಖ್ಯೆ 3661 ರಿಂದ 5905ಕ್ಕೆ ಏರಿದೆ.

ಕಳೆದ ವಾರ ಪೇಜ್ ಲೈಕುಗಳ ಸಂಖ್ಯೆ 8 ಸಾವಿರ ದಾಟಿದ್ದರೆ, ಪೇಜ್ ಫಾಲೋವರ್ಸ್ ಸಂಖ್ಯೆ ಕಳೆದ ಶನಿವಾರವೇ 10 ಸಾವಿರ ದಾಟಿತ್ತು. ಈಗ (ಅಕ್ಟೋಬರ್ 12 ರಾತ್ರಿ 6.30 ಗಂಟೆ ಹೊತ್ತಿಗೆ) ಪೇಜ್ ಫಾಲೋವರ್ಸ್ ಸಂಖ್ಯೆ 11,289 ಆಗಿದೆ. ಇದು ಜನಶಕ್ತಿ ಮೀಡಿಯಾ ಫೇಸ್ ಬುಕ್ ಪುಟದ ಇನ್ನೊಂದು ಮೈಲಿಗಲ್ಲು. ಹಿಂದೆ ಪೇಜ್ ಲೈಕುಗಳು ಮತ್ತು ಫಾಲೋವರ್ಸ್ ನಡುವೆ ಹೆಚ್ಚಿನ ವ್ಯತ್ಯಾಸವಿರುತ್ತಿರಲಿಲ್ಲ.

ಮುಂದಿನ ದಿನಗಳಲ್ಲಿ ವಿಭಿನ್ನ, ವಿಶಿಷ್ಟ ರೀತಿಯ ಪ್ರಯೋಗಗಳೊಂದಿಗೆ ಜನಶಕ್ತಿ ಮೀಡಿಯಾ ನಿಮ್ಮ ಮುಂದೆ ಬರಲಿದೆ. ನಿರೀಕ್ಷಿಸಿ. ನೀವು ನಿರಂತರ ಸುದ್ದಿಗಾಗಿ ಜನಶಕ್ತಿ ಮೀಡಿಯಾ ಫೇಸ್ ಬುಕ್ ಪುಟ ನೋಡುತ್ತಿರಿ ಮತ್ತು ವಾರದ ಸುದ್ದಿ ವಿಶ್ಲೇಷಣೆಗಾಗಿ ವಾರಪತ್ರಿಕೆ ಓದುತ್ತಿರಿ. ನಿಮ್ಮ ಸ್ನೇಹಿತರನ್ನು ಹಾಗೆ ಮಾಡಲು ಆಹ್ವಾನಿಸಿ.

ಬಿ.ಎಸ್.ಎನ್.ಎಲ್. ಗುತ್ತಿಗೆ ಕಾರ್ಮಿಕರ ಧರಣಿ



ಬಿ.ಎಸ್.ಎನ್.ಎಲ್. ಗುತ್ತಿಗೆ ಕಾರ್ಮಿಕರು ಬಾಕಿ ವೇತನ ಹಾಗೂ ಕಾನೂನುಬದ್ದ ಸೌಲಭ್ಯಗಳನ್ನು ಜಾರಿಗೊಳಿಸಲು ಆಗ್ರಹಿಸಿ ಬೆಂಗಳೂರಿನ ರಾಜಭವನ ರಸ್ತೆಯಲ್ಲಿರುವ BGTD PGM ಕಚೇರಿ ಮುಂಭಾಗ ಆರಂಭಗೊಂಡ ಧರಣಿಯನ್ನು BSNL employees union ಜಿಲ್ಲಾ ಪ್ರಧಾನ ಕಾರ್ಯದರ್ಶಿ ಹೆಚ್.ವಿ.ಸುದರ್ಶನ್ ಉದ್ಘಾಟಿಸಿದರು.

ಪ್ರತಿಭಟನೆಯನ್ನು ಉದ್ದೇಶಿಸಿ BSNLEU ವಲಯ ಕಾರ್ಯದರ್ಶಿ ಸಿ.ಕೆ.ಗುಂಡಣ್ಣ, ರಾಜ್ಯ ಪ್ರಧಾನ ಕಾರ್ಯದರ್ಶಿ ಕೆ.ಮಹಾಂತೇಶ, ಆರೀಫ್ ಅಬ್ದುಲ್ಲಾ ಜಿಲ್ಲಾ ಸಂಘಟನಾ ಕಾರ್ಯದರ್ಶಿ ಮಾತನಾಡಿದರು.

ಮಧ್ಯಾಹ್ನ GM finance ಶ್ರೀ ಕೃಷ್ಣಪ್ಪ ಮತ್ತು PGM ಶ್ರೀ ಜನಾರ್ಧನರಾವ್ ಅವರೊಂದಿಗೆ ನಿಯೋಗ ಸುಮಾರು ಒಂದೂವರೆ ಗಂಟೆಗಳ ಕಾಲ ವೇತನ ಪಾವತಿಗೆ ಇರುವ ತೊಡಕುಗಳ ನಿವಾರಣೆ ಮಾತುಕತೆ ನಡೆಸಿತು. ಅಂತಿಮವಾಗಿ ಬಾಕಿ ಇರುವ ಬಿಲ್ ಗಳ ಬಿಡುಗಡೆಗೆ ಕ್ರಮವಹಿಸಿ ಗುತ್ತಿಗೆದಾರರಿಗೆ ಹಣ ಬಿಡುಗಡೆ ಮಾಡಿಸಲಾಯಿತು. ಇದರಿಂದ ಕಾರ್ಮಿಕರಿಗೆ ನಾಳೆ ಸಂಬಳ ಸಿಗುವುದು ಗ್ಯಾರಂಟಿಯಾದ ಬಳಿಕ ಕಾರ್ಮಿಕರ ಸಭೆಯನ್ನು ನಡೆಸಿ ಹೋರಾಟವನ್ನು ಹಿಂಪಡೆಯಲಾಯಿತು.

ಹಾಸನಾಂಬ 'ಪವಾಡ' ತನಿಖೆಗೆ ಸಮಿತಿ

ಹಾಸನದ ಹಾಸನಾಂಬ ದೇವಸ್ಥಾನದಲ್ಲಿ ನಡೆಯುತ್ತದೆ ಎನ್ನಲಾದ ಪವಾಡಗಳ (ಒಂದು ವರ್ಷದ ಹಿಂದೆ ಹೊತ್ತಿಸಿಟ್ಟ ದೀಪ ಉರಿಯುತ್ತಿರುತ್ತದೆ, ಎಡೆ ಇಟ್ಟ ಅನ್ನ ಹಳಸಿರುವುದಿಲ್ಲ, ಹೂವು ಬಾಡಿರುವುದಿಲ್ಲ) ಸತ್ಯಾಸತ್ಯತೆಯನ್ನು ಕುರಿತು ಹಾಸನದಲ್ಲಿ **BGVS** ನೇತೃತ್ವದಲ್ಲಿ ದುಂಡು ಮೇಜಿನ ಸಭೆ ನಡೆಯಿತು. ಸಭೆಯಲ್ಲಿ ಭಾಗವಹಿಸಿದವರೆಲ್ಲ ಇದೊಂದು ಸರ್ಕಾರದ ಸುಪರ್ದಿಯಲ್ಲಿರುವ ಮುಜರಾಯಿ ದೇವಸ್ಥಾನ ಈ ದೇವಸ್ಥಾನದಲ್ಲಿ ಪವಾಡ ನಡೆಯುತ್ತದೆ ಎಂದು ಜಿಲ್ಲಾಡಳಿತವೇ ಮೌಢ್ಯವನ್ನು ಬಿತ್ತುತ್ತಿರುವುದು ಸಂವಿಧಾನದ ಆಶಯಗಳಿಗೆ ವಿರುದ್ಧವಾಗಿದೆ. ಆದ್ದರಿಂದ ಕೂಡಲೇ ಜಿಲ್ಲಾಡಳಿತವು ಈ ಪವಾಡಗಳ ಸತ್ಯಾಸತ್ಯತೆಯನ್ನ ಜನರಿಗೆ ಬಹಿರಂಗಪಡಿಸಬೇಕೆಂದು ಒತ್ತಾಯಿಸಲಾಯಿತು. ಈ ವಿಚಾರದ ಕುರಿತು ಸಭೆಯ ಅಭಿಪ್ರಾಯಗಳನ್ನು ಮನವಿಯ ಮೂಲಕ ಜಿಲ್ಲಾಡಳಿತಕ್ಕೆ ಸಲ್ಲಿಸಲು ಎಲ್ಲ ಪ್ರಗತಿಪರ ಸಂಘಟನೆಗಳನ್ನೊಳಗೊಂಡ ಸತ್ಯಶೋಧನಾ ಸಮಿತಿಯೊಂದನ್ನು ರಚಿಸಲಾಯಿತು.

ಸಂಗಾತಿ ವಿ.ಎನ್. ಸುಬ್ರಮಣಿ ಲಾಲ್ ಸಲಾಂ'!



ಬೆಂಗಳೂರಿನ ಭಾರತ ಇಲೆಕ್ಟ್ರಾನಿಕ್ಸ್ (ಬಿ.ಇ.ಎಲ್.) ಕಾರ್ಖಾನೆಯ ಕಾರ್ಮಿಕರಲ್ಲಿ ಕಮ್ಯುನಿಸ್ಟ್ ಚಳುವಳಿ ಕಟ್ಟುವುದರಲ್ಲಿ ಪ್ರಮುಖ ಪಾತ್ರ ವಹಿಸಿದ ಹಿರಿಯ ಕಮ್ಯುನಿಸ್ಟ್ ಸಂಗಾತಿ ವಿ.ಎನ್. ಸುಬ್ರಮಣಿ ತಮ್ಮ 83 ವರ್ಷದ ತುಂಬು ಜೀವನದ ನಂತರ, ಇಂದು ಬೆಂಗಳೂರಿನ ಸ್ವಗೃಹದಲ್ಲಿ ನಿಧನರಾಗಿದ್ದಾರೆ.

1959 ರಲ್ಲಿ ಕೇರಳದ ಮೊದಲ ಕಮ್ಯುನಿಸ್ಟ್ ಸರಕಾರ ಉರುಳಿಸಲು ಬಲಪಂಥೀಯ ಶಕ್ತಿಗಳು ನಡೆಸಿದ "ವಿಮೋಚನ ಸಮರಂ" ಎಂದು ಕರೆಯಲಾಗುವ ಗಲಭೆಗಳ ವಿರುದ್ಧ ನಿಂತ ವಿದ್ಯಾರ್ಥಿ ಗುಂಪಿನ ಮೂಲಕ ಕಮ್ಯುನಿಸ್ಟ್ ಚಳುವಳಿಗೆ ಆಕರ್ಷಿತರಾದ ವಿ.ಎನ್.ಎಸ್. ಮುಂದೆ ಬೆಂಗಳೂರಿಗೆ ಬಂದು ಭಾರತ ಇಲೆಕ್ಟ್ರಾನಿಕ್ಸ್ ಕಾರ್ಖಾನೆಯಲ್ಲಿ ಕಾರ್ಮಿಕರಾಗಿ 1960ರ ದಶಕದ ಆರಂಭದಲ್ಲೇ ಸೇರಿಕೊಂಡರು.

ಜೇಕಬ್ ಅಬ್ರಹಾಂ ಜತೆ ಬಿ.ಇ.ಎಲ್.ನಲ್ಲಿ ಕಮ್ಯುನಿಸ್ಟ್ ಗುಂಪು ಕಟ್ಟುವುದರಲ್ಲಿ ಅವರು ಪ್ರಮುಖ ಪಾತ್ರ ವಹಿಸಿದರು. ಕಮ್ಯುನಿಸ್ಟ್ ಚಳುವಳಿ (ಅದರಲ್ಲೂ ಸಿಪಿಐ–ಎಂ) ಕೇಂದ್ರೀಯ ಸಾರ್ವಜನಿಕ ಉದ್ಯಮಗಳ ಕಾರ್ಮಿಕರಲ್ಲಿ ಅತ್ಯಂತ ಪ್ರಬಲವಾಗಿದ್ದದ್ದು ಬಿ.ಇ.ಎಲ್.ನಲ್ಲೇ. ಅದರಲ್ಲಿ ಅವರ ಪಾತ್ರ ದೊಡ್ಡದು. ಸಿಪಿಐ(ಎಂ) ನ ಹಿರಿಯ ನಾಯಕ ಕಾ. ವಿ. ಜೆ. ಕೆ. ನಾಯರ್ ಈ ಗುಂಪಿನ ಒಂದು ಪ್ರಮುಖ ಕೊಡುಗೆ.

1964 ರಿಂದಲೇ ಸಿಪಿಐ(ಎಂ) ಜತೆಗೆ ಕೆಲಸ ಮಾಡಿದ ವಿ.ಎನ್.ಎಸ್. ಕೊನೆಯವರೆಗೂ ಸಿಪಿಐ(ಎಂ) ಸದಸ್ಯರಾಗಿ ಸಕ್ರಿಯವಾಗಿದ್ದರು. ಅವರು ಸಾಂಸ್ಕೃತಿಕ ಮತ್ತು ಶೈಕ್ಷಣಿಕ ಕೆಲಸಗಳಲ್ಲಿ ಹೆಚ್ಚಾಗಿ ತೊಡಗಿಸಿಕೊಂಡಿದ್ದು ಅದರಲ್ಲಿ ಅವರ ಕೊಡುಗೆ ಅಪಾರ. ಅವರು ತಮ್ಮ ದೇಹ–ದಾನ ಮಾಡಿದ್ದು, ಇಂದು ಮಧ್ಯಾಹ್ನ ಅವರ ದೇಹವನ್ನು ಎಂ.ಎಸ್. ರಾಮಯ್ಯ ಆಸ್ಪತ್ರೆಗೆ ಕೊಡಲಾಯಿತು. ಅವರ ಮನೆಯ ಎದುರು ಒಂದು ಸಂತಾಪ ಸೂಚಕ ಸಭೆ ನಡೆಯಿತು.

ಕೇಳಿಸಿದ್ದು

ಯಾದವ ದೊರೆ 'ಮಹಿಷಾಸುರ' ರಾಕ್ಷಸನಲ್ಲ; ರಕ್ಷಕ..!

ಮಹಿಷ ಎಮ್ಮೆಗಳ ರಾಜ. ಮೈಸೂರು ಭಾಗದ ಪ್ರಮುಖ ಯಾದವ ದೊರೆ. ಯಾದವರಿಗೆ ಎಮ್ಮೆಗಳನ್ನು ಮೇಯಿಸಲು ಬೇಕಿದ್ದದ್ದು ಅಪಾರವಾದ ಅರಣ್ಯ. ಅದು ಮೈಸೂರು ಭಾಗದಲ್ಲಿ ಅಪಾರ ಪ್ರಮಾಣದಲ್ಲಿತ್ತು. ಆದರೆ, ಉತ್ತರ ಭಾರತದ ಕಡೆಯಿಂದ ಬಂದ ಆರ್ಯರು ಕೃಷಿಕರನ್ನು ಜತೆ ಸೇರಿಸಿಕೊಂಡು ಕೃಷಿ ಮಾಡಲು ಬಯಲು ಹುಡುಕುತ್ತಿದ್ದರು. ಅದು ಸಾಲದಾದಾಗ ಅರಣ್ಯವನ್ನು ಕಡಿದು, ಬೆಂಕಿ ಹಾಕಿ ನಾಶ ಮಾಡಿ ಬಯಲಾಗಿ ಪರಿವರ್ತಿಸಲು ಪ್ರಯತ್ನಿಸಿದರು. ಅದನ್ನು ವಿರೋಧಿಸಿದ ಮಹಿಷ ತನ್ನ ನಾಡನ್ನು ಉಳಿಸಿಕೊಳ್ಳಲು ಪ್ರಯತ್ನಿಸಿದನು. ತಮ್ಮ ತಂತ್ರಗಾರಿಕೆಗೆ ವಿರೋಧ ತೋರಿದ ಮಹಿಷನನ್ನು ಆರ್ಯರು ರಾಕ್ಷಸನಂತೆ ಚಿತ್ರಿಸಿದರು.

ಈ ಭಾಗದ ಅತಿ ಸಾಮಾನ್ಯ ನಾಯಕಿಯಾಗಿದ್ದ ಚಾಮುಂಡಿಯನ್ನು ಮಹಿಷನ ವಿರುದ್ಧ ಆರ್ಯರು ಎತ್ತಿಕಟ್ಟಿದರು. ಅವಳಿಗೆ ಬೆಂಬಲಿಸಿ ಮಹಿಷನನ್ನು ಕುತಂತ್ರದಿಂದ ಕೊಂದರು. ಆ ನಂತರವೇ ಚಾಮುಂಡಿಯನ್ನು ದೇವತೆಯೆಂದೂ ಈ ಬೆಟ್ಟವನ್ನು ಚಾಮುಂಡಿ ಬೆಟ್ಟವೆಂದೂ ಹೆಸರಿಟ್ಟರು. ಅಲ್ಲಿಯವರೆಗೂ ಮಹಾಬಲಗಿರಿಯಾಗಿದ್ದ ಬೆಟ್ಟವು ಚಾಮುಂಡಿ ಬೆಟ್ಟವಾಯಿತು. ದೊರೆಯಾಗಿದ್ದ ಮಹಿಷನು ಮಹಿಷಾಸುರನಾದನು. ನಾಡನ್ನಾಳಿದ ಮಹಿಷ ಇಲ್ಲಿ ಬಿಸಿಲಿನಲ್ಲಿ ನಿಲ್ಲುವ ಅಗತ್ಯವಿರಲಿಲ್ಲ. ಆರ್ಯರ ತಂತ್ರ, ಜಾತಿ ಪದ್ಧತಿ, ಶೋಷಣೆಗಳಿಗೆ ಯಾರು ವಿರೋಧಿಸಿದರೂ ಅವರೆಲ್ಲ ಊರ ಆಚೆಗೆ ತಳ್ಳಲ್ಪಟ್ಟರು. ಹಾಗಾಗಿಯೇ ಹೊಲೆ–ಮಾದಿಗರು ಊರಿನ ಆಚೆಯೂ ಶೋಷಣೆಯನ್ನು ಒಪ್ಪಿಕೊಂಡ ಮೇಲ್ಜಾತಿಯವರು ಊರಿನ ಒಳಗೂ ವಾಸ ಮಾಡಿದರು.

ಅಶೋಕನ ಕಾಲದ ಶಾಸನಗಳಲ್ಲಿ ಮಹಿಷನ ಉಲ್ಲೇಖವಿದೆ. ಅಂದಿನ ಕಾಲದ ಶಾಸನಗಳಲ್ಲಿ ದಕ್ಷಿಣ ಭಾರತದ ಬೇರಾವ ರಾಜರ ಉಲ್ಲೇಖವೂ ಹೆಚ್ಚಾಗಿ ಇಲ್ಲದೇ ಇರುವುದೇ ಮಹಿಷನ ಶ್ರೇಷ್ಠತೆಗೆ ಹಿಡಿದ ಕನ್ನಡಿಯಾಗಿದೆ. ಇದನ್ನು ಅರ್ಥಮಾಡಿಕೊಂಡವರಿಗೆ ಮಹಿಷ ಇಲ್ಲಿನ ಬಹುಮುಖ್ಯ ಸ್ಥಳೀಯರ ದೊರೆಯಾಗಿದ್ದ ಎನ್ನುವುದು ಅರ್ಥವಾಗುತ್ತದೆ. ದಕ್ಷಿಣ ಪ್ರಾಂತ್ಯವನ್ನಾಳಿದ ಗಂಗರು, ಚೋಳರು, ಹೊಯ್ಸಳರ ಕಾಲಘಟ್ಟಗಳಲ್ಲಾಗಲಿ ಅಥವಾ ಅವರ ಹಿಂದಿನ ಕಾಲಘಟ್ಟಗಳಲ್ಲಾಗಲಿ ಚಾಮುಂಡಿ ಮತ್ತು ಮಹಿಷನ ನಡುವೆ ಯುದ್ಧವಾಗಿರುವ ಪ್ರಸಂಗವೇ ಉಲ್ಲೇಖವಾಗಿಲ್ಲ.

ಅಂದಿನ ರಾಜಮನೆತನಗಳಿಗೆ ಯುದ್ಧದ ಕತೆ ತಿಳಿದಿದ್ದರೆ ಬಹುಶ: ಶಾಸನಗಳಲ್ಲಿ ಬರೆಸುತ್ತಿದ್ದರೇನೊ? ಎಂದೆನಿಸುತ್ತದೆ. ಅಂತಹ ಯಾವುದೇ ಶಾಸನಗಳು ಚಾಮುಂಡಿ ಬೆಟ್ಟದಲ್ಲಿ ಇದುವರೆವಿಗೂ ಪ್ರಾಚ್ಯವಸ್ತು ಸಂಶೋಧಕರ ಹುಡುಕಾಟಕ್ಕೆ ಸಿಕ್ಕಿರುವುದಿಲ್ಲ ಎಂದು ಲೇಖಕ ಅಶೋಕಪುರಂ ಸಿದ್ಧಸ್ವಾಮಿ ಅವರ ಕೃತಿಗಳಲ್ಲಿ ವಿವರಿಸಿದ್ದಾರೆ. ಹಾಗಾದರೆ ಇಲ್ಲಿ ರಾಜ ಮಹಿಷಾಸುರನಿಗು ಮತ್ತು ಚಾಮುಂಡೇಶ್ವರಿ ನಡುವೆಯೂ ಯುದ್ಧವೇ ನಡೆದಿಲ್ಲವೇ ಎಂಬ ಪ್ರಶ್ನೆ ಕೆಲವರಿಗೆ ಎದುರಾಗಬಹುದು. ಕುತೂಹಲವೆಂದರೆ ದಾಖಲಾತಿಗಳ ಪ್ರಕಾರ ಮಹಿಷಾಸುರನ ಆಡಳಿತ ಅವಧಿಯೇ ಬೇರೆ. ಚಾಮುಂಡೇಶ್ವರಿ ನಾಡದೇವತೆಯಾದ ಕಥೆಯ ಕಾಲಘಟ್ಟವೇ ಬೇರೆ ಎಂಬುದು ಇತಿಹಾಸಕಾರರ ವಿಶ್ಲೇಷಣೆಯಾಗಿದೆ.

ಮೈಸೂರಿಗೆ ಮೂಲ ಹೆಸರು ಬಂದಿರುವುದೇ ಮಹಿಷಾಸುರನಿಂದ. ಪ್ರಾಚೀನ ಕಾಲದಲ್ಲಿ ಮಹಿಸೂರನ್ನು ಮಹಿಷಾ ಮಂಡಲ, ಮಹಿಸೂರ ನಾಡು, ಮಹಿಷಾಪುರ ಎಂಬ ಹೆಸರುಗಳಿದ್ದವು. ಮಹಾಭಾರತ ಗ್ರಂಥದಲ್ಲಿ ಮಹಿಷಾ ಮಂಡಲದ ಪ್ರಸ್ತಾಪವಿದೆ. ಬೌದ್ಧ ಸಾಹಿತ್ಯಗಳಲ್ಲಿ ಮಹಿಷಾ ಮಂಡಲಕ್ಕೆ ವಿಶೇಷ ಸ್ಥಾನಮಾನವಿತ್ತೆಂಬುದು ದೃಢೀಕರಿಸುತ್ತದೆ. 8ನೇ ಶತಮಾನದ ಗಂಗರ ಕಾಲದಲ್ಲಿ ಮಹಾಬಲೇಶ್ವರ ದೇವಾಲಯವನ್ನು ಇಂದಿನ ಚಾಮುಂಡಿ ಬೆಟ್ಟದಲ್ಲಿ ಪುನರ್ ನಿರ್ಮಾಣಗೊಳಿಸಲಾಯಿತು. ನಂತರದ ವಿಷ್ಣುವರ್ಧನ ಕಾಲದ 1128ರ ಶಿಲಾ ಶಾಸನಗಳಲ್ಲಿ ಚಾಮುಂಡಿ ಬೆಟ್ಟವನ್ನು "ಸ್ವಸ್ತ ಶ್ರೀ ಮಹಾಬಲ ತೀರ್ಥ" ಎಂದು ಕೆತ್ತಲಾಗಿದೆ.

12ನೇ ಶತಮಾನದ ಜಗಜ್ಯೋತಿ ಬಸವಣ್ಣನವರ ಕಾಲಘಟ್ಟದಲ್ಲಿಯೂ ಈ ಬೆಟ್ಟವನ್ನು ಮಹಾಬಲಗಿರಿ ಎಂದೇ ಪ್ರಖ್ಯಾತವಾಗಿತ್ತು. ಅಷ್ಟೇ ಯಾಕೆ? ಕ್ರಿ.ಶ. 1399ರಲ್ಲಿ ಪ್ರಾರಂಭವಾದ ಯಧುವಂಶದ ಯದುಕೃಷ್ಣ ಒಡೆಯರ್ ಕಾಲದಲ್ಲಿಯೂ ಮಹಾಬಲಗಿರಿ ಬೆಟ್ಟ ಎಂದೇ ಸಂಭೋಧಿಸುತ್ತಿದ್ದರು. ಈ ಎಲ್ಲಾ ಮೂಲಾಧಾರಗಳ ಅರಿವಿದ್ದ ದೊಡ್ಡ ದೇವರಾಜ ಒಡೆಯರ್ 1659 ರಲ್ಲಿ ಚಾಮುಂಡಿ ಬೆಟ್ಟದಲ್ಲಿ ರಾಜ ಮಹಿಷಾಸುರನ ಬೃಹತ್ ಪ್ರತಿಮೆಯನ್ನು ಸ್ಥಾಪಿಸಿದ್ದು ಇಂದು ಮೂಲನಿವಾಸಿಗಳು ಅವರನ್ನು ಸ್ಮರಿಸಬೇಕಿದೆ.

ಪ್ರಸ್ತುತದಲ್ಲಿ ಮಹಿಷಾ ಮಂಡಲದಲ್ಲಿ ನೆಲೆಸಿದ್ದ ಪ್ರಜೆಗಳೆಲ್ಲಾ ನಾಗವಂಶಕ್ಕೆ ಸೇರಿದವರು. ಇವರು ಮೂಲತಹ ಬೌದ್ಧರು ಎಂಬ ಚರ್ಚೆಗೆ ಗ್ರಾಸವಾಗಿದೆ. 1970 ರಲ್ಲಿ ಕರ್ನಾಟಕ ಸರ್ಕಾರಿ ಪ್ರಕಾಶನ ಮಂದಿರ (ನಿಯಮಿತ) ವತಿಯಿಂದ ಪ್ರಕಟವಾದ ಡಾ.ಎಂ.ವಿ.ಕೃಷ್ಣರಾವ್ ಮತ್ತು ಎಂ.ಎಂ.ಕೇಶವ ಭಟ್ಟರ ಕರ್ನಾಟಕದ ಇತಿಹಾಸ ದರ್ಶನ ಕೃತಿಯಲ್ಲಿ "ಮೌರ್ಯ ಸಾಮ್ರಾಜ್ಯದ ಚಕ್ರವರ್ತಿಯಾದ ಅಶೋಕನು ರಕ್ಕತ ಎಂಬ ಬೌದ್ಧ ಭಿಕ್ಕುವನ್ನು ಬನವಾಸಿಗೂ ಹಾಗೂ ಮಹಾದೇವ ಎಂಬ ಭಿಕ್ಕುವನ್ನು ಮಹಿಷಾ ಮಂಡಲಕ್ಕೂ(ಮೈಸೂರು) ಬೌದ್ಧ ಮತ ಪ್ರಚಾರಕ್ಕಾಗಿ ಕಳುಹಿಸಿಕೊಟ್ಟಿದ್ದಾನೆಂದು ಬೌದ್ಧ ಗ್ರಂಥಗಳು ತಿಳಿಸುತ್ತದೆ". ಎಂದು ದಾಖಲಿಸುತ್ತಾರೆ. ಇನ್ನು ಮುಂದುವರೆದು 1979 ರಲ್ಲಿ ಮೈಸೂರು ವಿವಿಯಲ್ಲಿ ಪ್ರಕಟವಾದ ಕನ್ನಡ ವಿಶ್ವಕೋಶ ಪುಟ ಸಂಖ್ಯೆ 34 ರಲ್ಲೂ ಸಹ ಮುಗ್ಗಲಿ ಪುತ್ರ ತಿಸ್ಸ ಎಂಬ ಬೌದ್ಧ ಮಹಾಸಭೆ ಅಧ್ಯಕ್ಷನೂ ತೇರಾ ಮಹಾದೇವನೆಂಬ ಬೌದ್ಧ ಭಿಕ್ಕನ್ನು ಮಹಿಷಾ ಮಂಡಲಕ್ಕೆ ಬಂದಿದ್ದನೆಂದು ಉಲ್ಲೇಖವಿದೆ".

ಇಷ್ಟೆಲ್ಲಾ ಐತಿಹಾಸಿಕ ದಾಖಲೆಗಳಿರುವ ಮಹಿಷಾ ಮಂಡಲದ ದೊರೆ ಮಹಿಷಾಸುರನನ್ನು ವೈದಿಕರು ನರಭಕ್ಷಕನಂತೆ ಬಿಂಬಿಸಿದ್ದು ಮಾತ್ರ ಯಾರು ತಳ್ಳಿ ಹಾಕುವಂತಿಲ್ಲ. ಇಂದು ಎಲ್ಲವೂ ಬದಲಾಗಿದೆ.

ಮಹಿಷಾಸುರ ರಾಕ್ಷಕನಾಗಿರಲಿಲ್ಲ. ಆತನೊಬ್ಬ ಸತ್ಯ, ಪ್ರೀತಿ, ಅಹಿಂಸೆ, ಸಮಾನತೆ ಮತ್ತು ಭ್ರಾತೃತ್ವದಲ್ಲಿ ನಂಬಿಕೆಯನ್ನಿಟ್ಟು ತನ್ನ ನಾಡು ಮತ್ತು ಪ್ರಜೆಗಳನ್ನು ಮಮತೆಯಿಂದ ಕಾಣುತಿದ್ದ ಮಾತೃ ಹೃದಯಿಯಾಗಿದ್ದನು ಎಂದು ಐತಿಹಾಸಿಕ ದಾಖಲೆಗಳು ಬಹಿರಂಗ ಪಡಿಸಿವೆ. ಮಹಿಷಾಸುರನು ಮಾತೃಪ್ರಧಾನ ಕುಟುಂಬ ವ್ಯವಸ್ಥೆಯಲ್ಲಿ ಅಪಾರವಾದ ಗೌರವವನ್ನಿಟ್ಟು ಪಿತೃಪಕ್ಷ (ಪೂರ್ವಿಕರ ನೆನೆಯುವ ದಿನ) ಎಂಬ ಆಚರಣೆಗೆ ಬುನಾದಿ ಹಾಕಿಕೊಟ್ಟಿದ್ದನು. ಅದನ್ನು ಪಾಲಿಸುತ್ತಿರುವ ಮೂಲನಿವಾಸಿಗಳು ಮೈಸೂರು ದಸರಾ ಪ್ರಾರಂಭವಾಗುವ ಮುನ್ನ ತಮಿಳುನಾಡು, ಕೇರಳ ಹಾಗೂ ಕರ್ನಾಟಕದ ಕೆಲ ಗ್ರಾಮೀಣ ಭಾಗಗಳಿಂದ ಬಂದು ಮಹಿಷಾಸುರನಿಗೆ ತಮ್ಮದೇ ರೀತಿಯ ಗೌರವ ಸಲ್ಲಿಸುತ್ತಿರುವುದು ಇಂದಿಗೂ ಜೀವಂತವಾಗಿದೆ.

ಸಾವಿರಾರು ವರ್ಷಗಳಿಂದ ಮಹಿಷಾ ಮಂಡಲದ ದೊರೆ ಮಹಿಷಾಸುರನನ್ನು ಮರೆತಿದ್ದ ಇಲ್ಲಿನ ಮೂಲನಿವಾಸಿಗಳು ಇಂದು ಮತ್ತೆ ಆತನನ್ನು ಸ್ಮರಿಸುತ್ತಿರುವುದು ಪ್ರಶಂಸನೀಯ. ಇವರ ಈ ಆಚರಣೆ ನಾಡದೇವತೆ ಚಾಮುಂಡೇಶ್ವರಿ ನಂಬಿರುವವರ ವಿರುದ್ಧವಾಗಲಿ ಅಥವಾ ಪರ್ಯಾಯ ದಸರಾವೆಂದು ಯಾರು ಭಾವಿಸಬೇಕಿಲ್ಲ. ಮಹಿಷಾ ದಸರಾದ ಮೂಲಕ ತಮ್ಮ ಮೂಲ ಸಂಸ್ಕತಿಯನ್ನು ಪುನರ್ ಆಚರಿಸುತ್ತಿರುವುದನ್ನು ಪ್ರಜಾಪ್ರಭುತ್ವದಲ್ಲಿ ಸಮಸ್ತ ನಾಡಿನ ಜನತೆ ಸಕಾರಾತ್ಮಕವಾಗಿ ಸ್ವೀಕರಿಸಿ ಗೌರವಿಸಬೇಕಿದೆ.

ಅಕ್ಟೋಬರ್ 07, 2018 (ನಿನ್ನೆ) ರಂದು ಮೈಸೂರಿನ ಮಹಿಷಾ ದಸರಾ ಅನುಷ್ಠಾನ ಸಮಿತಿ ಆಯೋಜಿಸುತ್ತಿರುವ ಮಹಿಷಾ ದಸರಾವನ್ನು ಮುಂದಿನ ದಿನಗಳಲ್ಲಿ ಸರ್ಕಾರವೇ "ಮಹಿಷಾ ಮಂಡಲ ಪ್ರಾಧಿಕಾರ" ವನ್ನು ರಚಿಸಿ ಸರ್ಕಾರದ ವತಿಯಿಂದಲೇ ಆಚರಿಸಿದರೆ ನಮ್ಮ ಮೂಲಸಂಸ್ಕೃತಿಯನ್ನು ಜಗತ್ತಿಗೆ ಸಾರಿದಂತಾಗುತ್ತದೆ.

–ಡಾ. ದಿಲೀಪ್ ನರಸಯ್ಯ ಎಂ
ಮಾಧ್ಯಮ ಸಂಶೋಧಕರು, ಮೈಸೂರು

ಅಚ್ಛೇ ದಿನ್ ಬಂದಿದೆ.....ಈಗ ಎಂಎಸ್‌ಪಿಯನ್ನೂ ತಂದಿದೆ !

ಅಕ್ಟೋಬರ್ 9 ರಂದು ಪ್ರಧಾನ ಮಂತ್ರಿಗಳು ಸಾರಿದ್ದಾರೆ.–ರೈತರಿಗೆ ಸ್ವಾಮಿನಾಥನ್ ಆಯೋಗದ ಶಿಫಾರಸಿನಂತೆ ಕನಿಷ್ಟ ಬೆಂಬಲ ಬೆಲೆ ನೀಡುವ ಆಶ್ವಾಸನೆಯನ್ನು ಈಡೇರಿಸಿಯೇ ಬಿಟ್ಟಿದ್ದೇವೆ. ಹೌದೇ, ನಮಗೆ ಗೊತ್ತೇ ಆಗಲಿಲ್ಲವಲ್ಲ ಎಂದು ರೈತರು ಹೇಳುತ್ತಿದ್ದಾರೆ.

ಕಳೆದ ವಾರ ಉತ್ತರ ಪ್ರದೇಶ, ಉತ್ತರಾಖಂಡದಿಂದ ಬಂದ ರೈತರ ಮೇಲೆ ಜಲಫಿರಂಗಿ, ಲಾಠಿ ಪ್ರಯೋಗದ ನಂತರ ಕೆಲವು ಹಿಂಗಾರು ಬೆಳೆಗಳಿಗೆ ಕನಿಷ್ಟ ಬೆಂಬಲ ಬೆಲೆ ಪ್ರಕಟಿಸಲಾಯಿತು. ಆದರೆ ಇವು ಸ್ವಾಮಿನಾಥನ್ ಆಯೋಗ ಶಿಫಾರಸು ಮಾಡಿರುವ ಸೂತ್ರದಂತೆ ಲೆಕ್ಕ ಹಾಕಿದ ಎಂಎಸ್‌ಪಿ ಅಲ್ಲ ಎಂದು ನೆನಪಿಸಿರುವ ರೈತರ ಸಂಘಟನೆಗಳು ರೈತಾಪಿ ಜನಗಳಿಗೆ ಮತ್ತೊಮ್ಮೆ ಮೋಸ ಮಾಡಲಾಗುತ್ತಿದೆ ಎಂದಿವೆ.

ಕೃಷಿ ವೆಚ್ಚಗಳು ಮತ್ತು ಬೆಲೆಗಳ ಆಯೋಗ (ಸಿಎಸಿಪಿ) 2018–19ರ ಸೀಜನ್ನಿನ ಕೃಷಿ ವೆಚ್ಚಗಳ ಲೆಕ್ಕಾಚಾರವನ್ನು ಇನ್ನೂ ಪ್ರಕಟಿಸಿಲ್ಲ. ಜುಲೈ ತಿಂಗಳಲ್ಲಿ ಪ್ರಕಟವಾಗಬೇಕಿದ್ದ 2019–20ರ ಹಿಂಗಾರು ಬೆಲೆ ಧೋರಣೆ ವರದಿ ಇನ್ನೂ ಬಂದಿಲ್ಲ. ಆದ್ದರಿಂದ ಸ್ವಾಮಿನಾಥನ್ ಆಯೋಗದ ಸೂತ್ರದಲ್ಲಿ ಕೃಷಿ ವೆಚ್ಚಗಳನ್ನು ಕಳೆದ ವರ್ಷಕ್ಕಿಂತ 6ಶೇ. ಹೆಚ್ಚಿಸಿ ಲೆಕ್ಕ ಹಾಕಿ ಸೂತ್ರದಂತೆ ಕೊಟ್ಟಿದ್ದೇವೆ ಎಂದು ಸರಕಾರ ಕೈ ತೊಳೆದುಕೊಂಡು ಆಶ್ವಾಸನೆ ಈಡೇರಿಸಿರುವುದಾಗಿ ಸಾರಿದೆ ಎನ್ನುತ್ತವೆ ರೈತ ಸಂಘಟನೆಗಳು. ಕಳೆದ ಒಂದು ವರ್ಷದಲ್ಲಿ ರಸಗೊಬ್ಬರ ಬೆಲೆಗಳಲ್ಲಿ 25% ಏರಿಕೆಯಾಗಿದೆ, ಡೀಸೆಲ್ ಬೆಲೆಗಳಲ್ಲಿ 27% ಏರಿಕೆಯಾಗಿದೆ. ಹೀಗಿರುವಾಗ ಒಟ್ಟು ಕೃಷಿ ವೆಚ್ಚದಲ್ಲಿ ಕೇವಲ 6% ಏರಿಕೆಯನ್ನು ಅಂದಾಜು ಮಾಡಿರುವುದು ಅರ್ಥಹೀನವಷ್ಟೇ ಅಲ್ಲ, ರೈತರಿಗೆ ಮಾಡುತ್ತಿರುವ ಮೋಸ ಎಂದು ರೈತ ಸಂಘಟನೆಗಳು ಆಕ್ರೋಶ ವ್ಯಕ್ತಪಡಿಸಿವೆ.



ಕೃಷಿ ವೆಚ್ಚಗಳನ್ನು ಸರಿಯಾಗಿ ಅಂದಾಜು ಮಾಡಿದ್ದರೆ, ಗೋದಿಯ ಬೆಂಬಲ ಬೆಲೆ 2072.4 ರೂ. ಕ್ವಿಂಟಾಲಿಗೆ ಆಗಬೇಕಿತ್ತು. ಆದರೆ ಸರಕಾರ ಘೋಷಿಸಿರುವುದು 1840 ರೂ. ಬಾರ್ಲಿಗೆ 1963.50ರೂ. ಆಗಬೇಕಿತ್ತು, ಘೋಷಿಸಿರುವುದು 1440 ರೂ., ಕ್ವಿಂಟಾಲಿಗೆ. ಇತರ ಎಲ್ಲ ಬೆಳೆಗಳಲ್ಲೂ ಇದೇ ಕತೆ ಎಂದು ಅಖಿಲ ಭಾರತ ಕಿಸಾನ್ ಸಭಾ ಹೇಳಿದೆ. ಸರಕಾರ ಲೆಕ್ಕ ಹಾಕಿರುವ ಕೃಷಿ ವೆಚ್ಚ ಆಯೋಗ ಶಿಫಾರಸು ಮಾಡಿರುವ ಸಿ2+50% ಸೂತ್ರದಲ್ಲಿನ ವೆಚ್ಚಕ್ಕಿಂತ ಅಂದಾಜು 22 ರಿಂದ 37% ದಷ್ಟು ಕಡಿಮೆಯಿದೆ ಎಂದು ಅದು ಹೇಳಿದೆ.

ಸ್ವತಃ ಡಾ, ಸ್ವಾಮಿನಾಥನ್ ರವರು ತಾನು ಶಿಫಾರಸು ಮಾಡಿರುವುದು ಸಿ2+50% ಸೂತ್ರವನ್ನು ಎಂದಿದ್ದರು, ಅಲ್ಲದೇ ಎಂಎಸ್‌ಪಿ ಘೋಷಿಸುವಷ್ಟೇ ಮುಖ್ಯವಾದದ್ದು ರೈತರಿಂದ ಖರೀದಿಗೆ ವ್ಯವಸ್ಥೆ ಏರ್ಪಡಿಸುವುದು ಎಂದಿದ್ದರು. ಈ ಎರಡರಲ್ಲೂ ಸರಕಾರ ರೈತರಿಗೆ ಮೋಸ ಮಾಡುತ್ತಿದೆ ಎನ್ನುತ್ತಾರೆ ಪರಿಣಿತರು. ಉದಾ: 2018ರಲ್ಲಿ ಸರಕಾರ ಖರೀದಿಸಿರುವ ಗೋದಿಯ ಪ್ರಮಾಣ 12.4% ಮಾತ್ರ. ಅಂದರೆ ಉಳಿದವನ್ನೆಲ್ಲ ಕನಿಷ್ಟ ಬೆಂಬಲ ಬೆಲೆಗಿಂತ ಕಡಿಮೆ ದರದಲ್ಲಿ ರೈತರು ಮಾರಬೇಕಾಗಿ ಬಂದಿತ್ತು.

ಆದರೂ ಎಂಎಸ್‌ಪಿ ಆಶ್ವಾಸನೆಯನ್ನು ಈಡೇರಿಸಿದ್ದೇವೆ ಎಂದು ಸಾರಲು ನಿಜವಾಗಿಯೂ 56ಅಂಗುಲ ಎದೆಯೇ ಬೇಕು! ಏನ್ಮಾಡೋಣ! ಚುನಾವಣಾ ಸೀಝನ್ ಮತ್ತೆ ಆರಂಭವಾಗಿರುವುದರಿಂದ ಜುಮ್ಲಾಗಳ ಸರಣಿಯೂ ಮತ್ತೆ ಆರಂಭವಾಗಬೇಕಲ್ಲವೇ?

ಎಂಎಸ್‌ಪಿ ಆಶ್ವಾಸನೆ ಈಡೇರಿದೆ ಎಂದು ಸಾರುವ ಮೂರು ದಿನಗಳ ಮೊದಲು ರಾಜಸ್ಥಾನದ ಅಜ್ಮೇರ್‌ನಲ್ಲಿ 'ವಿಜಯ ಸಂಕಲ್ಪ ಸಭಾ'ದಲ್ಲಿ ಅಲ್ಲಿನ ಚುನಾವಣೆಗೆ ಹೊರಟಿರುವ ಮುಖ್ಯಮಂತ್ರಿಗಳು ರೈತರಿಗೆ ಹಲವು 'ಬಕ್ಷೀಸು'ಗಳನ್ನು ಘೋಷಿಸಿದರು., ಇದು ರೈತರ ಆದಾಯವನ್ನು ದ್ವಿಗುಣಗೊಳಿಸುವ ಪ್ರಧಾನ ಮಂತ್ರಿಗಳ ಆಶ್ವಾಸನೆಯ ಈಡೇರಿಕೆಗಾಗಿ ಎಂದು ಅವರು ಹೇಳಿದರು.

ಆದಿನ 12.30ಕ್ಕೆ ಚುನಾವಣಾ ಆಯೋಗ ರಾಜಸ್ಥಾನ ಸೇರಿದಂತೆ ಐದು ರಾಜ್ಯಗಳ ವಿಧಾನಸಭಾ ಚುನಾವಣೆಗಳ ವೇಳಾಪಟ್ಟಿಯನ್ನು ಪ್ರಕಟಿಸುವುದಾಗಿ ತಿಳಿಸಲಾಗಿತ್ತು. ಆದರೆ ಅದನ್ನು ಅಪರಾಹ್ನ 3 ಗಂಟೆಗೆ ಮುಂದೂಡಲಾಯಿತು. ಇದಕ್ಕೆ ಒಂದು ಗಂಟೆ ಮೊದಲು, ಅಂದರೆ 2 ಗಂಟೆ ಸುಮಾರಿಗೆ ಪ್ರಧಾನ ಮಂತ್ರಿಗಳ ಸಮ್ಮುಖ ಮುಖ್ಯಮಂತ್ರಿಗಳು ಈ ಬಕ್ಷೀಸುಗಳನ್ನು ಘೋಷಿಸಿದರು.

ಇದಾದ ನಾಲ್ಕು ದಿನಗಳ ನಂತರ, ಪ್ರಧಾನಿಗಳ ಆಶ್ವಾಸನೆ ಈಡೇರಿಕೆಯ ಘೋಷಣೆಯ ಮರುದಿನ ಕೇಂದ್ರ ಸಾರಿಗೆ ಮಂತ್ರಿ ಈ 'ಆಶ್ವಾಸನೆ'ಗಳ ನಿಜರೂಪವನ್ನು ತಮ್ಮ ಪಕ್ಷದ ಹಾಲಿ ಅಧ್ಯಕ್ಷರಂತೆ ತಾವೇ ಬಯಲಿಗೆ ತಂದ ಮತ್ತೊಂದು ಸುದ್ದಿ ಪ್ರಕಟವಾಯಿತು.


ಅವರು ಒಂದು ಮರಾಠಿ ಟಿವಿ ಚಾನೆಲ್‌ನ ಸಂದರ್ಶನದಲ್ಲಿ ಮಾತಾಡುತ್ತ "ನಾವೆಂದೂ ಅಧಿಕಾರಕ್ಕೆ ಬರುವುದಿಲ್ಲ ಎಂಬ ವಿಶ್ವಾಸ ನಮಗಿತ್ತು. ಆದ್ದರಿಂದ ಟೊಳ್ಳು ಆಶ್ವಾಸನೆಗಳನ್ನು ನೀಡಲು ನಮಗೆ ಸಲಹೆ ನೀಡಲಾಗಿತ್ತು" ಎಂದು ಹೇಳಿರುವುದಾಗಿ ಟಿಎನ್ಎನ್(ಅಕ್ಟೋಬರ್ 10) ಸುದ್ದಿ ಸಂಸ್ಥೆ ವರದಿ ಮಾಡಿದೆ.

ಈಗ ಮಂತ್ರಿವರ್ಯರು ಯಥಾಪ್ರಕಾರ ತನ್ನ ಮರಾಠಿ ಮಾತನ್ನು ತಿರುಚಲಾಗಿದೆ ಎಂದಿದ್ದಾರೆ. ತಾನು ಮಹಾರಾಷ್ಟ್ರದ ಮುಖ್ಯಮಂತ್ರಿಗಳ ಆಶ್ವಾಸನೆಯ ಸಂದರ್ಭದಲ್ಲಿ ತಮಾಷೆಯಾಗಿ ಆ ಮಾತು ಹೇಳಿದ್ದೆ, ಪ್ರಧಾನ ಮಂತ್ರಿಗಳ ಆಶ್ವಾಸನೆಗಳ ಬಗ್ಗೆ ಅಲ್ಲ, ಈಗ ಮಹಾರಾಷ್ಟ್ರದ ಮುಖ್ಯಮಂತ್ರಿಗಳೂ ತಮ್ಮ ಆಶ್ವಾಸನೆ ಈಡೇರಿಸಿದ್ದಾರೆ, ಪ್ರಧಾನ ಮಂತ್ರಿಗಳೂ ಈಡೇರಿಸಿದ್ದಾರೆ ಎಂದು ಅವರು 'ಸ್ಪಷ್ಟೀಕರಣ' ನೀಡಿದ್ದಾರೆ.

ಮೇಲೆ ಹೇಳಿದ ಎಂಎಸ್‌ಪಿ ಆಶ್ವಾಸನೆಯ 'ಈಡೇರಿಕೆ'ಯ ವಾಸ್ತವದ ಹಿನ್ನೆಲೆಯಲ್ಲಿ ಈ 'ಸ್ಪಷ್ಟೀಕರಣ' ಟೊಳ್ಳು ಆಶ್ವಾಸನೆಗಳ ಚಿತ್ರವನ್ನು ಸುಸ್ಪಷ್ಟಗೊಳಿಸಿದೆ ಎಂದು ಹೇಳಬಹುದಲ್ಲವೇ? 'ಸತ್ಯೋತ್ತರ'(ಪೋಸ್ಟ್‌ಟ್ರುತ್) ಎಂದರೆ ಇದೇ ಅಲ್ಲವೇ?

ಸುದ್ದಿ 1: ಗುಜರಾತಿನಲ್ಲಿ "ಸ್ಟಾಚ್ಯು ಆಫ್ ಯುನಿಟಿ' ಅಥವ 'ಐಕ್ಯತೆಯ ಪ್ರತಿಮೆ' ಎಂದು ಹೆಸರಿಸಿರುವ ಸರ್ದಾರ್ ವಲಭಬಾಯಿ ಪಟೇಲ್ ಅವರ 182 ಮೀಟರ್ ದಾಖಲೆ ಎತ್ತರದ ಪ್ರತಿಮೆ ಅಕ್ಟೋಬರ್ 31ರಂದು ಉದ್ಘಾಟನೆಗೆ ಸಿದ್ಧಗೊಳ್ಳುತ್ತಿದೆ.

ಸುದ್ದಿ 2: ಸಪ್ಟಂಬರ್ 28ರ ಘಟನೆಯ ನಂತರ ಉತ್ತರಪ್ರದೇಶ, ಬಿಹಾರ ಮತ್ತು ಮಧ್ಯಪ್ರದೇಶದ ವಲಸೆ ಕಾರ್ಮಿಕರ ಮೇಲೆ ಹಲ್ಲೆಗಳಿಂದಾಗಿ ಸುಮಾರು 60 ಸಾವಿರ ಮಂದಿ ತಮ್ಮ ಉದ್ಯೋಗಗಳನ್ನು ಬಿಟ್ಟು ಗುಜರಾತ್‌ನಿಂದ ಓಡಿ ಹೋಗಬೇಕಾಗಿ ಬಂದಿದೆ.




ವ್ಯಂಗ್ಯ ಚಿತ್ರ: ಮಂಜುಲ್, ಮಿಡ್ ಡೇ

ಅಚ್ಛೇ ದಿನ್ ವಿಶ್ವಾಸ ಕುಂದುತ್ತಿದೆಯೇ?

ರಿಝರ್ವ್ ಬ್ಯಾಂಕ್ ಮೂರು ತಿಂಗಳಿಗೊಮ್ಮೆ 'ಬಳಕೆದಾರ ವಿಶ್ವಾಸ ಸರ್ವೆ' ಎಂಬುದನ್ನು ದೇಶದ ಪ್ರಮುಖ 13 ನಗರಗಳಲ್ಲಿ ನಡೆಸುತ್ತದೆ. ಇದು ದೊಡ್ಡ ನಗರಗಳ ಜನರು ದೇಶದ ಆರ್ಥಿಕ ಪರಿಸ್ಥಿತಿಯ ಬಗ್ಗೆ ಏನು ಅಭಿಪ್ರಾಯ ಹೊಂದಿದ್ದಾರೆ ಎಂಬುದರ ಒಂದು ಇಣುಕು ನೋಟ ಎನ್ನಲಾಗಿದೆ.

ಸಪ್ಟಂಬರ್‌ನಲ್ಲಿ ಮಾಡಿದ ಸರ್ವೆಯ ಫಲಿತಾಂಶಗಳು ಈಗ ಪ್ರಕಟವಾಗಿವೆ. ಅದರ ಪ್ರಕಾರ ಭಾರತ ಜಗತ್ತಿನ ಅತ್ಯಂತ ವೇಗವಾಗಿ ಬೆಳೆಯುತ್ತಿರುವ ಆರ್ಥಿಕ ಎಂದು ಜಗತ್ತಿನಲ್ಲೆಲ್ಲ ಪ್ರಶಂಸೆಗೆ ಪಾತ್ರವಾಗುತ್ತಿದೆ ಎಂಬ ಅಚ್ಛೇ ದಿನ್ ಪ್ರಚಾರವನ್ನು ಈ ನಗರಗಳ ಜನರಂತೂ ನಂಬುತ್ತಿಲ್ಲ. ಉದಾ: 44% ಮಂದಿ ಆರ್ಥಿಕ ಪರಿಸ್ಥಿತಿ ಹದಗೆಡುತ್ತಿದೆ ಎಂದರೆ 22% ಏನೂ ಉತ್ತಮಗೊಂಡಿಲ್ಲ ಎಂದಿದ್ದಾರೆ, ಕೇವಲ 34% ಮಂದಿ ಉತ್ತಮಗೊಂಡಿದೆ ಎಂದು ಭಾವಿಸಿದ್ದಾರೆ. ಒಂದು ವರ್ಷದ ಹಿಂದಿನ ಸರ್ವೆಗೆ ಹೋಲಿಸಿದರೆ ಇದು 10.6 ಇಳಿಕೆ ತೋರಿಸುತ್ತದೆ. ಮೂರು ತಿಂಗಳ ಹಿಂದೆ ಇದು 5.4 ಇಳಿಕೆ ತೋರಿಸುತ್ತಿತ್ತು. ಉದ್ಯೋಗ, ಆದಾಯ, ಖರ್ಚುಗಳ ವಿಷಯಗಳಲ್ಲೂ ಇಳಿಕೆಗಳು ಕಾಣ ಬಂದಿವೆ. ಒಟ್ಟಾರೆ ವಿಶ್ವಾಸ ಸೂಚ್ಯಂಕ ಮೂರು ತಿಂಗಳ ಹಿಂದೆ 98.3 ಇದ್ದದ್ದು ಈಗ 94.8ಕ್ಕೆ ಇಳಿದಿದೆ.

ಈ ಸರ್ವೆಯಲ್ಲಿ ಮುಂದಿನ ವರ್ಷದ ಬಗ್ಗೆ ಏನು ನಿರೀಕ್ಷೆ ಇಟ್ಟುಕೊಂಡಿದ್ದೀರಾ ಎಂದೂ ಕೇಳಲಾಗುತ್ತದೆ. ಸಾಕಷ್ಟು ಮಂದಿ ಉತ್ತಮಗೊಳ್ಳುವ ನಿರೀಕ್ಷೆ ಹೊಂದಿರದಿದ್ದರೂ, ಸಾಮಾನ್ಯವಾಗಿ ಪರಿಸ್ಥಿತಿ ಉತ್ತಮಗೊಳ್ಳಬಹುದು ಎಂಬ ನಿರೀಕ್ಷೆ ಇರುವುದೂ ಕಂಡು ಬಂದಿದೆಯಂತೆ.



ಒಎನ್‌ಜಿಸಿ ದಿವಾಳಿಗೆ ಸರಕಾರ ಕಟಿಬದ್ಧವಾಗಿದೆಯೇ? –ಪ್ರಧಾನಿಗಳಿಗೆ ಕಾರ್ಮಿಕ ಸಂಘದ ಪ್ರಶ್ನೆ

ಇದು ಸಾರ್ವಜನಿಕ ವಲಯದ ನವರತ್ನ ಕಂಪನಿಗಳಲ್ಲಿ ಪ್ರಮುಖವಾದ ಒಎನ್‌ಜಿಸಿ (ತೈಲ ಮತ್ತು ನೈಸರ್ಗಿಕ ಅನಿಲ ಕಂಪನಿ)ಯ ನೌಕರರು ಆಳುವ ಪಕ್ಷಕ್ಕೆ, ಪ್ರಧಾನ ಮಂತ್ರಿಗಳಿಗೆ ಕೇಳಿರುವ ಪ್ರಶ್ನೆ.

ಬಹಳಷ್ಟು ಲಾಭ ಮಾಡುತ್ತಿದ್ದ ಈ ಸಾರ್ವಜನಿಕ ವಲಯದ ಕಂಪನಿ ಈ ಬಾರಿ ತನ್ನ ನೌಕರರಿಗೆ ಸಂಬಳ ಕೊಡಲು ಕೂಡ ಬ್ಯಾಂಕಿನಿಂದ ಓವರ್‌ಡ್ರಾಫ್ಟ್ ಪಡೆಯಬೇಕಾಗಿ ಬಂದಿರುವ ಹಿನ್ನೆಲೆಯಲ್ಲಿ ಅಲ್ಲಿಯ ಕಾರ್ಮಿಕ ಸಂಘ ಪ್ರಧಾನ ಮಂತ್ರಿಗಳಿಗೆ ಹೀಗೇಕೆ ಎಂದು ಪ್ರಶ್ನಿಸಿ ಪತ್ರ ಬರೆದಿರುವುದಾಗಿ ವರದಿಯಾಗಿದೆ (ಸಬ್‌ರಂಗ್ ಇಂಡಿಯಾ, ಅಕ್ಟೋಬರ್ 10).

ಇದಕ್ಕೆ ಕಾರಣಗಳಿವೆ. ಏಕೆಂದರೆ ಒಎನ್‌ಜಿಸಿ ಗೆ ಈ ಪರಿಸ್ಥಿತಿ ಬಂದಿರುವುದು ಕೇಂದ್ರ ಸರಕಾರ ಮತ್ತೆ–ಮತ್ತೆ ಅದರಲ್ಲಿ ಹಸ್ತಕ್ಷೇಪ ಮಾಡಿ ಅದನ್ನು ದಿವಾಳಿಯತ್ತ ಒಯ್ಯುವ ನಿರ್ಧಾರಗಳನ್ನು ಮಾಡುವಂತೆ ಬಲವಂತ ಮಾಡಿರುವುದರಿಂದ. ಎಡಪಕ್ಷಗಳು ಇದರತ್ತ ಗಮನ ಸೆಳೆಯುತ್ತಲೇ ಇದ್ದವು. ಈಗ ಅಲ್ಲಿಯ ಕಾರ್ಮಿಕರಿಗೆ ಇದು ಮನವರಿಕೆಯಾಗಿರುವಂತೆ ಕಾಣುತ್ತದೆ.

ಪ್ರಧಾನ ಮಂತ್ರಿಗಳು ಗುಜರಾತ್ ಮುಖ್ಯಮಂತ್ರಿಗಳಾಗಿದ್ದಾಗ ಜಿಎಸ್‌ಪಿಸಿ(ಗುಜರಾತ್ ರಾಜ್ಯ ಪೆಟ್ರೋಲಿಯಂ ಕಾರ್ಪೊರೇಷನ್)ಯ ಒಂದು ಕ್ರಮ ಅದನ್ನು 20,000 ಕೋಟಿ ರೂ. ನಷ್ಟ ಅನುಭವಿಸುವ ಸ್ಥಿತಿಗೆ ತಂದಿಟ್ಟಿದೆ. 2016ರಲ್ಲಿ, ಇಂತಹ ಭಾರೀ ನಷ್ಟದ ಕಂಪನಿಯನ್ನು 8000 ಕೊಟಿ ರೂ. ತೆತ್ತು ವಹಿಸಿಕೊಳ್ಳುವಂತೆ ಒಎನ್‌ಜಿಸಿ ಯನ್ನು ಬಲವಂತ ಮಾಡಿದ್ದೇಕೆ ಎಂಬುದು ಇಲ್ಲಿಯ ಮೊದಲ ಪ್ರಶ್ನೆ.

ಎರಡನೆಯದ್ದು, ಹಿಂದುಸ್ತಾನ್ ಪೆಟ್ರೋಲಿಯಂ ಕಂಪನಿಯಲ್ಲಿ ಸರಕಾರದ 51.11% ಶೇರನ್ನು ಮಾರುಕಟ್ಟೆ ಬೆಲೆಗಿಂತ 14% ಹೆಚ್ಚು 36,915 ಕೋಟಿರೂ. ತೆತ್ತು ಒಎನ್‌ಜಿಸಿ ಖರೀದಿಸುವಂತೆ ಮಾಡಿದ್ದೇಕೆ?

ಮೂರನೆಯದ್ದು, ಸಿಎಸ್‌ಆರ್, ಅಂದರೆ ಕಾರ್ಪೊರೇಟ್ ಸಾಮಾಜಿಕ ಹೊಣೆಗಾರಿಕೆ ಹೆಸರಲ್ಲಿ ವಿವಿಧ ಕೇಂದ್ರೀಯ ಇಲಾಖೆಗಳು ಭಾರತ ಸರಕಾರದ ಪ್ರಾಯೋಜಿತ ಪ್ರಾಜೆಕ್ಟ್‌ಗಳಿಗೆ, ಉದಾಹರಣೆಗೆ, ಎಲ್‌ಪಿಜಿ ವಿತರಣೆ, ಶೌಚಾಲಯ ನಿರ್ಮಾಣ, ಶಾಲಾ ಬಾಲಕಿಯರಿಗೆ ಸ್ಯಾನಿಟರಿ ನ್ಯಾಪ್ಕಿನ್ ವಿತರಣೆ, ಹಳ್ಳಿಗಳ ದತ್ತು ಇತ್ಯಾದಿಗಳಿಗೆ ಒಎನ್‌ಜಿಸಿ ಹಣ ತೆರುವಂತೆ ಮಾಡಿದ್ದೇಕೆ?

ಪ್ರಧಾನ ಮಂತ್ರಿ ಕಚೇರಿಯಿಂದ ಈ ಪತ್ರ ತಲುಪಿರುವುದಾಗಿ, ಅಗತ್ಯ ಕ್ರಮ ಕೈಗೊಳ್ಳುವುದಾಗಿ ಪತ್ರ ಬಂದಿದೆ ಎಂದು ಕಾರ್ಮಿಕ ಸಂಘದ ಪ್ರಧಾನ ಕಾರ್ಯದರ್ಶಿ ತಿಳಿಸಿದ್ದಾರೆ.

ಸಾರ್ವಜನಿಕ ವಲಯವನ್ನು ಸದಾ ಹೀಗಳೆಯುವ ಒಂದು ಪಕ್ಷ ಮತ್ತು ಅದರ ಸರಕಾರ ಎಂತಹ 'ಅಗತ್ಯ ಕ್ರಮ' ಕೈಗೊಳ್ಳುತ್ತದೆ?



ವ್ಯಂಗ್ಯ ಚಿತ್ರ: ಅಲೋಕ್ ನಿರಂತರ್

* ಅಕ್ಟೋಬರ್ 6 ರಂದು ಐದು ರಾಜ್ಯಗಳ ವಿಧಾನಸಭೆಗಳ ಚುನಾವಣಾ ವೇಳಾಪಟ್ಟಿ ಪ್ರಕಟ
* ಅಕ್ಟೋಬರ್ 5ರಂದು ಪೆಟ್ರೋಲ್ ಬೆಲೆ 82.14 ರೂ. 11 ರಂದು 83.01ರೂ.
ಡೀಸೆಲ್ ಬೆಲೆ 73.32ರೂ. ಮತ್ತು 75.00ರೂ.
* ಮುಂದಿನ ವಾರ ಹೇಗಿರುತ್ತದೆ?

ಜೀವನಾವಶ್ಯಕ ಪಿಂಚಣಿ ಭಿಕ್ಷೆಯಲ್ಲ, ನಾಗರಿಕ ಹಕ್ಕು



ವಿಶ್ರಾಂತಿ ವೇತನದ ಮೊತ್ತ ಜುಜುಬಿ 200ರೂ.. ಈ ಫಲಾನುಭವಿಗಳ ಪಟ್ಟಿ ಅಸಂಬದ್ಧ ಎನ್ನುವಷ್ಟು ಸಣ್ಣದು. ನಗೆಪಾಟಲಿಗೆ ಗುರಿಯಾಗುವಷ್ಟು ಜುಜುಬಿ ಮೊತ್ತದ ವಿಶ್ರಾಂತಿ ವೇತನವು ಸಂವಿಧಾನದ ಆಶಯಗಳ ಉಲ್ಲಂಘನೆಯಾಗುತ್ತದೆ. ಇದೊಂದು ನಾಚಿಕೆಗೇಡಿ ಹಗರಣವೇ ಸರಿ. ಇದು ಇನ್ನೂ ಕಾಡುತ್ತಲೇ ಉಳಿದಿರುವುದು ಸಂಪನ್ಮೂಲಗಳ ಕೊರತೆಯಿಂದಾಗಿ ಅಲ್ಲ, ಬದಲಿಗೆ, ಶುದ್ಧಾಂಗ ವರ್ಗ-ವಿರೋಧದಿಂದಾಗಿ. ಏಕೆಂದರೆ, ಸಂಭಾವ್ಯ ಫಲಾನುಭವಿಗಳ ಬಹು ದೊಡ್ಡ ಭಾಗವು, ಕೆಲಸಗಾರರು, ಕುಲಕಸುಬುದಾರರು, ಕುಶಲಕರ್ಮಿಗಳು, ರೈತರು ಮತ್ತು ಕೃಷಿ ಕೂಲಿಗಾರರಿಂದ ಕೂಡಿದೆ.

ಪ್ರೊ. ಪ್ರಭಾತ್ ಪಟ್ನಾಯಕ್

ಅನುವಾದ: ಕೆ.ಎಂ.ನಾಗರಾಜ್

ನಮ್ಮ ಹಿರಿಯ ನಾಗರಿಕರಿಗೆ ಭಾರತ ಸರ್ಕಾರ ಕೊಡುತ್ತಿರುವ ಪಿಂಚಣಿ ಅಥವಾ ವಿಶ್ರಾಂತಿ ವೇತನದ ಮೊತ್ತ ತಿಂಗಳಿಗೆ 200 ರೂ. ಅಲ್ಲದೆ ನಂಬಲಾರದಷ್ಟು ಕಡಿಮೆ ಮೊತ್ತದ ಈ ಪಿಂಚಣಿ ಪಡೆಯುವ ಒಬ್ಬ ಫಲಾನುಭವಿಯು ಬಡತನ ರೇಖೆಯ ಕೆಳಗಿರುವ ವ್ಯಕ್ತಿಯಾಗಿರಬೇಕು. ಬಡತನ ರೇಖೆಯ ಕೆಳಗಿರುವವರನ್ನು ಗುರುತಿಸುವಾಗ, ಅವರ ಸಂಖ್ಯೆಯನ್ನು ಕೀಳಂದಾಜು ಮಾಡುವ ವಿಷಯ ಎಲ್ಲರಿಗೂ ತಿಳಿದದ್ದೇ. ಕೇಂದ್ರ ಸರ್ಕಾರ ಕೊಡುವ 200 ರೂಪಾಯಿಗಳಿಗೆ ರಾಜ್ಯ ಸರ್ಕಾರಗಳೂ ಸ್ವಲ್ಪ ಹಣ ಸೇರಿಸಿ ಕೊಡುತ್ತವೆ ಎಂಬುದು ನಿಜ. ಆದರೆ, ರಾಜ್ಯ ಸರ್ಕಾರಗಳ ಆದಾಯಗಳು ಕಡಿಮೆ ಇರುವುದರಿಂದಾಗಿ ಅವು ಸೇರಿಸುವ ಹಣದ ಮೊತ್ತ ದೊಡ್ಡದಿರುವುದಿಲ್ಲ. ಅದಕ್ಕಿಂತಲೂ ಮುಖ್ಯವಾಗಿ, ಕೇಂದ್ರ ಸರ್ಕಾರ ಕೊಡುವ 200 ರೂ ನಿಗದಿತ ಮೊತ್ತವು 2006-07ರಿಂದ ಬದಲಾವಣೆ ಕಂಡೇ ಇಲ್ಲ. ಕೊನೆಯ ಪಕ್ಷ, ಅದನ್ನು ಬೆಲೆ ಏರಿಕೆ ಸೂಚ್ಯಂಕಕ್ಕೆ ಅನುಗುಣವಾಗಿ ಏರಿಸುವಷ್ಟು ಕನಿಷ್ಠ ಸೌಜನ್ಯವನ್ನು ಕೂಡ ನಮ್ಮ ಕೇಂದ್ರ ಸರ್ಕಾರ ಹಿರಿಯ ನಾಗರಿಕರಿಗೆ ತೋರಿಸಿಲ್ಲ.

ಇದೊಂದು ನಾಚಿಕೆಗೇಡಿನ ವಿಚಾರ. ಏಕೆಂದರೆ, ವಿಶ್ರಾಂತಿ ವೇತನದ ಜುಜುಬಿ ಮೊತ್ತವು ಮೊದಲೇ ಹಾಸ್ಯಾಸ್ಪದವಾಗಿದೆ. ಈ ಫಲಾನುಭವಿಗಳ ಪಟ್ಟಿ ಅಸಂಬದ್ಧ ಎನ್ನುವಷ್ಟು ಸಣ್ಣದಿದೆ. ವಿಶ್ರಾಂತಿ ವೇತನದಲ್ಲಿ ಬೆಲೆ ಏರಿಕೆಯ ವಿರುದ್ಧ ಸಾಸಿವೆ ಕಾಳಿನಷ್ಟೂ ರಕ್ಷಣೆ ಇಲ್ಲ. ಎಲ್ಲಕ್ಕಿಂತ ಬಹಳ ಮುಖ್ಯವಾಗಿ, ದುರ್ಬಲರ ಬಗ್ಗೆ ಸರ್ಕಾರ ಎಂತಹ ಮನೋಭಾವ ಹೊಂದಿದೆ ಎಂಬುದನ್ನು ಈ ಪ್ರಸಂಗ ಬಯಲು ಮಾಡುತ್ತದೆ. ಸರ್ಕಾರದ ಈ ಮನೋಭಾವವು, ಪಿಂಚಣಿ ಒಂದು ಭಕ್ಷೀಸು, ತಿರುಕರಿಗೆ ಕೊಟ್ಟ ಭಿಕ್ಷೆ ಎಂಬ ಮನೋಭಾವವನ್ನು ಬಿಂಬಿಸುತ್ತದೆ.

ಆದರೆ, ವಾಸ್ತವಿಕವಾಗಿ, ಜೀವನಾವಶ್ಯಕತೆಗೆ ತಕ್ಕಷ್ಟು ವಿಶ್ರಾಂತಿ ವೇತನ ಪಡೆಯುವುದು ಹಿರಿಯ ನಾಗರಿಕರ ಹಕ್ಕು. ಕೊಡಬೇಕಾದದ್ದು ಎಂಬ ಭಾವನೆಯಿಂದ ಕೂಡಿದ್ದಲ್ಲ ಈ ಹಕ್ಕು, ಬದಲಿಗೆ, ನಮ್ಮ ಸಂವಿಧಾನವು ರೂಪಗೊಳ್ಳಲು ಕಾರಣವಾದ ಭಾರತದ ವಸಾಹತುಶಾಹಿ-ವಿರೋಧಿ ಹೋರಾಟದ ಹಿಂದಿದ್ದ ಸಾಮಾಜಿಕ ತತ್ವ ಚಿಂತನೆಯ ಒಂದು ಅವಿಭಾಜ್ಯ ಅಂಗ ಎಂಬ ನಿರ್ದಿಷ್ಟ ಅರ್ಥದ ಹಕ್ಕು.

ಈ ತತ್ವ ಚಿಂತನೆಯನ್ನು ಎಡ ಪಂಥೀಯರು ಎತ್ತಿ ಹಿಡಿಯುತ್ತಾರೆ. ಏಕೆಂದರೆ, ಸಮಾಜದಲ್ಲಿ ಬದುಕುವ ಒಬ್ಬ ವ್ಯಕ್ತಿಯ ಅವಸ್ಥೆಯನ್ನು ಅವನು ಅಥವಾ ಅವಳು ಬದುಕುತ್ತಿರುವ ಸಾಮಾಜಿಕ ಏರ್ಪಾಡು ನಿರ್ಧರಿಸುತ್ತದೆ. ಉದಾಹರಣೆಗೆ, ಸ್ವಾತಂತ್ರ್ಯ-ಪೂರ್ವ ಕಾಲದಲ್ಲಿ, ಭಾರತೀಯರ ದುರವಸ್ಥೆಗೆ ಅವರ "ಸೋಮಾರಿತನ" ಅಥವಾ ಅವರ ಉದ್ಯಮಶೀಲತೆಯ ಕೊರತೆ ಅಥವಾ ಅವರು ತಮ್ಮ ಪರಂಪಾರುನುಗತ ನಂಬಿಕೆಗಳಿಗೆ ಕಟ್ಟುಹಾಕಿಕೊಂಡಿರುವುದೇ ಕಾರಣವೆಂದು ವಸಾಹತುಶಾಹಿಗಳು ಹೇಳುತ್ತಿದ್ದರು. ಆದರೆ, ಭಾರತದ ಬಡತನಕ್ಕೆ ವಸಾಹತುಶಾಹಿ ವ್ಯವಸ್ಥೆಯೇ ಕಾರಣವೆಂಬುದು ವಸಾಹತುಶಾಹಿ-ವಿರೋಧಿ ಹೋರಾಟದ ಖಚಿತ ಅಭಿಪ್ರಾಯವಾಗಿತ್ತು. ಈ ತಿಳುವಳಿಕೆಯ ಕಾರಣದಿಂದಾಗಿಯೇ, ವಸಾಹತುಶಾಹಿ ಆಡಳಿತವನ್ನು ಕಿತ್ತೊಗೆದು, ಅದರ ಬದಲಾಗಿ, ಪ್ರತಿಯೊಬ್ಬ ಭಾರತೀಯನಿಗೂ ಒಂದು ಕನಿಷ್ಠ ದರ್ಜೆಯ ಜೀವನ ಖಾತ್ರಿಪಡಿಸುವ ಒಂದು ಸಾಮಾಜಿಕ ಏರ್ಪಾಡು ಒದಗಿಸುವ ಆಶಾಭಾವನೆಯೊಂದಿಗೆ ನಮ್ಮ ಸ್ವಾತಂತ್ರ ಹೋರಾಟ ನಡೆದಿತ್ತು. 1931ರಲ್ಲಿ ಕರಾಚಿಯಲ್ಲಿ ಜರುಗಿದ ಕಾಂಗ್ರೆಸ್ ಅಧಿವೇಶನದಲ್ಲಿ, ಸ್ವತಂತ್ರ ಭಾರತ ಹೇಗಿರುತ್ತದೆ ಎಂಬುದರ ರೂಪು ರೇಖೆಗಳನ್ನು ಮಂಡಿಸಲಾಗಿತ್ತು ಮತ್ತು ಪ್ರತಿಯೊಬ್ಬ ಭಾರತೀಯನಿಗೂ ಒಂದು ಕನಿಷ್ಠ ದರ್ಜೆಯ ಜೀವನದ ಭರವಸೆ ಕೊಡಲಾಗಿತ್ತು. ನಂತರದ ದಿನಗಳಲ್ಲಿ ನಡೆದ ಹೋರಾಟಗಳಲ್ಲಿ ಜನಸಾಮಾನ್ಯರು ಅಪಾರ ಸಂಖ್ಯೆಯಲ್ಲಿ ಭಾಗವಹಿಸಲು ಈ ಭರವಸೆಯೇ ಒಂದು ಪ್ರೇರೇಪಣೆಯಾಗಿತ್ತು. ಹಾಗಾಗಿ, ಈ ಆಶಾಭಾವನೆಯೇ ಒಂದು ರೀತಿಯ "ಸ್ವಾತಂತ್ರ್ಯದ ಸನ್ನದು" (freedom charter) ಎಂದೇ ಹೇಳಬಹುದು. ಈ ಆಶಾಭಾವನೆಯ ನೆಲೆಯಲ್ಲಿಯೇ ಹೊಸ ರಾಷ್ಟ್ರ ಉದಯಿಸಿತು ಮತ್ತು ಅದೊಂದು ಅಘೋಷಿತ ಸಂವಿಧಾನದಂತಿತ್ತು.

ನಮ್ಮ ಸಂವಿಧಾನವು ಕೆಲವು ಮೂಲಭೂತ ರಾಜಕೀಯ ಹಕ್ಕುಗಳನ್ನು ಸಂಹಿತೆಯಾಗಿ ಸ್ಪಷ್ಟಪಡಿಸಿರುವ ರೀತಿಯಲ್ಲಿ, ಮೂಲಭೂತ ಆರ್ಥಿಕ ಹಕ್ಕುಗಳನ್ನು ಸಂಹಿತೆಯಾಗಿ ಸ್ಪಷ್ಟಪಡಿಸಿಲ್ಲ. ಆದಾಗ್ಯೂ, ಆರ್ಥಿಕ ಹಕ್ಕುಗಳು ಇಲ್ಲವೆಂದು ಹೇಳುವಂತಿಲ್ಲ. ಏಕೆಂದರೆ, ಆರ್ಥಿಕ ಹಕ್ಕುಗಳು, ಸ್ವಾತಂತ್ರ್ಯ ಸನ್ನದುವಿನ ಜೀವಾಳವಾಗಿವೆ. ಅದಕ್ಕಿಂತಲೂ ಮುಖ್ಯವಾಗಿ, ವಾಸ್ತವಿಕವಾಗಿ, ಆರ್ಥಿಕ ಹಕ್ಕುಗಳಿಲ್ಲದಿದ್ದರೆ ಸ್ವಾತಂತ್ರ್ಯವನ್ನು ಅನುಭವಿಸಲಾಗದು. ತಕ್ಕ ಮಟ್ಟಿನ ಆರ್ಥಿಕ ಭದ್ರತೆ ಇಲ್ಲದ ಒಬ್ಬ ವ್ಯಕ್ತಿಯು ಪ್ರಜಾಪ್ರಭುತ್ವದಲ್ಲಿ ತನ್ನ ಪಾತ್ರವನ್ನು ನಿರ್ವಹಿಸಲಾರ. ಆದ್ದರಿಂದ, ಸಂವಿಧಾನದಲ್ಲಿ ಆರ್ಥಿಕ ಹಕ್ಕುಗಳನ್ನು ಸಂಹಿತೆಯ ರೂಪದಲ್ಲಿ ಸ್ಪಷ್ಟಪಡಿಸಿಲ್ಲವಾದರೂ ಅವು ಸೂಚ್ಯವಾಗಿವೆ ಮತ್ತು ಸಂಹಿತೆಯಾಗಿ ಸ್ಪಷ್ಟಪಡಿಸಿರುವ ಮೂಲಭೂತ ರಾಜಕೀಯ ಹಕ್ಕುಗಳಷ್ಟೇ ಮೂಲಭೂತವಾಗಿವೆ.


ಹಿರಿಯ ನಾಗರಿಕರಿಗೆ ಕೊಡುವ ತಕ್ಕಷ್ಟು ಪ್ರಮಾಣದ ವಿಶ್ರಾಂತಿ ವೇತನವೂ ಒಂದು ಹಕ್ಕು. ಅದು, ಸಮಾನ ನಾಗರಿಕರ ಸೋದರಿಕೆಯ ಆಧಾರದ ಮೇಲೆ ರೂಪುಗೊಂಡ ಭಾರತದ ಸಂವಿಧಾನದ ಆಶಯಗಳಲ್ಲಿ ಅಡಕವಾಗಿದೆ. ಆದ್ದರಿಂದ, ಒಂದು ಕನಿಷ್ಟ ದರ್ಜೆಯ ಜೀವನಾವಶ್ಯಕತೆಗಳನ್ನು ಪೂರೈಸುವ ವಿಶ್ರಾಂತಿ ವೇತನದ ಬೇಡಿಕೆಯನ್ನು ಒಪ್ಪಿಕೊಂಡಾಗ, ಈ ಸಮಾನ ನಾಗರಿಕರ ಸೋದರಿಕೆಯ ಪರಿಕಲ್ಪನೆಯಲ್ಲಿ ರೂಪುಗೊಂಡ ಸಂವಿಧಾನ ಕೊಡುವ ಭರವಸೆಯ ದೃಷ್ಠಿಯಲ್ಲಿ, ಅದು ಯಾರೊಬ್ಬರೂ ಮತ್ತೊಬ್ಬರಿಗೆ ತೋರಿಸುವ ಕೃಪೆಯಾಗುವುದಿಲ್ಲ.

ತಕ್ಕಷ್ಟು ಪ್ರಮಾಣದ ವಿಶ್ರಾಂತಿ ವೇತನ ಒಂದು ಹಕ್ಕು ಎಂದಾದರೆ, ಅದು ಸಾರ್ವತ್ರಿಕವಾಗಬೇಕು, ಮೂಲಭೂತ ರಾಜಕೀಯ ಹಕ್ಕುಗಳನ್ನು ಎಲ್ಲರೂ ಅನುಭವಿಸುವ ರೀತಿಯಲ್ಲಿ. ವಿಶ್ರಾಂತಿ ವೇತನವು ಚಂದಾ ಹಣದಿಂದ ನಿರ್ವಹಿಸುವ ಯೋಜನೆಯಾಗಿರಬಾರದು ಅಥವಾ ಸರ್ಕಾರದ ಹಣಕಾಸಿನ ಅನುಕೂಲದ ಮೇಲೆ ನಿಂತಿರಬಾರದು. ಇಂತವರಿಗೆ ಮತ್ತು ಇಷ್ಟೇ ಮಂದಿಗೆ ಎಂಬ ಮಿತಿ ಹೊಂದಿರಬಾರದು. ಏಕೆಂದರೆ, ಗುರಿ/ಮಿತಿ ನಿಗದಿಯಾದಾಗ ಅನೇಕ ಮಂದಿ ಅರ್ಹ ಫಲಾನುಭವಿಗಳಿಗೆ ಅದು ಸಿಗುವುದಿಲ್ಲ. ಮೇಲಾಗಿ, ನಾಗರಿಕರ ಎಲ್ಲ ಹಕ್ಕುಗಳೂ ಸಾರ್ವತ್ರಿಕವಾಗಬೇಕು ಎಂಬ ತತ್ವದ ಉಲ್ಲಂಘನೆಯಾಗುತ್ತದೆ. ಸ್ಪಷ್ಟಪಡಿಸಿ ಹೇಳುವುದಾದರೆ, ವಿಶ್ರಾಂತಿ ವೇತವನ್ನು ನಿಗದಿಪಡಿಸುವಾಗ, ಕೆಲವರು ಈಗಾಗಲೇ ಅದನ್ನು ಬೇರೊಂದು ಸಂಸ್ಥೆಯಿಂದ ಪಡೆಯುತ್ತಿದ್ದರೆ, ಅವರು ಈ ಯೋಜನೆಯಿಂದ ಹೊರಗುಳಿಯುತ್ತಾರೆ. ಹಾಗಾಗಿ, ಅವರ ಹಕ್ಕಿನ ಉಲ್ಲಂಘನೆಯಾಗುವುದಿಲ್ಲ. ಅದೇ ರೀತಿಯಲ್ಲಿ, ಸರ್ಕಾರವು ಪ್ರತಿ ಹಿರಿಯ ನಾಗರಿಕನಿಗೆ ಒಂದು ಹಕ್ಕಾಗಿ ಕೊಡುವ ವಿಶ್ರಾಂತಿ ವೇತನಕ್ಕೂ ಮತ್ತು ಒಬ್ಬ ವ್ಯಕ್ತಿಯು ಸದಸ್ಯನಾಗಿರುವ ವಂತಿಗೆ ಯೋಜನೆಗೂ ಸಂಬಂಧವಿರಬಾರದು. ಒಂದು ವೇಳೆ, ಒಬ್ಬ ವ್ಯಕ್ತಿಯು ಬೇರೊಂದು ಯೋಜನೆಯಲ್ಲಿ ವಂತಿಗೆದಾರನಾಗಿದ್ದರೆ, ಆ ವ್ಯಕ್ತಿಯು ಸರ್ಕಾರದ ಹಣದಿಂದ ನಡೆಯುವ ವಿಶ್ರಾಂತಿ ವೇತನ ಯೋಜನೆಯಿಂದ ಹೊರಗುಳಿಯಬಹುದು, ಅಥವಾ ಎರಡು ಪಿಂಚಣಿಗಳ ಸೌಲಭ್ಯ ತಪ್ಪಿಸಲು ಪಿಂಚಣಿ ಮೊತ್ತವನ್ನು ಸೂಕ್ತವಾಗಿ ಮಾರ್ಪಡಿಸಬಹುದು. ಒಟ್ಟಿನಲ್ಲಿ, ಸರ್ಕಾರ ಕೊಡುವ ವಿಶ್ರಾಂತಿ ವೇತನವು ಪ್ರತಿಯೊಬ್ಬರ ಹಕ್ಕಾಗಿರಬೇಕು. ವಿಶ್ರಾಂತಿ ವೇತನ ಯೋಜನೆಗೆ ಸರ್ಕಾರ ಬಜೆಟ್ ಮೂಲಕ ಹಣ ಒದಗಿಸಬೇಕು.

ನಗೆಪಾಟಲಿಗೆ ಗುರಿಯಾಗುವಷ್ಟು ಜುಜುಬಿ ಮೊತ್ತದ ವಿಶ್ರಾಂತಿ ವೇತನವು ಸಂವಿಧಾನದ ಆಶಯಗಳ ಉಲ್ಲಂಘನೆಯಾಗುತ್ತದೆ. ಪಾಳೆಗಾರಿ ಕಾಲದಲ್ಲಿ ರಾಜ ಮಹಾರಾಜರು ತಮ್ಮ ದಯಾಪರತೆಯ ಕುರುಹಾಗಿ ಆಗೊಮ್ಮೆ ಈಗೊಮ್ಮೆ ತಮ್ಮ ವಿಧೇಯ ಪ್ರಜೆಗಳಿಗೆ ಸಣ್ಣ ಪುಟ್ಟ ಬಹುಮಾನ ಕೊಡುವ ಕೃಪೆ ತೋರಿಸುತ್ತಿದ್ದ ರೀತಿಯಲ್ಲಿ ಇಂದಿನ ಸರ್ಕಾರಗಳು ಜುಜುಬಿ ಮೊತ್ತದ ಪಿಂಚಣಿ ಒದಗಿಸಿವೆ.

ಹಿರಿಯ ನಾಗರಿಕರ ಅನೇಕ ಗುಂಪುಗಳನ್ನೊಳಗೊಂಡ ಪೆನ್ಶನ್ ಪರಿಷತ್ ಎಂಬ ಸಂಸ್ಥೆಯು, ಹಕ್ಕು ಆಧಾರಿತ, ಸಾರ್ವತ್ರಿಕ ಮತ್ತು ಅತಿಯಲ್ಲದ ಮೊತ್ತದ ವಿಶ್ರಾಂತಿ ವೇತನ ಒದಗಿಸಬೇಕೆಂಬ ಬೇಡಿಕೆಯ ಮೇಲೆ ಸೆಪ್ಟೆಂಬರ್ 30 ಮತ್ತು ಅಕ್ಟೋಬರ್ 1 ರಂದು ದೆಲ್ಲಿಯಲ್ಲಿ ಒಂದು ಧರಣಿ ಕಾರ್ಯಕ್ರಮ ಹಮ್ಮಿಕೊಂಡಿತ್ತು. ಕನಿಷ್ಠ ಕೂಲಿಯ ಅರ್ಧದಷ್ಟು, ಅಂದರೆ, ಕೊನೆಯ ಪಕ್ಷ ತಿಂಗಳಿಗೆ 3000 ರೂಪಾಯಿಗಳ ವಿಶ್ರಾಂತಿ ವೇತನವನ್ನು ಎಲ್ಲರಿಗೂ ಒದಗಿಸಬೇಕೆಂಬ ತತ್ವವನ್ನು ಪೆನ್ಶನ್ ಪರಿಷತ್ ಪ್ರತಿಪಾದಿಸಿತ್ತು. 2012ರಲ್ಲೂ ಒಂದು ಧರಣಿ ಹಮ್ಮಿಕೊಂಡಿದ್ದ ಪೆನ್ಶನ್ ಪರಿಷತ್, ಆಗ, 2000 ರೂಗಳ ಬೇಡಿಕೆ ಇಟ್ಟಿತ್ತು. ಈ ನಡುವೆ ಉಂಟಾದ ಬೆಲೆ ಏರಿಕೆಯ ಕಾರಣದಿಂದ ಈಗ 3000 ರೂ ಬೇಡಿಕೆ ಮುಂದಿಟ್ಟಿದೆ.

ಪೆನ್ಶನ್ ಪರಿಷತ್ ಮುಂದಿಟ್ಟಿರುವ 3000 ರೂ ಬೇಡಿಕೆಯ ಸಮಂಜಸತೆಯನ್ನು ಇನ್ನೊಂದು ವಿಧಾನದ ಮೂಲಕವೂ ಮನಗಾಣಬಹುದು. ಭಾರತದಲ್ಲಿ ಬಡತನವನ್ನು ಕ್ಯಾಲೊರಿ ಬಳಕೆಯ ವಿಧಾನದ ಮೂಲಕ ವ್ಯಾಖ್ಯಾನಿಸಲಾಗಿದೆ. ಈ ಪ್ರಕಾರವಾಗಿ, ದಿನವೊಂದಕ್ಕೆ, ನಗರ ಪ್ರದೇಶದಲ್ಲಿ 2100 ಕ್ಯಾಲೊರಿಗಳಿಗಿಂತ ಕಡಿಮೆ ಪ್ರಮಾಣದ ಆಹಾರ ಸೇವಿಸುವವರು ಮತ್ತು ಗ್ರಾಮೀಣದಲ್ಲಿ 2200 ಕ್ಯಾಲೊರಿಗಳಿಗಿಂತ ಕಡಿಮೆ ಪ್ರಮಾಣದ ಆಹಾರ ಸೇವಿಸುವವರು ಬಡವರೆಂದು ಗುರುತಿಸಲಾಗಿದೆ.



ಹಾಗಾಗಿ, 2200 ಕ್ಯಾಲೊರಿ ಮಟ್ಟದ ಆಹಾರದ ಇಂದಿನ ವೆಚ್ಚ ಸುಮಾರು 3000 ರೂ ಆಗುತ್ತದೆ. ಆದ್ದರಿಂದ, 3000 ರೂಗಳ ವಿಶ್ರಾಂತಿ ವೇತನ ಕೊಡಬೇಕೆಂಬ ಬೇಡಿಕೆಯನ್ನು ಪೆನ್ಶನ್ ಪರಿಷತ್ ಮಂಡಿಸಿದೆ.

ವಿಶ್ರಾಂತಿ ವೇತನ ಪಡೆಯುವ ಸಂಭಾವ್ಯ ಫಲಾನುಭವಿಗಳ ಸಂಖ್ಯೆ ಸುಮಾರು 8 ಕೋಟಿ ಎಂದು ಪೆನ್ಶನ್ ಪರಿಷತ್ 2012ರಲ್ಲಿ ಅಂದಾಜು ಮಾಡಿತ್ತು. ಈ ಸಂಖ್ಯೆ ಈಗ ಸುಮಾರು 10 ಕೋಟಿ ಇರಬಹುದು. ಇವರಿಗೆ ತಿಂಗಳಿಗೆ 3000ರೂ ವೃದ್ಧಾಪ್ಯ ವೇತನ ಕೊಡಲು ತಗಲುವ ವೆಚ್ಚ ಸುಮಾರು 3.6 ಲಕ್ಷ ಕೋಟಿ ರೂಪಾಯಿಗಳು. ಅದರಲ್ಲಿ 5% ಮಂದಿ ಐಚ್ಛಿಕವಾಗಿ ಹೊರಗುಳಿಯಬಹುದು. ಹಾಗಾಗಿ, ಒಂದು ಸಾರ್ವತ್ರಿಕ, ಹಕ್ಕು ಆಧಾರಿತ ವಿಶ್ರಾಂತಿ ವೇತನ ಒದಗಿಸುವ ಯೋಜನೆಗೆ ತಗಲುವ ವೆಚ್ಚವು ಈಗಿನ ಜಿಡಿಪಿಯ ಶೇ.2ರಷ್ಟಾಗುತ್ತದೆ.

3.6 ಲಕ್ಷ ಕೋಟಿ ರೂಪಾಯಿಗಳ ಯೋಜನೆಯ ಭಾರವನ್ನು ದೇಶ ಹೊರಬಲ್ಲದೇ ಎಂಬ ಪ್ರಶ್ನೆ ಎದುರಾಗುತ್ತದೆ. ಈ ವೆಚ್ಚವು ಜಿಡಿಪಿಯ ಶೇ.2ರಷ್ಟಾಗುತ್ತದೆ. ಇದು ಎಷ್ಟಾಗುತ್ತದೆ ಎಂದರೆ, ಸಧ್ಯದಲ್ಲಿ, ಜಿಡಿಪಿಯ ವಾರ್ಷಿಕ ಹೆಚ್ಚಳದ 1/3 ಭಾಗದಷ್ಟು. ಇಷ್ಟು ಹಣವನ್ನು ಒಂದು ವೇಳೆ, ವರಮಾನಗಳ ಮೇಲೆ ವಿಧಿಸಿದ ತೆರಿಗೆಯಿಂದ ಒದಗಿಸಿದರೆ, ಒಬ್ಬ ತೆರಿಗೆದಾರನ ತೆರಿಗೆಯ ನಂತರದ ವರಮಾನದಲ್ಲಿ, ಹಿಂದಿನ ವರ್ಷದ ಅವನ ವರಮಾನಕ್ಕೆ ಹೋಲಿಸಿದರೆ ಇಳಿಕೆ ಇರುವುದಿಲ್ಲ, ಬದಲಿಗೆ ಹಿಂದಿನ ವರ್ಷದ ವರಮಾನಕ್ಕಿಂತ ಶೇ.3ರಷ್ಟು ಹೆಚ್ಚಾಗಿರುತ್ತದೆ. ಇಷ್ಟು ದೊಡ್ಡ ಪ್ರಮಾಣದ ವಿಶ್ರಾಂತಿ ವೇತನ ನೀಡಲು, ತೆರಿಗೆ ಪಾವತಿಸುವವರು ಬಹಳ ದೊಡ್ಡ ತ್ಯಾಗಮಾಡಬೇಕಿಲ್ಲ. ಅವರ ವಾರ್ಷಿಕ ವರಮಾನದ ಹೆಚ್ಚಳದ ಮಟ್ಟ ಹಿಂದಿನ ವರ್ಷಕ್ಕೆ ಹೋಲಿಸಿದರೆ ಸ್ವಲ್ಪ ಇಳಿದಿರುತ್ತದೆ, ಅಷ್ಟೇ. ಹಾಗಾಗಿ, ಹಿರಿಯ ನಾಗರಿಕರಿಗೆ ಒಂದು ಕನಿಷ್ಠ ಮಟ್ಟದ ಜೀವನ ನಿರ್ವಹಣೆಗಾಗಿ ಒದಗಿಸುವ ವಿಶ್ರಾಂತಿ ವೇತನಕ್ಕಾಗಿ ಯಾರನ್ನೂ ಹಿಂಡುವ ಅಗತ್ಯವಿಲ್ಲ.

ಈ ಹಿಂದಿನ ಪ್ರಸ್ತಾಪದಲ್ಲಿ ವರಮಾನಗಳ ಮೇಲೆ ವಿಧಿಸಿದ ತೆರಿಗೆಯಿಂದ ವಿಶ್ರಾಂತಿ ವೇತನ ಒದಗಿಸಬಹುದು ಎಂಬುದಿತ್ತು. ಆದರೆ, ಅದು ಅವಶ್ಯವೇನಲ್ಲ. ವಿಶ್ರಾಂತಿ ವೇತನ ಒದಗಿಸಲು ಸಂಗ್ರಹಿಸುವ ಹಣವನ್ನು, ಕರೆನ್ಸಿ ವ್ಯವಹಾರಗಳ ಮೇಲೆ ವಿಧಿಸುವ ಟಾಬಿನ್ ತೆರಿಗೆ ಮೂಲಕ (1972ರಲ್ಲಿ ಅಮೆರಿಕಾದಲ್ಲಿ, ಜೇಮ್ಸ್ ಟಾಬಿನ್ ಎಂಬ ಒಬ್ಬ ಅರ್ಥಶಾಸ್ತ್ರಜ್ಞನ ಸಲಹೆಯ ಮೇರೆಗೆ ಕರೆನ್ಸಿ ವ್ಯವಹಾರಗಳ ಮೇಲೆ ತೆರಿಗೆ ವಿಧಿಸಲಾಗಿತ್ತು) ಅಥವಾ ಷೇರು ಮಾರುಕಟ್ಟೆಯ ವ್ಯವಹಾರಗಳಲ್ಲಿ ಈಗಿರುವ ತೆರಿಗೆಯನ್ನು ತುಸು ಹೆಚ್ಚಿಸುವ ಮೂಲಕ ಅಥವಾ ಮುಚ್ಚುಮರೆಯಿಲ್ಲದೆ ಸಂಪತ್ತು ತೆರಿಗೆ ವಿಧಿಸುವ ಮೂಲಕ ಪಡೆಯಬಹುದು. ಸಂಪತ್ತು ತೆರಿಗೆ ವಿಧಿಸುವುದೇ ಸೂಕ್ತ ಕ್ರಮ. ಏಕೆಂದರೆ, ಏಕ ಕಾಲದಲ್ಲಿ ಅದು ಸಟ್ಟಾ ವ್ಯವಹಾರಗಳನ್ನು ನಿಗ್ರಹಿಸುತ್ತದೆ ಮತ್ತು ಸಂಪತ್ತಿನ ಅಸಮಾನತೆಗಳನ್ನು ಕಡಿಮೆಮಾಡುತ್ತದೆ. ಒಂದು ಅಂದಾಜಿನ ಪ್ರಕಾರ, ನಮ್ಮಲ್ಲಿರುವ ಖಾಸಗಿ ಸಂಪತ್ತು ನಮ್ಮ ಜಿಡಿಪಿಯ ಮೌಲ್ಯದ ನಾಲ್ಕರಷ್ಟಿದೆ. ಭಾರತದಲ್ಲಿ ಮೇಲಿನ ತುದಿಯಲ್ಲಿರುವ 1% ಕುಟುಂಬಗಳು ಒಟ್ಟು ಖಾಸಗಿ ಸಂಪತ್ತಿನ 62% ಒಡೆತನ ಹೊಂದಿವೆ. ಈ 1% ಕುಟುಂಬಗಳ ಸಂಪತ್ತಿನ ಮೇಲೆ 0.8% ತೆರಿಗೆ ವಿಧಿಸಿದರೆ, ಒಂದು ಸಾರ್ವತ್ರಿಕ, ಹಕ್ಕು ಆಧಾರಿತ ವಿಶ್ರಾಂತಿ ವೇತನ ಒದಗಿಸಲು ಸಾಕಾಗುವಷ್ಟು ಹಣವನ್ನು ಹೊಂದಿಸಿಕೊಳ್ಳಬಹುದು. ಈ ರೀತಿಯಲ್ಲಿ, ಒಂದು ಹಗರಣದಂತಿರುವ ನಾಚಿಕೆಗೇಡಿನ ವಿಶ್ರಾಂತಿ ವೇತನದ ಸಮಸ್ಯೆಯನ್ನು ಕೊನೆಗೊಳಿಸಬಹುದು. ಈ ಸಮಸ್ಯೆ ಕಾಡುತ್ತಲೇ ಉಳಿದಿರುವುದು ಸಂಪನ್ಮೂಲಗಳ ಕೊರತೆಯಿಂದಾಗಿ ಅಲ್ಲ, ಬದಲಿಗೆ, ಶುದ್ಧಾಂಗ ವರ್ಗ-ವಿರೋಧದಿಂದಾಗಿ. ಏಕೆಂದರೆ, ಸಂಭಾವ್ಯ ಫಲಾನುಭವಿಗಳ ಬಹು ದೊಡ್ಡ ಭಾಗವು, ಕೆಲಸಗಾರರು, ಕುಲಕಸುಬುದಾರರು, ಕುಶಲಕರ್ಮಿಗಳು, ರೈತರು ಮತ್ತು ಕೃಷಿ ಕೂಲಿಗಾರರಿಂದ ಕೂಡಿದೆ. ●

ತ್ರಿಪುರಾ: ಬಿಜೆಪಿಯ ಹುನ್ನಾರಕ್ಕೆ ತಡೆಯಾಜ್ಞೆ–'ದೇಶೇರ್ ಕಥಾ' ಪ್ರಕಟಣೆ ಪುನರಾರಂಭ

ತ್ರಿಪುರಾದ ಬಿಜೆಪಿ ನೇತೃತ್ವದ ಸರಕಾರದ ಕುತಂತ್ರದಿಂದಾಗಿ ಅಕ್ಟೋಬರ್ 2ರಿಂದ ಪ್ರಕಟಣೆ ನಿಂತಿದ್ದ ರಾಜ್ಯದ ಜನಪ್ರಿಯ ಪ್ರಗತಿಶೀಲ ದೈನಿಕ 'ದೇಶೇರ್ ಕಥಾ' ಅಕ್ಟೋಭರ್11ರಂದು ಮತ್ತೆ ಪ್ರಕಟಣೆ ಆರಂಭಿಸಿದೆ. ಪಶ್ಚಿಮ ತ್ರಿಪುರಾ ಜಿಲ್ಲಾ ಮ್ಯಾಜಿಸ್ಟ್ರೆಟ್(ಡಿಎಂ) ಆದೇಶ ಮತ್ತು ಆರ್‌ಎನ್‌ಐ ನೋಂದಾವಣೆಯನ್ನು ಹಿಂದಕ್ಕೆ ಪಡೆದುದು ಕಾನೂನುಬಾಹಿರ ಎಂದು ಪತ್ರಿಕೆಯನ್ನು ಪ್ರಕಟಿಸುವ ಟ್ರಸ್ಟ್ ತ್ರಿಪುರಾ ಹೈಕೋರ್ಟಿಗೆ ರಿಟ್ ಅರ್ಜಿ ಸಲ್ಲಿಸಿತ್ತು. ಇದನ್ನು ಪರಿಶೀಲಸಿದ ಹೈಕೊರ್ಟ್ ಪಶ್ಚಿಮ ತ್ರಿಪುರಾ ಡಿಎಂ ಆದೇಶಕ್ಕೆ ತಡೆಯಾಜ್ಞೆ ನೀಡಿದೆ.

ಬಿಜೆಪಿ–ಐಪಿಎಫ್‌ಟಿ ಸರಕಾರದ ನಿರ್ದೇಶನದಿಂದ ನಡೆದ ಈ ಕರಾಳ ಘಟನೆಗೆ ದೇಶಾದ್ಯಂತ ಪ್ರತಿಭಟನೆ ವ್ಯಕ್ತವಾಗಿತ್ತು. ಎಡಿಟರ್ಸ್ ಗಿಲ್ಡ್, ಭಾರತದ ಪ್ರೆಸ್ ಕ್ಲಬ್, ಮಹಿಳಾ ಪ್ರೆಸ್ ಕಾರ್ಪ್, ಕೊಲ್ಕತ ಪ್ರೆಸ್ ಕ್ಲಬ್, ಡಲ್ಲಿ ಪತ್ರಕರ್ತರ ಸಂಘ ಮುಂತಾದವು ಇದನ್ನು ಖಂಡಿಸಿದವು.

ಟ್ರಸ್ಟ್‌ನ ವಕೀಲ ಬಿಕಾಶ್ ರಂಜನ್ ಭಟ್ಟಾಚಾರ್ಯ ಪತ್ರಿಕಾಸಮ್ಮೇಳನವನ್ನು ಉದ್ದೇಶಿಸಿ ಮಾತನಾಡುತ್ತ ರಾಜಕೀಯ ಕುತಂತ್ರದಿಂದಾಗಿ ಪಶ್ಚಿಮ ತ್ರಿಪುರಾ ಡಿಎಂ ಪತ್ರಿಕೆಯ ಪ್ರಕಟಣೆ ನಿಲ್ಲಿಸದಿದ್ದರೆ ಪೋಲಿಸ್ ಕಳಿಸುವುದಾಗಿ ಬೆದರಿಸಿದ್ದರು ಎಂದು ಹೇಳಿದರು. ಪತ್ರಿಕೆಯ ಪ್ರಕಟಿಸುವ ಸಂಪಾದಕರು, ಪ್ರಕಾಶಕರು ಇತ್ಯಾದಿ ವಿವರಗಳು ಯಾವುದಾದರೂ ಕಾನೂನು, ಮಾನನಷ್ಟ ಪ್ರಶ್ನೆ ನಿರ್ವಹಣೆಗಾಗಿ ಪ್ರಕಟಿಸಬೇಕಾಗುತ್ತದೆ. ಇದಕ್ಕೂ ಆರ್‌ಎನ್‌ಐ ದಾಖಲೆಗಳಿಗೂ ವ್ಯತ್ಯಾಸವಿದ್ದರೆ, ಅದಕ್ಕೆ ದಂಡ ವಿಧಿಸಬಹುದಷ್ಟೇ, ಅದೂ ಒಬ್ಬ ನ್ಯಾಯಾಧೀಶರು ವಿಚಾರಣೆಯ ನಂತರವೇ ವಿಧಿಸಲು ಸಾಧ್ಯ, ಒಬ್ಬ ಡಿಎಂಗೆ ಆ ಅಧಿಕಾರ ಇಲ್ಲೆಂದು ಭಟ್ಟಾಚಾರ್ಯ ಹೇಳಿದರು.

ರಾಜ್ಯದ ಅಡ್ವೊಕೇಟ್ ಜನರಲ್ ಟ್ರಸ್ಟ್ ದಿಲ್ಲಿಯಲ್ಲಿರುವ ಮೇಲ್ಮನವಿ ಟ್ರಿಬ್ಯೂನಲ್‌ಗೆ ಅರ್ಜಿ ಹಾಕಲಿ ಎಂದು ವಾದಿಸಿದರು. ಅಲ್ಲಿ ಅರ್ಜಿ ಇತ್ಯರ್ಥವಾಗಲು 5–6 ತಿಂಗಳು ಬೇಕಾಗುತ್ತವೆ. ಅಷ್ಟರವರೆಗಾದರೂ ಪತ್ರಿಕೆ ಪ್ರಕಟವಾಗದಿರಲಿ ಎಂಬುದು ಇದರ ಹಿಂದಿದ್ದ ಹುನ್ನಾರ. ಆದರೆ ಹೈಕೋರ್ಟ್ ಮುಖ್ಯ ನ್ಯಾಯಾಧೀಶರು ಅವರ ವದವನ್ನು ಪುಸ್ರಿಸದೆ ತಡೆಯಾಜ್ಞೆ ನೀಡಿ ಪ್ರತಿ–ಅಫಿಡವಿಟ್ ಸಲ್ಲಿಸುವಂತೆ ಅವರಿಗೆ ತಿಳಿಸಿದರು.

ಪಶ್ಚಿಮ ತ್ರಿಪುರಾ ಡಿಎಂ ರಾಜಕೀಯ ಪ್ರಭಾವಕ್ಕೊಳಗಾಗಿ ಈ ಕ್ರಮ ಕೈಗೊಂಡಿದ್ದಾರೆ, ಅವರ ಮೇಲೆ ಕ್ರಮ ಕೈಗೊಳ್ಳಬೇಕು ಎಂದೂ ರಿಟ್‌ಅರ್ಜಿಯಲ್ಲಿ ಕೋರಲಾಗಿದೆ.

ತೆಲಂಗಾಣ: ಬಹುಜನ ಎಡರಂಗದಿಂದ ಮೊದಲ ಪಟ್ಟಿ ಪ್ರಕಟ

ತೆಲಂಗಾಣದಲ್ಲಿ ವಿಧಾನಸಭೆಯನ್ನು ಅವಧಿಗೆ ಮೊದಲು ವಿಸರ್ಜಿಸಲಾಗಿದ್ದು ಡಿಸೆಂಬರ್ 7ರಂದು ಹೊಸ ವಿಧಾನ ಸಭೆಯ ಆಯ್ಕೆಗೆ ಮತದಾನ ನಡೆಯಲಿದೆ. ಸಿಪಿಐ (ಎಂ) ಈಗಾಗಲೇ ಎಡ ಮತ್ತು ಸಾಮಾಜಿಕವಾಗಿ ಪ್ರಗತಿಶೀಲವಾಗಿರುವ ಶಕ್ತಿಗಳ 'ಬಹುಜನ ಎಡರಂಗ'(ಬಿಎಲ್‌ಎಫ್) ರಚಿಸಿಕೊಂಡಿದ್ದು ಇದು ಒಂದು ರಾಜಕೀಯ ರಂಗವಾಗಿ ಚುನಾವಣೆಯಲ್ಲಿ ಸ್ಪರ್ಧಿಸುತ್ತಿದೆ. 27 ಅಭ್ಯರ್ಥಿಗಳ ಅದರ ಮೊದಲ ಪಟ್ಟಿಯನ್ನು ಪ್ರಕಟಿಸಲಾಗಿದೆ. ಇದರಲ್ಲಿ ಸಿಪಿಐ(ಎಂ)ನ 9, ಬಹುಜನ ಎಡಪಕ್ಷದ ಚಿಹ್ನೆಯ ಮೇಲೆ 14, 3 ಎಂಸಿಪಿಐ ಹಾಗೂ ಒಬ್ಬರು ತೆಲಂಗಾಣ ಬಿಎಸ್‌ಪಿಯ ಅಭ್ಯರ್ಥಿಗಳಿದ್ದಾರೆ.

ಈ 27 ಅಭ್ಯರ್ಥಿಗಳಲ್ಲಿ 8 ಪರಿಶಿಷ್ಟ ಜಾತಿಗಳಿಗೆ ಸೇರಿದ್ದರೆ, ಮೂವರು ಪರಿಶಿಷ್ಟ ಬುಡಕಟ್ಟುಗಳಿಗೆ ಸೇರಿದವರು, 13 ಒಬಿಸಿ, ಒಬ್ಬರು ಅಲ್ಪಸಂಖ್ಯಾತ ಮತ್ತು ಇನ್ನಿಬ್ಬರು ಇತರ ಜಾತಿಗಳಿಂದ ಬಂದವರು

ಈ ರಂಗದಲ್ಲಿ ಸಿಪಿಐ(ಎಂ) , ಎಂಬಿಟಿ ಮತ್ತು ಆರ್‌ಸಿಪಿ ಗೆ ಸ್ವಂತ ಚುನಾವಣಾ ಚಿಹ್ನೆಗಳಿದ್ದು, ಉಳಿದ ಪಕ್ಷಗಳು ಬಹುಜನ ಲೆಫ್ಟ್ ಪಾರ್ಟಿ ಎಂದು ಚುನಾವಣಾ ಆಯೋಗದಲ್ಲಿ ನೋಂದಾಯಿಸಿಕೊಂಡು ಅದಕ್ಕೆ ನೀಡಿರುವ ನೊಗ ಹೊತ್ತಿರುವ ರೈತ ಚಿಹ್ನೆಯ ಮೇಲ ಸ್ಪರ್ಧಿಸುತ್ತಿವೆ.

ಚುನಾವಣೆಗೆ ಪೂರ್ವಭಾವಿಯಾಗಿ ಸಿಪಿಐ(ಎಂ) ತೆಲಂಗಾಣ ರಾಜ್ಯಸಮಿತಿಯ ವಿಸ್ತೃತ ಸಭೆ ಹೈದರಾಬಾದಿನಲ್ಲಿ ಅಕ್ಟೋಬರ್ 10ರಂದು ನಡೆದಿದೆ. ಇದನ್ನು ಉದ್ದೇಶಿಸಿ ಮಾತನಾಡುತ್ತ ಪೊಲಿಟ್‌ಬ್ಯುರೊ ಸದಸ್ಯ ಬಿ.ವಿ.ರಾಘವುಲು ಬಿಎಲ್‌ಎಫ್ ರಾಜ್ಯದಲ್ಲಿ ಮಹತ್ವದ ಪಾತ್ರ ವಹಿಸಲಿದೆ, ಅದು ಈ ರಾಜ್ಯದಲ್ಲಿ ಒಂದು ಪರ್ಯಾಯ ರಾಜಕೀಯ ಶಕ್ತಿಯಾಗಿ ಮೂಡಿ ಬರಲಿದೆ ಎಂದರು. ಬಿಜೆಪಿಯನ್ನು ಸೋಲಿಸುವುದು ಪಕ್ಷದ ಮುಖ್ಯ ಗುರಿ, ಅದಕ್ಕಾಗಿ ಯಾವ ತ್ಯಾಗಕ್ಕೂ ಪಕ್ಷ ಸಿದ್ಧವಾಗಿದೆ ಎಂದು ಅವರು ಹೇಳಿದರು.



ರಾಜ್ಯ ಕಾರ್ಯದರ್ಶಿ ತಮ್ಮಿನೇನಿಯವರು ಮಾತನಾಡುತ್ತ ಮುಂಬರುವ ಚುನಾವಣೆಗಳು ಕಾರ್ಪೊರೇಟ್‌ಗಳು ಮತ್ತು ಜನಸಾಮಾನ್ಯರ ನಡುವಿನ, ಹಣಬಲ ಮತ್ತು ಜನಗಳ ಶಕ್ತಿಯ ನಡುವಿನ ಹೋರಾಟ ಎಂದರು.

ರಾಜ್ಯದಲ್ಲಿ ಚುನಾವಣಾ ರಂಗದಲ್ಲಿ ಟಿಆರ್‌ಎಸ್, ಬಿಜೆಪಿ, ಕಾಂಗ್ರೆಸ್ ನೇತೃತ್ವದ ರಂಗ ಮತ್ತು ಬಿಎಲ್‌ಎಫ್ ನಡುವೆ ಚತುಷ್ಕೋಣ ಸ್ಪರ್ಧೆಯಿದೆ, ಕಾಂಗ್ರೆಸ್ ರಂಗದ ಬಳಿ ಪರ್ಯಾಯ ಅಜೆಂಡಾ ಮುಂದಿಡುವ ಸಾಮರ್ಥ್ಯ ಇದೆಯೇ ಎಂದು ಅವರು ಪ್ರಶ್ನಿಸಿದರು.

ರಾಜಸ್ಥಾನದಲ್ಲಿ ಎಡ ಮತ್ತು ಪ್ರಜಾಪ್ರಭುತ್ವವಾದಿ ಪಕ್ಷಗಳ 'ರಾಜಸ್ಥಾನ್ ಲೋಕತಾಂತ್ರಿಕ್ ಮೋರ್ಚಾ'

ರಾಜಸ್ಥಾನದಲ್ಲಿ ಡಿಸೆಂಬರ್ 7 ರಂದು ಮುಂದಿನ ವಿಧಾನಸಭೆಯನ್ನು ಆಯ್ಕೆ ಮಾಡಲು ಮತದಾನ ನಡೆಯಲಿದೆ. ಇದರಲ್ಲಿ ಸಿಪಿಐ, ಸಿಪಿಐ(ಎಂ), ಸಿಪಿಐ(ಎಂಎಲ್), ಜೆಡಿ(ಎಸ್), ಎಸ್‌ಪಿ, ಲೋಕದಳ ಮತ್ತು ಎಂಸಿಪಿಐ(ಯು) 'ರಾಜಸ್ಥಾನ್ ಲೋಕತಾಂತ್ರಿಕ್ ಮೋರ್ಚಾ' ರಚಿಸಿಕೊಂಡು ಸ್ಪರ್ಧಿಸಲು ನಿರ್ಧರಿಸಿವೆ. ಈ ಮೋರ್ಚಾ ನಾಯಕರನ್ನು ಬದಲಿಸಲಿಕ್ಕಲ್ಲ, ರೈತರು, ಕಾರ್ಮಿಕರು, ಮಹಿಳೆಯರು, ವಿದ್ಯಾರ್ಥಿಗಳು–ಯುವಜನರು, ಭೂಹೀನರು, ಮಧ್ಯಮ ವರ್ಗಗಳವರು, ದಮನಕ್ಕೊಳಗಾದ ಜನವಿಭಾಗಗಳ ಪರವಾಗಿ ಧೋರಣೆಗಳನ್ನು ಬದಲಿಸುವುದಕ್ಕಾಗಿ ಎಂದು ಘೋಷಿಸಿಕೊಂಡಿದೆ.

ಈ ಮೋರ್ಚಾದ ಕಾರ್ಯಕರ್ತರು ಜನಗಳ ಬದುಕಿನ ಪ್ರಶ್ನೆಗಳನ್ನು ಜಂಟಿ ಹೋರಾಟಗಳನ್ನು ನಡೆಸುವುದರೊಮದಿಗೆ ರಾಜ್ಯದ ಮೂಲೆ–ಮೂಲೆಗಳಲ್ಲಿ ಜನಗಳ ನಡುವೆ ಸೌಹಾರ್ದ ಮತ್ತು ಸೋದರತ್ವದ ಸಂದೇಶ ಹರಡುತ್ತಿದ್ದಾರೆ. ಜನಗಳ ಐಕ್ಯತೆಯನ್ನು ಮುರಿಯುವ, ಮತ್ತು ಸಮ್ಮಿಶ್ರ ಸಂಸ್ಕೃತಿಯನ್ನು ಧ್ವಂಸ ಮಾಡುವ ಬಿಜೆಪಿಯನ್ನು ಸೋಲಿಸಲು ಇದು ಶ್ರಮಿಸುತ್ತದೆ. ಕಾಂಗ್ರೆಸ್ ಮತ್ತು ಬಿಜೆಪಿ ನಡುವೆ ಧೋರಣೆಗಲಲ್ಲಿ ವ್ಯತ್ಯಾಸಗಳೇನಿಲ್ಲ. ಆದ್ದರಿಂದ ಮುಂಬರುವ ಚುನಾವಣೆಗಳಲ್ಲಿ ಈ ಮೋರ್ಚಾದ ಅಭ್ಯರ್ಥಿಗಳಿಗೆ ಮತ ನೀಡಬೇಕು ಎಂದು ಇತ್ತೀಚೆಗೆ ಜೈಪುರದಲ್ಲಿ ನಡೆದ ಇದರ ಸಮ್ಮೇಳನ ರಾಜಸ್ಥಾನದ ಮತದಾರರನ್ನು ವಿನಂತಿಸಿಕೊಂಡಿದೆ.

ಈ ಸಮ್ಮೇಳನವನ್ನು ಮಾಜಿ ಪ್ರಧಾನ ಮಂತ್ರಿ ಮತ್ತು ಜೆಡಿ(ಎಸ್)ನ ಹಿರಿಯ ಮುಖಂಡ ಹೆಚ್.ಡಿ.ದೇವೇಗೌಡ ಉದ್ಘಾಟಿಸಿದರು. ಅಂಗಪಕ್ಷಗಳ ರಾಷ್ಟ್ರೀಯ ಮುಖಂಡರಾದ ಹನ್ನನ್ ಮೊಲ್ಲ(ಸಿಪಿಐ–ಎಂ), ದಾನಿಷ್ ಅಲಿ(ಜೆಡಿ–ಎಸ್), ಅತುಲ್ ಅಂಜನ್(ಸಿಪಿಐ) ಮೊಯ್ಮದ್ ಸಲೀಂ(ಸಿಪಿಐ–ಎಂಎಲ್), ಮಹೇಂದ್ರ ಪ್ರತಾಪ್ ಸಿಂಗ್(ಲೋಕದಳ) ಮತ್ತು ಪಂಡಿತ್ ರಾಂಕಿಶನ್ (ಎಸ್‌ಪಿ) ಇದರಲ್ಲಿ ಭಾಗವಹಿಸಿದರು.

ಛತ್ತೀಸ್‌ಗಡದಲ್ಲಿ ಉದ್ಘಾಟನೆ, ಶಂಕುಸ್ಥಾಪನೆ, ಭೂಮಿಪೂಜೆಗಳ ಧಾವಂತ

ಕಳೆದ 15 ವರ್ಷಗಳಿಂದ ಆಡಳಿತ ಮಾಡುತ್ತಿರುವ ಬಿಜೆಪಿಯ ಮುಖ್ಯಮಂತ್ರಿ, ಇತರ ಮಂತ್ರಿಗಳು ಮತ್ತು ಶಾಸಕರಿಗೆ ಅಕ್ಟೋಬರ್ 6 ಬಹಳ ಓಡಾಟದ ದಿನಗಳು. ಈ 15 ವರ್ಷಗಳಲ್ಲಿ ಮಂತ್ರಿಮಂಡಳ ಒಂದೇ ವಾರದಲ್ಲಿ ಮೂರು ಬಾರಿ ಸಭೆ ಸೇರಿತ್ತು. ನಂತರ ರಾಜ್ಯದಲ್ಲೆಲ್ಲ ಬಿಜೆಪಿ ಮಂತ್ರಿ–ಶಾಸಕರುಗಳ ಓಡಾಟ–ಪರದಾಟ, ಚುನಾವಣಾ ಘೋಷಣೆಯ ಮೊದಲು ಸಾಲು–ಸಾಲು ಉದ್ಘಾಟನೆಗಳಿಗೆ.

ಸಾರ್ವಜನಿಕ ಕಾಮಗಾರಿಗಳ ಮಂತ್ರಿ ರಾಜೇಶ ಮೂಣತ್ ರಾಜಧಾನಿ ರಾಯಪುರದಲ್ಲಿ ಅರ್ಧಂಬರ್ಧ ಸಿದ್ಧವಾದ ರಸ್ತೆಗಳ, ಓವರ್ ಬ್ರಿಜ್‌ಗಳ, ಅಂಡರ್ ಬ್ರಿಜ್‌ಗಳ ಉದ್ಘಾಟನೆಗೆ ದೌಡಾಯಿಸಿದರೆ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಮಂತ್ರಿ ರಮಶೀಲಾ ಸಾಹು ಇನ್ನೂ ಪೂರ್ಣಗೊಳ್ಳದಿರುವ ರೈಲ್ವೆ ಓವರ್ ಬ್ರಿಜ್ ಉದ್ಘಾಟನೆಗೆ ಓಡಿದರು.

ಮುಖ್ಯಮಂತ್ರಿ ರಮಣ್ ಸಿಂಗ್, ಕೇಂದ್ರ ರೈ ಲು ಮಂತ್ರಿ ಪೀಯೂಷ್ ಗೋಯಲ್ ಜತೆಗೆ 6000 ಕೋಟಿ ರೂ.ಗಳ ರೈಲ್ವೆ ಪ್ರಾಜೆಕ್ಟ್ ಗಳಿಗೆ ಅಡಿಗಲ್ಲುಗಳನ್ನು ಹಾಕಲು ದೌಡಾಯಿಸಿದರು. ಕೋರ್ಬಾದಲ್ಲಿ ನಾಲ್ಕುವರ್ಷಗಳ ನಂತರ ನೆನಪಾದ ಹಸ್ದೇವ್ ಎಕ್ಸ್‌ಪ್ರೆಸ್‌ಗೆ ಸಂಸದ–ಶಾಸಕರು ಹಸಿರು ಬಾವುಟ ತೋರಿಸಿದರು. ಒಂದೆಡೆಯಲ್ಲಿ ರಾಯಪುರದಲ್ಲಿ ಫುಟ್ ಬಾಲ್ ಸ್ಟೇಡಿಯಂ ಭೂಮಿಪೂಜೆ, ಸುಕ್ಮಾದಲ್ಲಿ ಪರಿಶಿಷ್ಟ ಬುಡಕಟ್ಟುಗಳ ಮಂತ್ರಿ ಜುಎಲ್ ಉರಾಂವ್ ನಿರ್ಮಾಣ ಕಾರ್ಯಗಳ ಶಿಲಾನ್ಯಾಸ.

ಕಳೆದ ಕೆಲವು ದಿನಗಳು ಆಳುವ ಪಕ್ಷದ ಮಂತ್ರಿ–ಶಾಸಕರುಗಳು ಎಲ್ಲೆಲ್ಲಿ ಉದ್ಘಾಟನೆ, ಸಂಕುಸ್ಥಾಪನೆ, ಭೂಮಿಪೂಜೆಗಳಿಗೆ ಅವಕಾಶವಿತ್ತೋ ಅಲ್ಲೆಲ್ಲ ದೌಡಾಯಿಸಿದ ದಿನಗಳು.



ಸಿಪಿಐ(ಎಂ) ಕೇಂದ್ರ ಸಮಿತಿ ಹೇಳಿಕೆ

ಪುಟ 2ರಿಂದ

ನಮ್ಮ ದೇಶದ ಭದ್ರತೆಯನ್ನು ಶಿಥಿಲಗೊಳಿಸಲಾಗಿದೆ. ಇದು ರಕ್ಷಣಾ ಉತ್ಪಾದನೆಯ ದೊಡ್ಡ ಪ್ರಮಾಣದ ಖಾಸಗೀಕರಣಕ್ಕೆಕೂಡ ಹಾದಿ ಮಾಡಿಕೊಟ್ಟಿದೆ. ದು ದೇಶದ ಭದ್ರತೆಯ ಆದ್ಯತೆಗಳ ಹಿತಗಳಿಗೆ ಹೊರತಾಗಿರುವಂತದ್ದು ಎಂದು ಸಿಪಿಐ(ಎಂ) ಕೇಂದ್ರ ಸಮಿತಿ ಅಭಿಪ್ರಾಯ ಪಟ್ಟಿದೆ.

ಈ ಸರಕಾರ ಚುನಾವಣಾ ಬಾಂಡುಗಳ ಬದಲಾವಣೆಯ ಮೂಲಕ ರಾಜಕೀಯ ಭ್ರಷ್ಟಾಚಾರವನ್ನು ಸಾಂಸ್ಥೀಕರಿಸಿರುವುದರಿಂದ ಇಂತಹ ಚಮಚಾ ಬಂಡವಾಳಶಾಹಿ ಆಳುವ ಪಕ್ಷಕ್ಕೆ ನಿಧಿಗಳನ್ನು ಹರಿಸುವ ಕೊಳಾಯಿಯಾಗುತ್ತಿದೆ, ಈ ಬಗ್ಗೆ ಯಾರೂ ಪ್ರಶ್ನೆ ಕೇಳುವಂತಿಲ್ಲ, ಯಾರಿಗೂ ಉತ್ತರ ಕೊಡಬೇಕಾಗಿಲ್ಲ ಎಂದು ಕೇಂದ್ರ ಸಮಿತಿ ಈ ರಾಜಕೀಯ ಭ್ರಷ್ಟಾಚಾರದ ಸಾಂಸ್ಥೀಕರಣವನ್ನು ವರ್ಣಿಸಿದೆ.

ಜಮ್ಮು ಮತ್ತು ಕಾಶ್ಮೀರ–ದೇಶಾದ್ಯಂತ ಕೋಮುಧ್ರುವೀಕರಣಕ್ಕಾಗಿ:

ಪ್ರಮುಖ ಪಕ್ಷಗಳಾದ ನ್ಯಾಶನಲ್ ಕಾನ್ಫರೆನ್ಸ್, ಪಿಡಿಪಿ ಮತ್ತು ಸಿಪಿಐ(ಎಂ) ಜಮ್ಮು ಮತ್ತು ಕಾಶ್ಮೀರದಲ್ಲಿ ಸ್ಥಳೀಯ ಚುನಾವಣೆಗಳನ್ನು ಬಹಿಷ್ಕರಿಸಿದರೂ ರಾಜ್ಯಪಾಲರು ಮತದಾನ ನಡೆಸಿಯೇ ಬಿಟ್ಟಿದ್ದಾರೆ. ಈ ಮತದಾನದ ಮೊದಲೇ ಈ ಚುನಾವಣೆ ಇಬ್ಬರು ನ್ಯಾಶನಲ್ ಕಾನ್ಫರೆನ್ಸ್ ಕಾರ್ಯಕರ್ತರ ಜೀವಗಳನ್ನು ಆಹುತಿ ತೆಗೆದುಕೊಂಡಿದೆ.

ಸಂವಿಧಾನದ ಕಲಮು 370 ಮತ್ತು ಜಮ್ಮು ಮತ್ತು ಕಾಶ್ಮೀರದ ಸ್ವಾಯತ್ತತೆಯ ಬೆನ್ನೆಲುಬಾದ ಸಂವಿಧಾನದ ಸೆಕ್ಷನ್ 35 ಎ ನ್ನು ರದ್ದು ಮಾಡುವುದನ್ನು ಕುರಿತಂತೆ ಸುಪ್ರಿಂ ಕೋರ್ಟಿನ ವಿಚಾರಣೆಗೆ ಒಳಗಾಗಿರುವ ಅರ್ಜಿಯಲ್ಲಿ ಸಿಪಿಐ(ಎಂ) ತನ್ನ ಶಾಸಕ ಮಹಮ್ಮದ್ ಯೂಸುಫ್ ತರಿಗಾಮಿ ಮೂಲಕ ಮಧ್ಯಪ್ರವೇಶ ಅರ್ಜಿ ಹಾಕಿದೆ.

ಮೋದಿ ಸರಕಾರ ಜಮ್ಮು ಮತ್ತು ಕಾಶ್ಮೀರದಲ್ಲಿನ ಗಲಭೆಗಳನ್ನು ಬಿಜೆಪಿ ದೇಶಾದ್ಯಂತ ಕೋಮುವಾದಿ ಧ್ರುವೀಕರಣದ ತನ್ನ ಪ್ರಚಾರಕ್ಕೆ ಬಳಸಿಕೊಳ್ಳುತ್ತಿದೆ ಎಂದು ಕೇಂದ್ರ ಸಮಿತಿ ಅಭಿಪ್ರಾಯ ಪಟ್ಟಿದೆ.

'ಅಟಲ್ ವಿಕಾಸ ಯಾತ್ರ'ಯಲ್ಲಿ 'ಅಟಲ್' ಇಲ್ಲ!

ಅಕ್ಟೋಬರ್ 3, ಬಹಳ ದಿನಗಳ ನಂತರ ಛತ್ತೀಸ್‌ಗಡ್‌ನಲ್ಲಿ ಇತ್ತೀಚೆಗೆ ನಿಧನರಾದ ಮಾಜಿ ಪ್ರಧಾನ ಮಂತ್ರಿ ಅಟಲ್ ಬಿಹಾರಿ ವಾಜಪೇಯಿಯವರನ್ನು ನೆನಪಿಸಿಕೊಳ್ಳಲಾಯಿತು. ಅವರ ಹೆಸರಿನ 'ಅಟಲ್ ಯಾತ್ರಾ' ಏರ್ಪಡಿಸಲಾಗಿತ್ತು. ವಾಜಪೇಯಿಯವರು ಮಧ್ಯಪ್ರದೇಶದವರು, ಛತ್ತೀಸ್‌ಗಡ್ ಈ ಮೊದಲು ಆ ರಾಜ್ಯದ ಭಾಗವಾಗಿತ್ತು ಎಂಬುದನ್ನು ಇಲ್ಲಿ ನೆನಪಿಸಿಕೊಳ್ಳಬಹುದು. ಈ ಯಾತ್ರೆಯ ಪ್ರಚಾರಕ್ಕಾಗಿ ಪತ್ರಿಕೆಗಳಲ್ಲಿ ಹಲವಾರು ಪುಟಗಳ ಜಾಹೀರಾತುಗಳನ್ನು ಪ್ರಕಟಿಸಲಾಯಿತು. ಈ ಪ್ರಚಾರ ಪೋಸ್ಟರುಗಳಲ್ಲಾಗಲೀ, ಆಹ್ವಾನ ಪತ್ರದಲ್ಲಾಗಲ್ಲಿ ವಾಜಪೇಯಿಯವರ ಚಿತ್ರವೇ ಕಾಣೆಯಾಗಿತ್ತು. ಪ್ರಧಾನ ಮಂತ್ರಿಗಳು, ರಾಜ್ಯದ ಮುಖ್ಯಮಂತ್ರಿಗಳು ಮತ್ತು ಆಳುವ ಪಕ್ಷದ ಅಧ್ಯಕ್ಷರಾದ ಅಮಿತ್ ಷಹಾ ಫೋಟೋಗಳೇ ರಾರಾಜಿಸುತ್ತಿದ್ದವು

ವಾಜಪೇಯಿಯವರು ಎಲ್ಲರ ಮನದಲ್ಲಿದ್ದಾರೆ, ಆದ್ದರಿಂದ ಅವರ ಬಗ್ಗೆ ಪ್ರತ್ಯೇಕವಾಗಿ ಚಿತ್ರಗಳ ಅಗತ್ಯವೇನಿಲ್ಲ ಎಂದು ಒಬ್ಬ ಬಿಜೆಪಿ ಮುಖಂಡರು ಇದನ್ನು ಸಮರ್ಥಿಸಿಕೊಳ್ಳಲೂ ಪ್ರಯತ್ನಿಸಿದರು. ಅಂದರೆ ಪ್ರಧಾನ ಮಂತ್ರಿಗಳು, ರಾಜ್ಯದ ಮುಖ್ಯ ಮಂತ್ರಿಗಳು ಮತ್ತು ಪಕ್ಷದ ಅಧ್ಯಕ್ಷರು ಜನಗಳ ಮನದಲ್ಲಿ ಇಲ್ಲ ಎಂದರ್ಥವೇ ಎಂದೊಬ್ಬ ಪತ್ರಕರ್ತರು ಪ್ರಶ್ನೆ ಎತ್ತಿದ್ದಾರೆ.



ಬ್ರೆಜಿಲ್ : ಉಗ್ರ ಬಲ–ಪಂಥ 2ನೇ ಸುತ್ತಲ್ಲೂ ಗೆಲ್ಲುತ್ತಾ?

ಅಕ್ಟೋಬರ್ 7 ರಂದು ಬ್ರೆಜಿಲ್ ನ ಅಧ್ಯಕ್ಷೀಯ ಚುನಾವಣೆಯ ಮೊದಲ ಸುತ್ತಿನ ಚುನಾವಣೆಯಲ್ಲಿ ಫ್ಯಾಸಿಸ್ಟ್–ಧೋರಣೆಯ ಉಗ್ರ ಬಲ–ಪಂಥೀಯ "ಸೋಷಿಯಲ್ ಲಿಬರಲ್ ಪಕ್ಷದ (ಪಿ.ಸಿ.ಎಲ್) ಅಭ್ಯರ್ಥಿ ಹಾಗೂ ಮಾಜಿ ಮಿಲಿಟರಿ ಅಧಿಕಾರಿ ಬೊಲ್ಸೊನಾರೊ ರವರು 4.92 ಕೋಟಿ ಅಂದರೆ ಶೇ. 46.03 ರಷ್ಟು ಮತ ಪಡೆದು ಮೊದಲ ಸ್ಥಾನ ಪಡೆದಿದ್ದಾರೆ. ಆದರೆ ಗೆಲ್ಲಲು ಬೇಕಾಗಿರುವ ಶೇ. 50 ರಷ್ಟು ಮತಗಳನ್ನು ಗಳಿಸದ ಕಾರಣ ಎರಡನೇ ಸುತ್ತಿನ ಮತದಾನದ ಪ್ರಕ್ರಿಯೆಯಲ್ಲಿ ಇದೇ ಅಕ್ಟೋಬರ್ 28ರಂದು ಪಾಲ್ಗೊಳ್ಳುತ್ತಾರೆ. ಇವರ ಸಮೀಪದ ಸ್ಪರ್ಧಿಯಾಗಿದ್ದ ವರ್ಕರ್ಸ್ ಪಾರ್ಟಿ (ಪಿ.ಟಿ) ಮತ್ತು ಬ್ರೆಜಿಲ್ ಕಮ್ಯೂನಿಸ್ಟ್ ಪಕ್ಷ (ಪಿಸಿಡಿಒಬಿ) ಮೈತ್ರಿಕೂಟದ ಅಭ್ಯರ್ಥಿಯಾಗಿದ್ದ ಫೆರ್ನಾಂಡೊ ಹಡ್ಡಾದ್ ರವರು 3.13 ಕೋಟಿ ಅಂದರೆ ಶೇ. 29.28 ರಷ್ಟು ಮತ ಪಡೆದು ಎರಡನೇ ಸ್ಥಾನ ದಲ್ಲಿದ್ದು ಎರಡನೇ ಸುತ್ತಿನ ಮತದಾನದಲ್ಲಿ ಬೊಲ್ಸೊನಾರೊ ರವರ ಜತೆ ಸೆಣಸಲಿದ್ದಾರೆ. ಡೆಮಾಕ್ರಟಿಕ್ ಲೇಬರ್ ಪಕ್ಷದ ಅಭ್ಯರ್ಥಿಯಾಗಿದ್ದ ಕೈರೊ ಗೋಮ್ಸ್ ರವರು ಶೇ.12.5 ರಷ್ಟು ಮತ ಪಡೆದು, ಎರಡನೇ ಸುತ್ತಿನಲ್ಲಿ ಪೆರ್ನಾಂಡೊ ರಿಗೆ ಬೆಂಬಲಿಸುವುದಾಗಿ ಹೇಳಿದ್ದಾರೆ, ಗೆರ್ಲಾಡೊ ಅಲ್ಕಾ ಮಿನ್ (ಪಿ.ಎಸ್.ಡಿ.ಬಿ.), ಶೇ.5 ರಷ್ಟು ಮತ ಪಡೆದ್ದಿದ್ದು ಇವರು ಕೂಡ ಎರಡನೇ ಸುತ್ತಿನಲ್ಲಿ ಪೆರ್ನಾಂಡೊಗೆ ಬೆಂಬಲಿಸುವ ಇರಾದೆ ವ್ಯಕ್ತಪಡಿಸಿದ್ದಾರೆ. ಉಳಿದಂತೆ ಎಡ–ನಡುಪಂಥೀಯ ಮತ್ತು ನಡುಪಂಥೀಯ ಪಕ್ಷಗಳು ಒಟ್ಟಾರೆಯಾಗಿ ಶೇ 1.2 ರಷ್ಟು ಮಾತ್ರ ಪಡೆದು ತುಂಬಾ ಹಿನ್ನಡೆ ಅನುಭವಿಸಿವೆ. ಇವರೆಲ್ಲಾ ಎರಡನೇ ಸುತ್ತಿನಲ್ಲಿ ಯಾರ ಪರ ವಾಲುತ್ತಾರೊ ಕಾದು ನೋಡಬೇಕು. ಒಂದು ಕಾಲದಲ್ಲಿ ಅತ್ಯಂತ ಶಕ್ತಿಶಾಲಿಯಾಗಿದ್ದ ಬ್ರೆಜಿಲಿಯನ್ ಡೆಮಾಕ್ರಟಿಕ್ ಮೂವ್ಮೆಂಟ್ ಪಕ್ಷ (ಎಂ.ಡಿ.ಬಿ)ಯ ಹಾಲಿ ಅಧ್ಯಕ್ಷ ಮೈಕೆಲ್ ಟೆಮೆರ್ ರವರ ಪಕ್ಷ ಕೇವಲ ಶೇ. 1.2 ರಷ್ಟು ಪಡೆದಿದೆ. ಅದರ ಆಡಳಿತದಲ್ಲಿ ಎಷ್ಟು ಭ್ರಷ್ಟಾಚಾರ ತುಂಬಿತ್ತು ಎಂಬುದಕ್ಕೆ ಅದು ಪಡೆದ ಮತಗಳೇ ಸಾಕ್ಷಿಯಾಗಿದೆ. ಉಗ್ರ ಬಲಪಂಥ ಹೆಚ್ಚುವರಿ ಗೆದ್ದುಕೊಂಡ ಮತಗಳಿಗಿಂತ ಹೆಚ್ಚು ಮತಗಳನ್ನು ಬಲಪಂಥೀಯ ಪಕ್ಷಗಳು ಕಳೆದುಕೊಂಡಿವೆ.

2014 ರ ಚುನಾವಣೆಯಲ್ಲಿ ಗೆದ್ದು ಆಡಳಿತ ನಡೆಸುತ್ತಿದ್ದ ದಿಲ್ಮಾ ರೌಸೆಫ್ ಸರಕಾರವನ್ನು ಬೀಳಿಸಿ, 2016 ರಲ್ಲಿ ಕ್ಷಿಪ್ರ ದಂಗೆಯ ಮೂಲಕ ಅಧಿಕಾರದ ಚುಕ್ಕಾಣಿ ಹಿಡಿದ ಮೈಕೆಲ್ ಟೆಮೆರ್ ಸರಕಾರವು ಭ್ರಷ್ಟಾಚಾರದ ಕೂಪವಾಗಿತ್ತು. ಅವರ ಸರಕಾರದ ವಿರುದ್ಧ ದೊಡ್ಡ ಪ್ರಮಾಣದಲ್ಲಿ ಕಾರ್ಮಿಕರ ಹೋರಾಟ ಗಳು ನಡೆದಿದ್ದವು, ವರ್ಕರ್ಸ್ ಪಕ್ಷದ ಬ್ರೆಜಿಲ್‌ನ ಮಾಜಿ ಅಧ್ಯಕ್ಷ ಲೂಲಾರನ್ನು ಭ್ರಷ್ಟಾಚಾರದ ಸುಳ್ಳು ಆರೋಪದ ಮೇಲೆ ಸೆರೆಮನೆಗೆ ತಳ್ಳಲಾಯಿತು. ಇದರ ವಿರುದ್ಧವೂ ಹೋರಾಟಗಳು ನಿರಂತರವಾಗಿ ನಡೆಯುತ್ತಲೇ ಇದ್ದವು. ಕಳೆದ ಸೆಪ್ಟೆಂಬರ್ ನಲ್ಲಿ ವಿಶ್ವ ಮಾನವ ಹಕ್ಕುಗಳ ಮಂಡಳಿ ಮುಖ್ಯಸ್ಥರು ಲೂಲಾರವರಿಗೆ ಪ್ರಜಾಪ್ರಭುತ್ವದಲ್ಲಿ ಅಂದರೆ ಅಧ್ಯಕ್ಷೀಯ ಚುನಾವಣೆಯಲ್ಲಿ ಸ್ಪರ್ಧಿಸಲು ಅವಕಾಶ ಕೊಡಬೇಕೆಂದು ಹೇಳಿದ್ದರು. ಆದಾಗ್ಯೂ, ಅಲ್ಲಿನ ಸುಪ್ರೀಂ ಫೆಡೆರಲ್ ಕೋರ್ಟ್ ಅವರಿಗೆ ಸ್ಪರ್ಧಿಸಲು ಅವಕಾಶ ನಿರಾಕರಿಸಿತು. ಆ ನಂತರ ಲೂಲಾ ರವರ ಸೂಚಿಸಿದ ಪೆರ್ನಾಂಡೊ ಹಡ್ಡಾದ್ ರನ್ನು ಅಧ್ಯಕ್ಷ ಸ್ಥಾನಕ್ಕೆ ಹಾಗೂ ಉಪಾಧ್ಯಕ್ಷ ಸ್ಥಾನಕ್ಕೆ ಕಮ್ಯೂನಿಸ್ಟ್ ಪಕ್ಷದ ಮ್ಯಾನ್ಯುಯೆಲ್ ಡಿ ಅವಿಲಾ ರನ್ನು ಕಣಕ್ಕೆ ಇಳಿಸಲಾಯಿತು. ಹಡ್ಡಾದ್ ರಾಜಧಾನಿಯ ಮೇಯರ್ ಆಗಿದ್ದರೂ ಲೂಲಾ ರೀತಿಯಲ್ಲಿ ಜನಪ್ರಿಯ ಅಲ್ಲ. ಲೂಲಾ ಬೆಂಬಲಿತನಾಗಿದ್ದರೂ, ಲೂಲಾಗೆ ಪ್ರಚಾರಕ್ಕೆ ಅವಕಾಶ ಒಟ್ಟು ಪ್ರಚಾರಕ್ಕೆ ಕಡಿಮೆ ಸಮಯ ಇದ್ದಿದ್ದು, ಅದನ್ನು ಮತವಾಗಿ ಪರಿವರ್ತಿಸಲು ಆಗಿಲ್ಲ ಎನ್ನಲಾಗಿದೆ.

ಮೊದಲ ಸುತ್ತಿನಲ್ಲಿ ಉಗ್ರ ಬಲ–ಪಂಥೀಯ ಬೊಲ್ಸೊನಾರೊ ರವರು ಶೇ. 46.03 ರಷ್ಟು ಮತ್ತು ಎಡಪಂಥೀಯ ಫೆರ್ನಾಂಡೊ ಹಡ್ಡಾದ್ ರವರು ಶೇ. 29.28 ರಷ್ಟು ಮತ ಪಡೆದಿದ್ದಾರೆ. ಸುಮಾರು 1.3 ಕೋಟಿ ಜನರು ಮತ ಹಾಕದೆ ಖಾಲಿ (ನಮ್ಮಲಿನ ನೋಟಾ ದಂತೆ ಇರುವ ಆಯ್ಕೆ) ಬಿಟ್ಟು ಹೋಗಿದ್ದಾರೆ. ಅದಲ್ಲದೇ, ಸುಮಾರು 2.99 ಕೋಟಿ ಮತದಾರರು ಮತದಾನಕ್ಕೆ ಗೈರು ಹಾಜರಾಗಿದ್ದಾರೆ. ಇವರೆಲ್ಲರನ್ನು ಎರಡನೇ ಸುತ್ತಿನ ಮತದಾನಕ್ಕೆ ಬರುವಂತೆ ಪ್ರಯತ್ನ ಮಾಡಿದರೆ, ಜತೆಗೆ ಬೊಲ್ಸೊನಾರೊರನ್ನು ಬಿಟ್ಟು ಉಳಿದವರು ಫರ್ನಾಂಡೊ ಹಡ್ಡಾದ್ ರಿಗೆ ಬೆಂಬಲ ಸೂಚಿಸಿದರೆ, ಉಗ್ರ ಬಲಪಂಥೀಯ ಬೊಲ್ಸೊನಾರೊ ರನ್ನು ಹಿಮ್ಮೆಟಿಸಲು ಸಾಧ್ಯವಿದೆ. ಎಡಪಂಥೀಯ ಪೆರ್ನಾಂಡೊರವರು, ಆ ನಿಟ್ಟಿನಲ್ಲಿ ಆಶಾಭಾವನೆಯೊಂದಿಗೆ ಪ್ರಚಾರ ಕೈಗೊಳ್ಳುವ ಸಾಧ್ಯತೆಯಿದೆ.

ಫೆರ್ನಾಂಡೊ ಹಡ್ಡಾದ್ ಎರಡನೆ ಸುತ್ತಿನಲ್ಲಿ ಗೆಲ್ಲುವ ಸಾಧ್ಯತೆ ಎಷ್ಟು?

ಲ್ಯಾಟಿನ್ ಅಮೆರಿಕದ ರಾಷ್ಟ ಗಳಲ್ಲಿ ಅತ್ಯಂತ ಪ್ರಭಾವಶಾಲಿ ಆರ್ಥಿಕತೆ ಹೊಂದಿರುವ ಬ್ರೆಜಿಲ್ ದೇಶವು ಪ್ರಪಂಚದಲ್ಲಿಯೇ 5ನೇ ಅತ್ಯಂತ ಹೆಚ್ಚು ಜನಸಂಖ್ಯೆ ಯನ್ನು ಹೊಂದಿರುವ ದೇಶ. ಇತ್ತೀಚಿನ ವರ್ಷಗಳಲ್ಲಿ ಪ್ರಜಾಪ್ರಭುತ್ವ ದ ಕಗ್ಗೊಲೆ ಇಲ್ಲಿ ತಾಂಡವ ರೂಪತಾಳಿ, ಆಡಳಿತದಲ್ಲಿ ಭ್ರಷ್ಟಾಚಾರ ಮುಗಿಲು ಮುಟ್ಟಿತ್ತು. ಜನರು ಬೇಸತ್ತು ಹೋಗಿದ್ದರು. ಕಾರ್ಮಿಕರು ಮತ್ತು ಮಹಿಳೆಯರು ಸರಕಾರದ ವಿರುದ್ಧ ಭಾರಿ ಹೋರಾಟ ನಡೆಸಿದ್ದರು. ಬೊಲ್ಸೊನಾರೊ ಮಿಲಿಟರಿ ಸರ್ವಾಧಿಕಾರ–ಪರ, ದೈತ್ಯ ಕಂಪನಿ–ಪರ, ಮಹಿಳಾ–ವಿರೋಧಿ, ಕಾರ್ಮಿಕರ ಹಕ್ಕುಗಳ ವಿರೋಧಿ, ವರ್ಣಭೇಧ–ಪರ, ಸಲಿಂಗ–ಭೀತಿ ನೀತಿಗಳ ಆರಾಧಕ. ಇವನ ವಿರುದ್ಧ ಇತ್ತೀಚೆಗೆ ಮಹಿಳೆಯರು ಬೀದಿಗಿಳಿದು ಪ್ರತಿಭಟನೆಯನ್ನೂ ನಡೆಸಿದ್ದಾರೆ. ಅವನ ಗೆಲುವು ಬ್ರೆಜಿಲ್ ಗೂ ಪ್ರಜಾಪ್ರಭುತ್ವಕ್ಕೂ ಒಳ್ಳೆಯದಲ್ಲ ಎಂಬುದು ಹಲವರ ಅಭಿಪ್ರಾಯ. ಆದರೂ ಆತನಿಗೆ ಹೆಚ್ಚು ಕಡಿಮೆ ಅರ್ಧದಷ್ಟು ಮತ ಹೇಗೆ ಬಿತ್ತು ಎಂಬುದು ಯಕ್ಷಪ್ರಶ್ನೆ. ಇದಕ್ಕೆ ಎರಡು ಕಾರಣಗಳನ್ನು ಕೊಡಲಾಗಿದೆ. ಒಂದು ಇತ್ತೀಚಿನ ರಾಜಕೀಯ ಆರ್ಥಿಕ ಬಿಕ್ಕಟ್ಟಿನ ಹಿನ್ನೆಲೆಯಲ್ಲಿ ಅಪರಾಧಗಳ ಸಂಖ್ಯೆ ಏರಿದೆ. ಇಂತಹ ಬಿಕ್ಕಟ್ಟಿನ ಸನ್ನಿವೇಶದಲ್ಲಿ ಕಠಿಣ ಸರ್ವಾಧಿಕಾರಿ–ರೀತಿಯ ಆಡಳಿತ ಹೆಚ್ಚು ಪರಿಣಾಮಕಾರಿ ಎಂದು ಜನ ನಂಬುತ್ತಾರೆ. ಎಡಪಂಥೀಯರಿಗೆ ಮತ ಹಾಕಿದರೆ ದೇಶ ವೆನೆಜುವೇಲಾದಂತೆ ಆಗುತ್ತದೆ ಎಂದೂ ಅಪಪ್ರಚಾರ ಮಾಡಲಾಗಿತ್ತು. ವೆನೆಜುವೇಲಾದ ಜನ–ಪರ ನೀತಿಗಳನ್ನು ಸೋಲಿಸಲು ಅಮೆರಿಕದ ಆರ್ಥಿಕ ದಿಗ್ಬಂಧನ ಅಲ್ಲಿ ಸಾಕಷ್ಟು ಆರ್ಥಿಕ ಸಮಸ್ಯೆ ಸೃಷ್ಟಿಸಿದ್ದು, ಎಡಪಂಥೀಯರು ಗೆದ್ದರೆ ಅದೇ ತರಹದ ಪರಿಸ್ಥಿತಿ ಬ್ರೆಜಿಲಿನಲ್ಲೂ ಬರಬಹುದು ಎಂದು ಮತದಾರರನ್ನು ಹೆದರಿಸಲಾಗಿದೆ. ಈ ಎರಡು ಅಂಶಗಳಿಂದಾಗಿ, ಬೇರೆ ದೇಶಗಳಂತೆ ಉಗ್ರ ಬಲಪಂಥೀಯ ಅಭ್ಯರ್ಥಿಗೆ ಮೊದಲ ಸ್ಥಾನ ದೊರಕಿಸುವಲ್ಲಿ ಕೆಲಸ ಮಾಡಿವೆ ಎನ್ನಲಾಗಿದೆ.

ಜಗದ ಸುತ್ತ

ನಾಗರಾಜ ನಂಜುಂಡಯ್ಯ

ಬ್ರೆಜಿಲಿನ ಒಟ್ಟು ನೊಂದಾಯಿತ ಮತದಾರರು 20.8 ಕೋಟಿ. ಬ್ರೆಜಿಲ್ ದೇಶದ ಚುನಾವಣಾ ಕಾನೂನಿನ ಪ್ರಕಾರ 18 ವಯಸ್ಸಿನಿಂದ 70 ವಯಸ್ಸಿನ ಎಲ್ಲರು ಕಡ್ಡಾಯವಾಗಿ ಮತದಾನ ಮಾಡಲೇ ಬೇಕು. ಆದಾಗ್ಯೂ, ಈ ಭಾರಿ ಲಭ್ಯವಿರುವ ಮಾಹಿತಿಯಂತೆ ಶೇ 79.7 ರಷ್ಟು ಮಾತ್ರ ಮತದಾನವಾಗಿದೆ. ಸುಮಾರು 1.3 ಕೋಟಿ ಜನರು ಮತ ಹಾಕದೆ ಖಾಲಿ (ನಮ್ಮಲಿನ ನೋಟಾ ದಂತೆ ಇರುವ ಆಯ್ಕೆ) ಬಿಟ್ಟು ಹೋಗಿದ್ದಾರೆ. ಅದಲ್ಲದೇ, ಸುಮಾರು 2.99 ಕೋಟಿ ಮತದಾರರು ಮತದಾನಕ್ಕೆ ಗೈರು ಹಾಜರಾಗಿದ್ದಾರೆ. ಇವರೆಲ್ಲರನ್ನು ಎರಡನೇ ಸುತ್ತಿನ ಮತದಾನಕ್ಕೆ ಬರುವಂತೆ ಪ್ರಯತ್ನ ಮಾಡಿದರೆ, ಜತೆಗೆ ಬೊಲ್ಸೊನಾರೊರನ್ನು ಹೊರತು ಪಡಿಸಿ, ಉಳಿದವರು ಫರ್ನಾಂಡೊ ಹಡ್ಡಾದ್ ರಿಗೆ ಬೆಂಬಲ ಸೂಚಿಸಿದರೆ, ಉಗ್ರ ಬಲಪಂಥೀಯ ಬೊಲ್ಸೊನಾರೊ ರನ್ನು ಹಿಮ್ಮೆಟಿಸಲು ಸಾಧ್ಯವಿದೆ ಎಂಬುದು ರಾಜಕೀಯ ವಲಯದ ವಿಶ್ಲೇಷಣೆಯಾಗಿದೆ. ಪೆರ್ನಾಂಡೊರವರು, ಆ ನಿಟ್ಟಿನಲ್ಲಿ ಆಶಾಭಾವನೆಯೊಂದಿಗೆ ಪ್ರಚಾರ ಕೈಗೊಳ್ಳುವ ಸಾಧ್ಯತೆಯಿದೆ.

ಬ್ರೆಜಿಲಿನ ಪಾರ್ಲಿಮೆಂಟಿನ (ಚೇಂಬರ್ ಆಫ್ ಡೆಪ್ಯೂಟೀಸ್) ಕೆಳ ಮನೆಯಲ್ಲಿ 513 ಸದಸ್ಯರಿದ್ದು, ವರ್ಕರ್ಸ್ ಪಾರ್ಟಿ ಅತಿ ದೊಡ್ಡ ಪಕ್ಷ ವಾಗಿ ಹೊರಹೊಮ್ಮಿದ್ದೆ, ಶೇ 11ರಷ್ಟು ಮತ ಪಡೆದು 56 ಸದಸ್ಯರನ್ನು ಹೊಂದಿದೆ. ಆದರೆ 81 ಸದಸ್ಯರಿರುವ ಸೆನೆಟ್ (ಮೇಲ್ ಸದನ) ನಲ್ಲಿ ಕೇವಲ 6 ಸ್ಥಾನಕ್ಕೆ ಕುಸಿದು ಇದ್ದ ಅರ್ಧದಷ್ಟು ಸ್ಥಾನಗಳನ್ನು ಕಳೆದುಕೊಂಡಿದೆ. ಹಾಲಿ ಅಧ್ಯಕ್ಷ ಮೈಕೆಲ್ ಟೆಮೆರ್ ಅವರ ಎಂ.ಡಿ.ಬಿ. ಪಕ್ಷ 11 ಸದಸ್ಯರನ್ನು ಗೆದ್ದುಕೊಂಡು ಸೆನೆಟಿನಲ್ಲಿ ಅತಿ ದೊಡ್ಡ ಪಕ್ಷ ವಾಗಿದೆ. ವರ್ಕರ್ಸ್ ಪಾರ್ಟಿ 3 ಮತ್ತು ಕಮ್ಯುನಿಸ್ಟ್ ಪಕ್ಷ 1 ಪ್ರಮುಖ ಪ್ರಾಂತ್ಯಗಳ ಗವರ್ನರ್ ಹುದ್ದೆಗಳನು ಗೆದ್ದುಕೊಂಡಿವೆ. ಇತರ ಹಲವು ಪ್ರಾಂತ್ಯಗಳ ಗವರ್ನರ್ ಹುದ್ದೆಗಳಿಗೆ ಎರಡನೇ ಸುತ್ತಿನ ಚುನಾವಣೆಗಳೂ ನಡೆಯಲಿವೆ.

ರಾಜಕೀಯ ವಿಶ್ಲೇಷಕರ ಪ್ರಕಾರ ಎರಡನೆಯ ಸುತ್ತಿನಲ್ಲಿ ಬೊಲ್ಸೊನಾರೊ ಗೆದ್ದರೆ, ಬ್ರೆಜಿಲ್ ನ ಸಾಮಾಜಿಕ ಮತ್ತು ರಾಜಕೀಯ ದಿಕ್ಕನ್ನು ಬದಲಾಯಿಸುತ್ತದೆ. ಬೊಲ್ಸೊನಾರೊ ಟ್ರಂಪ್ ರ ನೀತಿಗಳ ಜಾರಿ ಮಾಡುವ ಸಾಧ್ಯತೆ ಹೆಚ್ಚಾಗಿದೆ. ಈ ಹೊಸ ಬೆಳವಣಿಗೆ ಬ್ರೆಜಿಲ್ ನ ಪ್ರಜಾಪ್ರಭುತ್ವ ಮತ್ತು ರಾಷ್ಟ್ರೀಯ ಸಾರ್ವಭೌಮತ್ವದ ಮೇಲೆ ಅಡ್ಡ ಪರಿಣಾಮಗಳನ್ನು ಬೀರುತ್ತದೆ. ಇತಿಹಾಸದ ಉದ್ದಗಲಕ್ಕೂಸಾಧಿಸಿಕೊಂಡು ಬಂದಿದ್ದ ಕಾರ್ಮಿಕರ ಹಕ್ಕುಗಳನ್ನು ಮೊಟಕುಗೊಳಿಸಿ, ಕಾರ್ಮಿಕ ವಿರೋಧಿ ನವ ಉದಾರವಾದ ಜಾರಿ ಮಾಡುವುದು, ಮಾತ್ರವಲ್ಲದೆ, ಎಡಪಂಥೀಯ ಹಾಗೂ ಕಮ್ಯೂನಿಸ್ಟ್ ಪಕ್ಷದ ಬೆಳವಣಿಗೆಗೆ ಕುತ್ತು ತರುತ್ತದೆ. ಜೊತೆಗೆ ಸಮಾಜವಾದಿ ಕ್ಯೂಬಾ, ಬೊಲಿವಾರಿಯನ್ ವೆನೆಜುವೆಲಾ, ಬೊಲಿವಿಯಾ ಮತ್ತು ಉರುಗ್ವೆ ಯಂತಹ ನೆರೆ ಹೊರೆ ರಾಷ್ಟಗಳಿಗೆ ಅಪಾಯದ ಮುನ್ಸೂಚನೆ ಯಾಗುತ್ತದೆ. ಇದರ ಬದಲಿಗೆ ಎರಡನೇ ಸುತ್ತಿನಲ್ಲಿ ವರ್ಕರ್ಸ್ ಪಾರ್ಟಿ ಫರ್ನಾಂಡೊ ಹಡ್ಡಾದ್ ಮತ್ತು ಕಮ್ಯೂನಿಸ್ಟ್ ಪಕ್ಷದ ಮ್ಯಾನ್ಯುಯೆಲ್ ಡಿ.ಅವಿಲಾ ಗೆದ್ದು ಬಂದರೆ ಲ್ಯಾಟಿನ್ ಅಮೆರಿಕಾದ ಎಡಪಂಥೀಯ ಪಕ್ಷಗಳಿಗೆ ಒಂದು ಬಗೆಯ ಟಾನಿಕ್ ಆಗಲಿದೆ. ●



ಕಾಫಿ ಬೆಳೆಗಾರರ ಅಖಿಲ ಭಾರತ ಸಮಾವೇಶ..... ಪುಟ 16 ರಿಂದ

ಮತ್ತು ಬಹುರಾಷ್ಟ್ರೀಯ ಸಂಸ್ಥೆಗಳ ಲೂಟಿಯಿಂದ ತಪ್ಪಿಸಿ ಸಣ್ಣ ಕಾಫಿ ಬೆಳೆಗಾರರ ಹಿತ ರಕ್ಷಣೆಗೆ ಅಗತ್ಯವಾದ ಹಕ್ಕೊತ್ತಾಯಗಳನ್ನು ರೂಪಿಸುವುದು ಈ ಸಮಾವೇಶದ ಉದ್ದೇಶವೆಂದು ಸಂಘಟಕರು ತಿಳಿಸಿದ್ದಾರೆ.

ಇಂತಹ ಮಹತ್ವದ ಐತಿಹಾಸಿಕ ಸಮಾವೇಶವನ್ನು ಅಖಿಲ ಭಾರತ ಕಿಸಾನ್ ಸಭಾದ ಪ್ರಧಾನ ಕಾರ್ಯದರ್ಶಿಗಳಾದ ಶ್ರೀ ಹನನ್ ಮುಲ್ಲಾ ಉದ್ಘಾಟಿಸಲಿದ್ದಾರೆ. ಕಾಫಿ ಬೆಳೆಗಾರರು ಸಮಾವೇಶದಲ್ಲಿ ದೊಡ್ಡ ಸಂಖ್ಯೆಯಲ್ಲಿ ಭಾಗಿಯಾಗುತ್ತಾರೆಂದು ನಿರೀಕ್ಷಿಸಲಾಗಿದೆ.

ಸಮಾವೇಶ ಚರ್ಚಿಸಲಿರುವ ವಿಷಯಗಳು

1. ಡಾ.ಎಂ.ಎಸ್.ಸ್ವಾಮಿನಾಥನ್ ಕೃಷಿ ಆಯೋಗದ ಶಿಫಾರಸ್ಸಿನಂತೆ ಕಾಫಿ ಬೆಳೆಯ ಒಟ್ಟು ಉತ್ಪಾದನಾ ವೆಚ್ಚಕ್ಕೆ ಶೇ 50 ರಷ್ಟು ಲಾಭಾಂಶ ಸೇರಿಸಿದ ಕನಿಷ್ಠ ಬೆಂಬಲ ಬೆಲೆ ಖಾತರಿಯಾಗಿ ದೊರೆಯುವಂತೆ ಬೆಂಬಲ ಬೆಲೆ ಕಾನೂನು ಮಾಡಬೇಕು. ಅಗ್ಗದ ದರದ ಆಮದು ದಾಸ್ತಾನಿನ ಮೇಲೆ ಅಗತ್ಯ ಅಮದು ಸುಂಕ ಹಾಕಿ ಕಾಫಿ ಬೆಳೆಗಾರರ ಸಂರಕ್ಷಣೆಗೆ ಮುಂದಾಗಬೇಕು.
2. ಕಾಫಿ ಬೆಳೆಗಾರರ ಸಾಲ ಮನ್ನಾ ಮಾಡಬೇಕು. ಹೆಚ್ಚುತ್ತಿರುವ ಉತ್ಪಾದನಾ ವೆಚ್ಚಕ್ಕನುಸಾರವಾಗಿ ಅಗತ್ಯ ಸಾಲವನ್ನು ಕಡಿಮೆ ಬಡ್ಡಿದರದಲ್ಲಿ ಎಲ್ಲರಿಗೂ ದೊರೆಯುವಂತೆ ಕ್ರಮವಹಿಸಬೇಕು. ರಸಗೊಬ್ಬರ ಕ್ರಿಮಿನಾಶಕ ಸೇರಿದಂತೆ ಕೃಷಿ ಯಂತ್ರೋಪಕರಣಗಳಿಗೆ ಸಬ್ಸಿಡಿ ನೀಡಬೇಕು.
3. ತಕ್ಷಣವೇ ಪ್ರಕೃತಿ ವಿಕೋಪಕ್ಕೆ ಅಗತ್ಯ ಪರಿಹಾರವನ್ನು ಘೋಷಿಸಬೇಕು. ಬೆಳೆ ವಿಮೆಯನ್ನು ವೈಜ್ಞಾನಿಕವಾಗಿ ಜಾರಿಮಾಡಬೇಕು.
4. ಸರ್ಕಾರಿ ಹಾಗೂ ಕೊಡಗು ಜಿಲ್ಲೆಯ ಪೈಸಾರಿ ಜಮೀನು ಸೇರಿದಂತೆ ಎಲ್ಲಾ ಬಗರ್ ಹುಕುಂ ಸಾಗುವಳಿದಾರರಿಗೆ ಹಕ್ಕುಪತ್ರ ನೀಡಬೇಕು. ಹೆಚ್ಚಿನ ಸಾಗುವಳಿಯನ್ನು ಗುತ್ತಿಗೆಗೆ ನೀಡಲು ಕ್ರಮವಹಿಸಬೇಕು.
5. ಸಾರ್ವಜನಿಕ ಹಾಗೂ ಸಹಕಾರಿ ರಂಗದಲ್ಲಿ ಇನ್ಸ್‌ಟಂಟ್ ಕಾಫಿ ಉದ್ದಿಮೆನ್ನು ಸ್ಥಾಪಿಸಿ ಕಾಫಿ ಬೆಳೆಗಾರರ ಮೌಲ್ಯವರ್ಧನೆಗೆ ಕ್ರಮವಹಿಸಬೇಕು. ದೇಶದಲ್ಲಿ ಆಂತರಿಕ ಕಾಫಿ ಮಾರುಕಟ್ಟೆಯನ್ನು ವಿಸ್ತರಿಸಲು ಕ್ರಮವಹಿಸಬೇಕು. ಇದಕ್ಕಾಗಿ ಬಂಡವಾಳ ಹೂಡಬೇಕು.
6. ಆನೆ ಮತ್ತಿತರೇ ಕಾಡು ಪ್ರಾಣಿಗಳ ಹಾವಳಿಗೆ ಶಾಶ್ವತ ಪರಿಹಾರವನ್ನು ಸರ್ಕಾರ ರೂಪಿಸಬೇಕು. ●

JANASHAKTHI KANNADA VARA PATRIKE OCTOBER 15-21, 2018 Price: Rs. 10/- Date of Publication: 12 OCTOBER 2018 RNI No. KARKAN /2006/17926 Posted on every Saturday
"REGISTERD" Postal Reg. No. RNP/KA/BGS/2078/2016-18 Posted at Bangalore PSO, BG - 560026 Licensed to Post without prepayment License No. WPP-283

ಏಕರೂಪ ನಾಗರಿಕ ಸಂಹಿತೆಯೋ ಸಮಾನತೆಯೋ?

ಕೆ.ಎಸ್. ವಿಮಲ



ಕುಟುಂಬದೊಳಗಿನ ಸಮಾನತೆಗೆ ಆದ್ಯತೆ ಎಂಬ ನೆಲೆಯಲ್ಲಿ ರಾಷ್ಟ್ರೀಯ ಕಾನೂನು ಆಯೋಗ ನೀಡಿದ ವರದಿಯ ಶಿಫಾರಸುಗಳನ್ನು ಒಕ್ಕೊರಲಿನಿಂದ ಸ್ವಾಗತಿಸಲಾಯಿತು. ದಿನಾಂಕ 6 ಅಕ್ಟೋಬರ್ ಇಂಥಹ ಒಂದು ಘಟನೆಗೆ ಸಾಕ್ಷಿಯಾಯಿತು. ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆ, ಪ್ರಜ್ಞಾ ಕಾನೂನು ಸಲಹಾ ಸಮಿತಿ ಜಂಟಿಯಾಗಿ ಬೆಂಗಳೂರಿನಲ್ಲಿ 'ಸಮಾನತೆ ಮತ್ತು ಏಕರೂಪತೆ– ಸಮಾನ ಹಕ್ಕು ಸಮಾನ ಕಾಯ್ದೆ' ಕುರಿತು ಏರ್ಪಡಿಸಿದ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ಸಂಪನ್ಮೂಲ ವ್ಯಕ್ತಿಗಳಲ್ಲಿ ಏಕರೂಪವಾಗಿ ಸಮಾನತೆಯ ಪರವಾಗಿ ಅಭಿಪ್ರಾಯ ಮೂಡಿ ಬಂತು.

ಮಂಗಳೂರಿನ ಯುವ ವಕೀಲರು ಸಾಮಾಜಿಕ ಚಿಂತಕರು ಆದ ಪುನೀತ್ ಅಪ್ಪು ಸಂವಿಧಾನದ ಡೈರೆಕ್ಟೀವ್ ಪ್ರಿನ್ಸಿಪಲ್‌ನ ಆರ್ಟಿಕಲ್ 44 ಮತ್ತು ಸಮಾನತೆಯ ಕುರಿತು ಮಾತನಾಡುತ್ತ ದೇಶದ ಸಂವಿಧಾನದಲ್ಲಿರುವ ಹಲವು ಅಂಶಗಳನ್ನು ವಿವರಿಸುತ್ತ, ಸಮಾನತೆಯನ್ನು ಸಾಧಿಸದೇ ಏಕರೂಪತೆಯನ್ನು ತರಲು ಸಾಧ್ಯವಿಲ್ಲ. ಬಹುತ್ವ ಭಾರತ ಏಕರೂಪವನ್ನು ಪಡೆಯುವುದು ಸಾಧ್ಯವಿಲ್ಲವೆಂದು ಅಭಿಪ್ರಾಯ ಪಟ್ಟರು. ವಿವಿಧತೆಯನ್ನೇ ಉಸಿರಾಗಿ ಹೊಂದಿರುವ ಭಾರತದಲ್ಲಿ ಸಮಾನ ನಾಗರಿಕ ಹಕ್ಕನ್ನು ಜಾರಿಗೆ ತರುವುದು ಎಂದರೆ ಬಹು ಸಂಖ್ಯಾತ ವಾದವನ್ನು ಅಲ್ಪ ಸಂಖ್ಯಾತರ ಮೇಲೆ ಹೇರುವ ಯತ್ನವಾಗುತ್ತದೆ ಎಂದರು.



ಸಮಾನ ಹಕ್ಕು ಸಮನ ಕಾನೂನುಗಳ ಕುರಿತು ಮಾತನಾಡಿದ ಖ್ಯಾತ ಪತ್ರಕರ್ತೆ ಸಿ.ಜಿ.ಮಂಜುಳಾ ಇತ್ತೀಚಿನ ಸರ್ವೋಚ್ಚ ನ್ಯಾಯಾಲಯದ ಹಲವು ಮಹಿಳಾ ಪರ ತೀರ್ಪುಗಳನ್ನು ಉಲ್ಲೇಖಿಸಿ ಸಮಾನತೆಯತ್ತ ಒಂದೊಂದೇ ಹೆಜ್ಜೆ ಮುಂದಿಡುತ್ತಿರುವುದನ್ನು ಪ್ರಸ್ತಾಪಿಸಿದರು. ಬಹುತ್ವ ಭಾರತದಲ್ಲಿರುವ ವಿವಿಧ ಧರ್ಮಗಳ, ಸಂಸ್ಕೃತಿಗಳ ಆಚರಣೆಗಳಲ್ಲಿರುವ ವೈವಿಧ್ಯತೆಯನ್ನು ಮೊಟಕುಗೊಳಿಸುವ ನಿಟ್ಟಿನಲ್ಲಿ ಏಕರೂಪತೆಯನ್ನು ತರುವುದು ಸಲ್ಲದು. ಈ ನಿಟ್ಟಿನಲ್ಲಿ ಕಾನೂನು ಆಯೋಗದ ಶಿಫಾರಸುಗಳನ್ನು ವ್ಯಾಪಕವಾಗಿ ಚರ್ಚೆ ನಡೆಸುವ ಅಗತ್ಯವಿದೆ ಎಂದರು.

ಡಾ.ಚಮನ್ ಫರ್ಜಾನಾ ಸಾಮಾಜಿಕ ಕಾರ್ಯಕರ್ತರು, ಪ್ರಾಧ್ಯಾಪಕರು ಮಾತನಾಡಿ ಷರಿಯತ್ ನಲ್ಲಿ ಇಲ್ಲದ ಏಕಪಕ್ಷೀಯ ತ್ರಿವಳಿ ತಲಾಕ್, ಮತ್ತು ಮುಸ್ಲಿಂ ರ ಪವಿತ್ರ ಗ್ರಂಥ ಕುರಾನ್ ಮಹಿಳೆಯರಿಗೆ ಕೊಟ್ಟ ಹಕ್ಕುಗಳೇನು, ಮತ್ತು ಸಧ್ಯ ಕೇಂದ್ರ ಸರ್ಕಾರ ಸುಗ್ರೀವಾಜ್ಞೆ ಮೂಲಕ ಜಾರಿಗೆ ತಂದ ತ್ರಿವಳಿ ತಲಾಕ್ ನಿಷೇಧ ಮಸೂದೆ ಮುಸ್ಲಿಂ ಮಹಿಳೆಯರ ಬದುಕನ್ನು ಇನ್ನಷ್ಟು ಬರ್ಭರಗೊಳಿಸುವದರ ಕುರಿತು ಮಾತನಾಡಿದರು. ನಿಜವಾಗಿಯೂ ಮುಸ್ಲಿಂ ಸಮುದಾಯ ಮತ್ತು ಮಹಿಳೆಯರು ಎದುರಿಸುತ್ತಿರುವ ಹಲವು ಸಮಸ್ಯೆಗಳ ಬಗ್ಗೆ ಕಣ್ಣುಮುಚ್ಚಿಕೊಂಡಿರುವ ಕೇಂದ್ರ ಸರ್ಕಾರ ಈ ವಿಷಯದಲ್ಲಿ ತರಾತುರಿ ತೋರಿಸುತ್ತಿರುವುದೇಕೆ ಎಂದು ಪ್ರಶ್ನಿಸಿದರು. ಇದು ಜನರ ಗಮನವನ್ನು ನೈಜ ಸಂಗತಿಗಳಿಂದ ದೂರ ಸೆಳೆಯುವ ಹುನ್ನಾರೆಂದು ಪ್ರತಿಪಾದಿಸಿದರು.

ಪ್ರತಿಕ್ರಿಯೆಯಲ್ಲಿ ಪಾಲ್ಗೊಂಡ ಪ್ರಾಧ್ಯಾಪಕರು, ಚಿಂತಕರೂ ಆದ ಡಾ.ಕಿರಣ್ ಗಾಜನೂರು ಮತ್ತು ಲೇಖಕಿ ಡಾ.ಷಾಕಿರಾ ಖಾನಂ ಒಟ್ಟು ಸಮಸ್ಯೆಗಳ ಹಲವು ಮಜಲುಗಳನ್ನು ಪ್ರಸ್ತಾಪಿಸಿದರು.

ಪ್ರಾಸ್ತಾವಿಕವಾಗಿ ಪ್ರಜ್ಞಾ ಕಾನೂನು ಸಲಹಾ ಸಮಿತಿಯ ಅಧ್ಯಕ್ಷರಾದ ವಿಮಲಾ. ಕೆ.ಎಸ್. ಶಾ ಬಾನೋ ರಿಂದ ಶಾಯಿರಾ ಬಾನೋ ವರೆಗಿನ ಬೆಳವಣಿಗೆಗಳ ಬಗ್ಗೆ ಪ್ರಸ್ತಾಪಿಸಿ 1999 ರಲ್ಲಿ ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆ ಏಕರೂಪ ನಾಗರಿಕ ಸಂಹಿತೆ ಯ ಕುರಿತು ನಡೆಸಿದ ರಾಷ್ಟ್ರೀಯ ಸಮಾವೇಶದ ಗೊತ್ತುವಳಿಯ ಬಗ್ಗೆ ಪ್ರಸ್ತಾಪಿಸಿದರು. 'ಕುಟುಂಬದೊಳಗೆ ಮೊದಲು ಸಮಾನತೆ, ಸಮುದಾಯದ ಒಳಗೆ ಸಮಾನ ಹಕ್ಕುಗಳು ಅವಕಾಶಗಳು' ಸ್ಥಾಪಿತವಾದ ನಂತರ ಸಮುದಾಯಗಳ ಮಧ್ಯೆ ಸಮಾನತೆ ಅಥವಾ ಏಕರೂಪತೆಯ ಬಗ್ಗೆ ಮಾತನಾಡಬಹುದೆಂಬ ಅಭಿಪ್ರಾಯವನ್ನು ಎರಡು ದಶಕಗಳ ಹಿಂದೆ ಜನವಾದಿ ಹೇಳಿದ ಅಭಿಪ್ರಾಯ. ಅದನ್ನೇ ಈಗ ಕಾನೂನು ಆಯೋಗ ದೃಢೀಕರಿಸಿದೆ. ಅಂದಿಗಿಂತ ಹೆಚ್ಚೇನೂ ಬದಲಾವಣೆ ಕಾಣದ ಸ್ಥಿತಿ ಇರುವಾಗ ಕೇಂದ್ರ ಸರ್ಕಾರ ರಾಜಕೀಯ ಕಾರಣಗಳಿಗಾಗಿ ತ್ರಿವಳಿ ತಲಾಖ್ ನಿಷೇಧಿಸುವ ಮಸೂದೆಯನ್ನು ತಂದಿದೆ. ಷಾ ಬಾನೋ ಸಂದರ್ಭದ ರಾಜೀವ್ ಗಾಂಧಿ ಸರ್ಕಾರ ಇಂದಿನ ಮೋದಿ ಸರ್ಕಾರ ಈ ವಿಷಯಗಳಲ್ಲಿ ಹೆಚ್ಚಿನ ವ್ಯತ್ಯಾಸವನ್ನು ಹೊಂದಿಲ್ಲದ್ದನ್ನು ಸಂವಾದ ಗುರುತಿಸಿತು. ವಿವಿಧ ಮಹಿಳಾ ಸಂಘಟನೆಗಳ ಕಾರ್ಯಕರ್ತರಾದ ಮಧು ಭೂಷಣ್, ಪ್ರತಿಭಾ, ಜಾಹಿರಾ ಶಿರೀನ್, ಸುಮಾದೇವಿ ಟಿ.ಎನ್. ಡಾ.ಅಶ್ವಿನಿ ದೇವಿ, ಕವಿತಾ ಶ್ರೀನಿವಾಸ್ ತಮ್ಮ ಅಭಿಪ್ರಾಯಗಳನ್ನು ಮಂಡಿಸಿದರು.

ನಗರದ ಹಲವು ಕಾಲೇಜುಗಳಿಂದ ಬಂದ ಯುವ ವಿದ್ಯಾರ್ಥಿಗಳು ಸಂವಾದದಲ್ಲಿ ಪಾಲ್ಗೊಂಡರು. ಜನವಾದಿ ಮಹಿಳಾ ಸಂಘಟನೆಯ ರಾಜ್ಯ ಪ್ರಧಾನ ಕಾರ್ಯದರ್ಶಿ ಗೌರಮ್ಮ ಅಧ್ಯಕ್ಷತೆ ವಹಿಸಿದ್ದರು. ಉತ್ತರ ಜಿಲ್ಲಾ ಕಾರ್ಯದರ್ಶಿ ಕೆ.ಎಸ್.ಶಾರದಾ ಸ್ವಾಗತವನ್ನು ಮಾಡಿದರು. ದಕ್ಷಿಣ ಜಿಲ್ಲಾ ಸಂಚಾಲಕಿ ಕೆ.ಶ್ರೀಮತಿ ವಂದಿಸಿದರು. ರಾಜ್ಯ ಉಪಾಧ್ಯಕ್ಷೆ ಕೆ.ಎಸ್.ಲಕ್ಷ್ಮಿ ಕಾರ್ಯಕ್ರಮ ನಿರ್ವಹಣೆ ಮಾಡಿದರು. ನಾದ ಮಣಿನಾಲ್ಕೂರು ರವರು ಏಕತಾರಿಯೊಂದಿಗೆ ಹಾಡಿದ 'ನಮ್ಮ ಎಲುಬಿನ ಹಂದರದೊಳಗೆ ಮಂದಿರವಿದೆ' ಹಾಡಿನೊಂದಿಗೆ ಕಾರ್ಯಕ್ರಮವನ್ನು ಪ್ರಾರಂಭಿಸಲಾಯಿತು.

ಬೆಂಗಳೂರಿನಲ್ಲಿ ಅಕ್ಟೋಬರ್ 22, 2018

ಕಾಫಿ ಬೆಳೆಗಾರರ ಅಖಿಲ ಭಾರತ ಸಮಾವೇಶ



ಕಾಫಿ ಬೆಳೆಗಾರರ ಸಮಸ್ಯೆಗಳ ಕುರಿತು ಚರ್ಚಿಸಲು ಮತ್ತು ಅವುಗಳ ಪರಿಹಾರದ ದಾರಿಯನ್ನು ನಿರ್ಧರಿಸಲು ಅಖಿಲ ಭಾರತ ಕಿಸಾನ್ ಸಭಾದ ನೇತೃತ್ವದಲ್ಲಿ ಹಾಗೂ ಕರ್ನಾಟಕ ಬೆಳೆಗಾರರ ಒಕ್ಕೂಟದ ಸಹಯೋಗದಲ್ಲಿ ಕಾಫಿ ಬೆಳೆಗಾರರ ಅಖಿಲ ಭಾರತ ಸಮಾವೇಶವನ್ನು ಬೆಂಗಳೂರಿನ ಎಸ್.ಸಿ.ಎಂ ಹೌಸ್‌ನಲ್ಲಿ ಅಕ್ಟೋಬರ್ 22, 2018 ರಂದು ಸಂಘಟಿಸಲಾಗುತ್ತಿದೆ. ಈ ಸಮಾವೇಶವು ಕಾಫಿ ಬೆಳೆಗಾರರ ಸಮಸ್ಯೆಗಳ ಪರಿಹಾರಕ್ಕೊಂದು ದಿಕ್ಸೂಚಿಯಾಗಲಿದೆಯೆಂಬುದು ಸಂಘಟಕರ ನಿರೀಕ್ಷೆ.

ಬಹುರಾಷ್ಟ್ರೀಯ ಸಂಸ್ಥೆಗಳ ಪರವಾದ ಜಾಗತೀಕರಣ, ಉದಾರೀಕರಣ ಮತ್ತು ಖಾಸಗೀಕರಣದ ನೀತಿಗಳನ್ನು ದೇಶ ಅಪ್ಪಿಕೊಂಡ ನಂತರ ದೇಶದ ಕಾಫಿ ಉದ್ದಿಮೆ ಮತ್ತು ಕಾಫಿ ಕೃಷಿಯು ಗಂಭೀರ ಹಾನಿಗೊಳಗಾಗಿರುವುದು ಈಗ ಸರ್ವವಿದಿತ.. ಕಾಫಿ ಉದ್ಯಮದಲ್ಲಿ ಬೆಳೆಯುತ್ತಿರುವ ಗುತ್ತೇದಾರಿಕೆ ಮತ್ತು ಅಗ್ಗದರದ ಆಮದು ದಾಸ್ತಾನುಗಳಿಂದ ಮುಖ್ಯವಾಗಿ ಕಾಫಿ ಬೆಳೆಗಾರರು ಮತ್ತು ಕೃಷಿಕರು ತೀವ್ರತರನಾದ ಬಿಕ್ಕಟ್ಟಿಗೊಳಗಾಗಿದ್ದಾರೆ.

ದೇಶದ ಕಾಫಿ ಉತ್ಪಾದನೆಯಲ್ಲಿ ಶೇಕಡ 90 ಕ್ಕಿಂತ ಹೆಚ್ಚು ಕೊಡುಗೆ ಸಣ್ಣ ಬೆಳೆಗಾರರದ್ದಾಗಿದೆ. ದೇಶದಲ್ಲಿಯೇ ಅತಿ ಹೆಚ್ಚು ಕಾಫಿ ಬೆಳೆಯುವ ಕರ್ನಾಟಕ ರಾಜ್ಯ ಇವುಗಳ ಜೊತೆಗೆ ಅತಿವೃಷ್ಠಿ, ಅನಾವೃಷ್ಠಿ, ಆನೆ ಹಾವಳಿ ಮತ್ತು ಸಾಗುವಳಿ ಭೂಮಿಗೆ ಹಕ್ಕುಪತ್ರವಿಲ್ಲದ ಅತಂತ್ರ ಸ್ಥಿತಿಯಿಂದ ನಲುಗಿ ಹೋಗಿದೆ. ಏರುತ್ತಿರುವ ಉತ್ಪಾದನಾ ವೆಚ್ಚ ಮತ್ತು ಕುಸಿಯುತ್ತಿರುವ ಇಳುವರಿ ಹಾಗೂ ಕಾಫಿ ಬೆಳೆಯ ಬೆಲೆ ಕುಸಿತದಿಂದ ಬೆಳೆಗಾರರು ಸಾಲಬಾಧಿತರಾಗಿ ಆತ್ಮಹತ್ಯೆಯ ದಾರಿ ತುಳಿಯುವಂತಾಗಿದೆ. ಈ ಬೆಳೆನಷ್ಟದಿಂದ ಪಾರಾಗಲು ಕರಿ ಮೆಣಸು, ಏಲಕ್ಕಿ ಮತ್ತಿತರ ಬೆಳೆಗಳನ್ನು ಅಪ್ಪಿಕೊಂಡರೂ ಅವುಗಳ ಬೆಲೆ ಕುಸಿತವು ಬೆಳೆಗಾರರನ್ನು ಜರ್ಜರಿತರನ್ನಾಗಿಸಿದೆ. ಜೊತೆಗೆ ಕೊಡಗು, ಚಿಕ್ಕಮಗಳೂರು ಮತ್ತು ಹಾಸನದ ಕಾಫಿ ಬೆಳೆಗಾರರು ಸ್ಥಳೀಯ ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ.

ಇದುವರೆಗಿನ ಅಧ್ಯಯನದ ಅನುಭವದಂತೆ, ಸಾಕಷ್ಟು ಶ್ರಮಪಟ್ಟು ಮತ್ತು ಸಂಕಷ್ಟದಲ್ಲಿ ಕಾಫಿ ಪ್ರೇಮಿಗಳ ಬಾಯಿಗೆ ಅತ್ಯುತ್ಕೃಷ್ಠ ಸ್ವಾದ ನೀಡುವ ಬೆಳೆಗಾರರಿಗೆ ಈಗಲೂ ಕಾಫಿ ಬೆಲೆಯ ಶೇ 16 ರಷ್ಟು ಮಾತ್ರವೇ ದೊರೆಯುತ್ತಿರುವುದು ತೀವ್ರ ಆತಂಕಕಾರಿಯಾಗಿದೆ. ಶೇ 84 ರಷ್ಠು ಮಧ್ಯವರ್ತಿಗಳ ಹಾಗೂ ಬಹುರಾಷ್ಟ್ರೀಯ ಸಂಸ್ಥೆಗಳ ಪಾಲಾಗಲು ಕೇಂದ್ರ ಹಾಗೂ ರಾಜ್ಯ ಸರಕಾರಗಳ ನೀತಿಗಳು ಕಾರಣವಾಗಿದ್ದು ಇದು ಖಂಡನೀಯವಾಗಿದೆ.

ಕೇಂದ್ರ ಹಾಗೂ ರಾಜ್ಯ ಸರಕಾರಗಳು ಡಾ.ಎಂ.ಎಸ್.ಸ್ವಾಮಿನಾಥನ್ ಕೃಷಿ ಆಯೋಗದ ಸಲಹೆಯಂತೆ ಕಾಫಿ ಬೆಳೆಯ ಒಟ್ಟು ಉತ್ಪಾದನಾ ವೆಚ್ಚಕ್ಕೆ ಶೇ 50 ರಷ್ಟು ಲಾಭಾಂಶ ಸೇರಿಸಿ ನಿಗದಿಸಿದ ಬೆಂಬಲ ಬೆಲೆ ಖಾತರಿಯಾಗಿ ದೊರೆಯುವಂತೆ ಅದನ್ನು ಕಾನೂನಾಗಿಸಿ, ಕಾಫಿ ಬೆಲೆಯ ಸಿಂಹಪಾಲು ಕಾಫಿ ಬೆಳೆಗಾರರಿಗೆ ನೇರವಾಗಿ ದೊರೆಯುವಂತೆ ಮಾಡುವಲ್ಲಿ ಆಸಕ್ತಿಹೊಂದಿಲ್ಲ. ಬದಲಿಗೆ, ಕಾಫಿ ಕೃಷಿ ಮತ್ತು ಉದ್ಯಮವನ್ನು ಸಣ್ಣ ಬೆಳೆಗಾರರಿಂದ ಅವರ ಹಿತ ಬಯಸುವ ಸಾರ್ವಜನಿಕ ಉದ್ಯಮದಿಂದ ಬಿಡಿಸಿ ಬಹುರಾಷ್ಟ್ರೀಯ ಸಂಸ್ಥೆಗಳ ಕೈಗೆ ವರ್ಗಾಯಿಸುವಲ್ಲಿ ಆಸಕ್ತವಾಗಿರುವುದೇ ಪರಿಸ್ಥಿತಿಯ ಕ್ರೌರ್ಯವಾಗಿದೆ.

ಆದ್ದರಿಂದ ಒಟ್ಟು ಕಾಫಿ ಬೆಳೆಯ ಮತ್ತು ಉದ್ದಿಮೆಯ ಒಟ್ಟು ಪರಿಸ್ಥಿತಿಯನ್ನು ಗಮನಿಸುವುದು

ಪುಟ 15 ಕ್ಕೆ

JANASHAKTHI KANNADA VARA PATRIKE: Printed, Published by **G.V.SRIRAMA REDDY**, EMS Bhavana, No.37/A, 8th Cross, Mahalakshmi Layout, BANGALORE-560086 Karnataka on behalf of **COMMUNIST PARTY OF INDIA (MARXIST)** and **Printed at : Kriya Prakashana,** No. 12, 18th Cross, Sampangirama Nagar, Bangalore 560027
Editor : **G.V.SRIRAMA REDDY**